ಜೆ. ಸಿ. ಕುಮಾರಪ್ಪ

ಗಾಂಧೀ ಅರ್ಥಶಾಸ್ತ್ರಜ್ಞ

ಲೇಖಕರು : ಟಿ. ಕೃಷ್ಣಮೂರ್ತಿ
ಅನುವಾದಕರು : ನೀ. ಕಸ್ತೂರಿ



ಪ್ರಕಾಶಕರು :

ಜೆ. ಸಿ. ಕುಮಾರಪ್ಪ ಮೆಮೋರಿಯಲ್ ಪಬ್ಲಿಕ್ ಟ್ರಸ್ಟ್

ನಂ. 62, 34ನೇ ಅಡ್ಡರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು - 560 041.

ದೂರವಾಣಿ : 26548281 ಮೊಬೈಲ್ : 98453 32065

ಜೆ. ಸಿ. ಕುಮಾರಪ್ಪ

ಗಾಂಧೀ ಅರ್ಥಶಾಸ್ತ್ರಜ್ಞ

ಮೂಲ ಇಂಗ್ಲಿಷ್

ಟಿ. ಕೃಷ್ಣಮೂರ್ತಿ

ಕನ್ನಡಾನುವಾದ

ನೀಲತ್ತಹಳ್ಳಿ ಕಸ್ತೂರಿ

ಪ್ರಕಾಶಕರು :

ಜೆ. ಸಿ. ಕುಮಾರಪ್ಪ ಸ್ಮಾರಕ ಸಾರ್ವಜನಿಕ ಟ್ರಸ್ಟ್

ಬೆಂಗಳೂರು.

J. C. Kumarappa - Gandhi Artha Shastragna
Original English - **T. Krishnamurthy**
Kannada Version - **Neelathahalli Kasturi**

Published by :
J. C. KUMARAPPA MEMORAL PUBLIC TRUST,
Bangalore.

First Edition - 2006

Copies - 500

Pages - 64

Price - Rs. 20/-

ಜೆ. ಸಿ. ಕುಮಾರಪ್ಪ

ಗಾಂಧೀ ಅರ್ಥಶಾಸ್ತ್ರಜ್ಞ

ಮೂಲ ಇಂಗ್ಲೀಷ್ - ಟಿ. ಕೃಷ್ಣಮೂರ್ತಿ
ಕನ್ನಡಾನುವಾದ - ನೀಲತ್ತಹಳ್ಳಿ ಕಸ್ತೂರಿ

ಪ್ರಕಟಣೆ :
ಜೆ. ಸಿ. ಕುಮಾರಪ್ಪ ಸ್ಮಾರಕ ಸಾರ್ವಜನಿಕ ಟ್ರಸ್ಟ್, ಬೆಂಗಳೂರು

ಮುದ್ರಣ : ಜಯಂತಿ ಪ್ರಿಂಟರಿ
8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003.

ಮುನ್ನುಡಿ

ಸ್ವಾತಂತ್ರ್ಯ ಹೋರಾಟದಲ್ಲಿ, "ಅಂತ್ಯೋದಯ" ನಮ್ಮ ಅಭಿವೃದ್ಧಿ ಚಿಂತಕರ ವಿಚಾರವಾಗಿತ್ತು. ಅಂತಹ ಅಭಿವೃದ್ಧಿಯಲ್ಲಿ ಅವರ ನಿಷ್ಠೆ ಪ್ರಶ್ನಾತೀತವಾಗಿತ್ತು. ಆ ವಿಷಮ ವರ್ಷಗಳಲ್ಲಿ ನಮಗೆ ಧ್ಯೇಯನಿಷ್ಠರ ನಾಯಕತ್ವ ದೊರಕುವ ಭಾಗ್ಯವೊದಗಿತ್ತು. ಗಾಂಧೀಜಿ, ನೆಹರು, ಪಟೇಲ್, ಮೌಲಾನಾ ಆಜಾದ್, ಕುಮಾರಪ್ಪ, ವಿನೋಬಾ ಭಾವೆ, ರಾಜೇಂದ್ರಪ್ರಸಾದ್, ರಾಧಾಕೃಷ್ಣನ್ ಮುಂತಾದ ಅನೇಕರು ನಮ್ಮನ್ನು ಮುನ್ನಡೆಸಿದರು. ಭಾರತದ ಭವಿಷ್ಯದ ಅಭಿವೃದ್ಧಿ ಮತ್ತು ದರ್ಶನಗಳ ತತ್ವಗಳ ವಿಷಯದಲ್ಲಿ ಅವರು ರಾಜಿಗೆ ಕಿಂಚಿತ್ತೂ ಸಿದ್ಧರಾಗಿರಲಿಲ್ಲ. ಇಂದಿನ ಪೀಳಿಗೆ ಅವರುಗಳ ನಿರೀಕ್ಷೆಯನ್ನು ವಿಫಲಗೊಳಿಸಿರುವುದು ವಿಷಾದನೀಯ. ಡಾ|| ಜೆ. ಸಿ. ಕುಮಾರಪ್ಪ ಈ ದರ್ಶನವನ್ನು, ಈ ಬದ್ಧತೆಯನ್ನು ಹೊಂದಿದ್ದರು. ಆದರೆ ಅದನ್ನೆಲ್ಲ ಇಂದಿನ ಅಭಿವೃದ್ಧಿ ಚಿಂತಕರು ಗಮನಿಸಿಯೆ ಇಲ್ಲ. ಡಾ|| ಜೆ. ಸಿ. ಕುಮಾರಪ್ಪನವರಿಗೆ ಹೋಲಿಸಬಹುದಾದ ನಾಯಕರು, ವಿದ್ವಾಂಸರು ಇಂದಿನ ಕಾಲದಲ್ಲಿ ಅತಿ ವಿರಳ. ಕುಮಾರಪ್ಪನವರ ನಿಷ್ಠತೆಯ ಜೀವನವೇ ಒಂದು ಸಂದೇಶ.

ಜೋಸೆಫ್ ಚೆಲ್ಲದುರೈ ಕಾರ್ನಿಲಿಯಸ್ ಜೆ. ಸಿ. ಕುಮಾರಪ್ಪ ಎಂದೇ ಪ್ರಸಿದ್ಧರು. ಅವರು ಹುಟ್ಟಿದ್ದು ಜನವರಿ 4, 1892 ರಂದು, ಒಂದು ನಿಷ್ಠಾವಂತ ಕ್ರೈಸ್ತ ಕುಟುಂಬದಲ್ಲಿ. ಸಿರಾಕ್ಯೂಸ್‌ನಿಂದ ವ್ಯವಹಾರ ಆಡಳಿತ ವಿಷಯದಲ್ಲಿ ಬಿ.ಎಸ್.ಸಿ., ಪದವಿಯನ್ನು ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಪ್ರೊ|| ಸೆಲಿಗ್‌ಮನ್ ಅವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರದಲ್ಲಿ ಮಾಸ್ಟರ್ ಡಿಗ್ರಿಯನ್ನು ಪಡೆದುಕೊಂಡರು. 'ಸಾರ್ವಜನಿಕ ಹಣಕಾಸು ಮತ್ತು ಬಡತನ' ಕುರಿತ ಪ್ರೌಢಪ್ರಬಂಧ ಸ್ವಾತಂತ್ರ್ಯಕ್ಕೆ ಎಷ್ಟೋ ಮುಂಚೆಯೆ ಭಾರತದ ಬಡತನದ ನಾಡಿಯನ್ನು ಹಿಡಿದು ನೋಡಿತ್ತು. ಆ ಹಿನ್ನಲೆಯಿಂದ ಬಡತನದ ಸಮಸ್ಯೆಯತ್ತ ಗಮನ ಹರಿಸಿದ ವಿಚಾರಶೀಲರ ಸಂಖ್ಯೆ ಕಡಿಮೆ. ಕುಮಾರಪ್ಪ ಒಳ್ಳೆಯ ಸಂಬಳದ ಉದ್ಯೋಗದಲ್ಲಿ ಹಾಯಾಗಿ ಇರಬಹುದಿತ್ತು. ಆದರೆ ಅವರು ಭಾರತಕ್ಕೆ ಮರುಳಿದ ನಂತರ, ಮಹಾತ್ಮರ ಪ್ರಭಾವಕ್ಕೆ ಒಳಗಾಗಿ, ರಾಷ್ಟ್ರಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡರು. ತಮ್ಮ ಬುದ್ಧಿ ಪ್ರಖರತೆಯಿಂದ ಹಾಗೂ ರಾಷ್ಟ್ರೀಯ ಭಾವನೆಯಿಂದ ಅವರು ಮಹಾತ್ಮರ ಮನತುಂಬಿದರು. ಅವರ ಬುದ್ಧಿ ಸಾಮರ್ಥ್ಯವನ್ನು ಗೌರವಿಸಿ, ಗಾಂಧೀಜಿ ಅವರಿಗೆ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಡಾಕ್ಟರೇಟ್ (ಗ್ರಾಮೋದ್ಯೋಗ ಮತ್ತು ದಿವ್ಯತೆಗಳ ಡಾಕ್ಟರೇಟ್) ಪದವಿ ನೀಡಿದರು. ಅವರ "ಎಕನಾಮಿಕ್ಸ್ ಆಫ್ ಪೀಸ್" (ಶಾಂತಿಯ ಆರ್ಥಿಕತೆ) ಅವರ ಆರ್ಥಿಕ ದರ್ಶನದ ಸಾರ ಸಂಗ್ರಹ. ಆದರೆ ಅದನ್ನು ವಿಶ್ವವಿದ್ಯಾನಿಲಯದ ಅಧ್ಯಯನದ ಕ್ರಮಗಳಲ್ಲಿ ಸೇರಿಸುವುದು ಇರಲಿ. ಅರ್ಥಶಾಸ್ತ್ರಜ್ಞರು ಓದುವುದೇ ಅಪರೂಪ. ಅಭಿವೃದ್ಧಿ ಆರ್ಥಿಕತೆಯ ಸಾಹಿತ್ಯದಲ್ಲಿ ನಮಗೆ ಎದ್ದು ಕಾಣುವುದು ರಾಸ್ಟೋವ್ ಅವರ ಅಭಿವೃದ್ಧಿ ಹಂತಗಳ ಚಿಂತನೆ ಆದರೆ ಡಾ|| ಕುಮಾರಪ್ಪನವರು ಸಲಹೆ ಮಾಡಿದ ಆರ್ಥಿಕ ಚಟುವಟಿಕೆಗಳ ಹಂತಗಳು ಇನ್ನೂ

ಹೆಚ್ಚು ವ್ಯಾಪಕವಾದವು ಮತ್ತು ಅಭಿವೃದ್ಧಿ ಪರ ಆರ್ಥಿಕತೆಗಳ ಮಾನವೀಯ ಸಮಸ್ಯೆಗಳನ್ನು ಒಳಗೊಂಡವು ಎಂಬ ಸಂಗತಿಯನ್ನೇ ಮರೆತು ಬಿಡುತ್ತೇವೆ. 1942ರಲ್ಲಿ ಪ್ರಕಟವಾದ ಅವರ ಒಂದು ಲೇಖನ "ಸ್ಟೋನ್ ಫಾರ್ ಬ್ರೆಡ್" (ರೊಟ್ಟಿಗೆ ಕಲ್ಲು) ಅದರ ಸಲುವಾಗಿ ಅವರು ದಸ್ತಗಿರಿಯಾಗಿ ಮುಂಬೈ, ನಾಗಪುರಗಳಲ್ಲಿ ಒಂದೂವರೆ ವರ್ಷ ಸೆರೆಯಲ್ಲಿ ಇರಬೇಕಾಯಿತು. ಆ ಲೇಖನ ರಾಷ್ಟ್ರಪ್ರೇಮಿ, ಮಾನವೀಯ ಮಿಡಿತವುಳ್ಳ ಅರ್ಥಶಾಸ್ತ್ರಜ್ಞನ ನಿಜವಾದ ಪರಂಪರೆಗೆ ತಕ್ಕುದಾಗಿತ್ತು. 1949ರಲ್ಲಿ ಕುಮಾರಪ್ಪ ರೈತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಆ ಸಮಿತಿ, ಆ ಕಾಲದಲ್ಲಿ ಕೃಷಿ ರಂಗದ ಮುಂದೆ ಇದ್ದ ಸಮಸ್ಯೆಗಳನ್ನು ಎತ್ತಿ ತೋರಿಸಿತ್ತು. ಸ್ವಾರಸ್ಯವೆಂದರೆ ಆ ಸಮಸ್ಯೆಗಳಲ್ಲಿ, ಕೃಷಿ ಬೆಲೆ ಏರು-ಪೇರು, ಭೂಮಿಯ ಹಕ್ಕು, ಬೆಳೆ ಮತ್ತು ಜಾನುವಾರು ವಿಮೆ, ಧಾನ್ಯ-ಬ್ಯಾಂಕುಗಳು ಹಾಗೂ ಧಾನ್ಯ ಕಣಜಗಳು, ಕೃಷಿಯ ನವ ಪ್ರಯೋಗಗಳು, ಸಮತೋಲನದ ನೀರಾವರಿ ಅಭಿವೃದ್ಧಿ, ರೈತರ ಸಾಲಗಳು, ಕೃಷಿ ಕೈಗಾರಿಕೆಗಳು ಮತ್ತು ಗ್ರಾಮಕಲ್ಯಾಣ - ಈ ಎಲ್ಲ ವಿಷಯ ಸೇರಿದ್ದವು. ಇಂದಿಗೂ ಈ ಸಮಸ್ಯೆಗಳು ಹಾಗೆಯೇ ಉಳಿದುಕೊಂಡಿವೆ. ಇನ್ನೂ ಬಟ್ಟ ಬಯಲಾಗಿ ನಿಂತೇ ಇವೆ. ವಿಪರ್ಯಾಸವೆಂದರೆ, ಇಷ್ಟೆಲ್ಲ ಇದ್ದರೂ, ಕುಮಾರಪ್ಪ ನವರನ್ನು ಇತಿಹಾಸದ ಪುಸ್ತಕಗಳಲ್ಲಿ ಅಡಗಿಸಿಡಲಾಗಿದೆ. ಪಾಶ್ಚಾತ್ಯ ತರಬೇತಿಯ ಒತ್ತಡಕ್ಕೆ ಸಿಕ್ಕಿರುವ ಎಲ್ಲ ಬಗೆಯ ಅರ್ಥಶಾಸ್ತ್ರಜ್ಞರೂ, ಅವರ ಚಿಂತನೆಗಳಿಗೆ ಎಡೆಯನ್ನೇ ಕೊಡಲಿಲ್ಲ.

ಶ್ರೀ ಟಿ. ಕೃಷ್ಣಮೂರ್ತಿಯವರ ಈ ಪುಸ್ತಕ, ಜೆ. ಸಿ. ಕುಮಾರಪ್ಪ ಎಂಬ ಪಂಥಕ್ಕೂ ಅವರ ಆರ್ಥಿಕ ವಿಚಾರಕ್ಕೂ ಓದುಗರನ್ನು ಪರಿಚಯಿಸುವ ಒಂದು ನಿಖರ ಪ್ರಯತ್ನ. ಇದನ್ನು ನಿರರ್ಗಳವಾಗಿ, ನಿಜವಾದ ಗಾಂಧೀವಾದಿಯ ಪ್ರಮಾಣಪೂರ್ಣ ಶೈಲಿಯಲ್ಲಿ ಬರೆಯಲಾಗಿದೆ. ಇಲ್ಲಿ ಆಡಂಬರವಿಲ್ಲ. ಆದರೆ ಜೆ. ಸಿ. ಕುಮಾರಪ್ಪ ಮತ್ತು ಅವರ ಕಾರ್ಯಗಳನ್ನು ಮುಖ್ಯವಾಗಿ ತಿಳಿಯಬಯಸುವವರಿಗೆ ಉತ್ತಮ ಮಾಹಿತಿ ಇದೆ. ಡಾ|| ಕುಮಾರಪ್ಪನವರ ಚಿಂತನೆ ಬಹುಮಟ್ಟಿಗೆ ಅವರ ಕಾಲಕ್ಕೆ ಮುಂದಿನದಾಗಿತ್ತು ಎಂಬುದು ಇಲ್ಲಿ ನಿಚ್ಚಳವಾಗಿ ಕಾಣುತ್ತದೆ. ಮತ್ತು ಅವರ ಮೂಲಭೂತವೂ ಸ್ವೀಕೃತವೂ ಆದ ಜ್ಞಾನದ ವಿಶಾಲಭಿತ್ತಿಯನ್ನು ಗ್ರಹಿಸಲು ನಾವು ಇಂದೂ ಪ್ರಯತ್ನ ಪಡುವುದು ಅವಶ್ಯವಾಗಿದೆ.ಸ್ವಾತಂತ್ರ್ಯದ ನಂತರ ಹುಟ್ಟಿದ ನಮ್ಮಲ್ಲಿ ಅನೇಕರು, ಸ್ವಾತಂತ್ರ್ಯಪೂರ್ವಯುಗದ ಮಹಾವ್ಯಕ್ತಿಗಳ ಧೈರ್ಯವನ್ನಾಗಲಿ, ಬದ್ಧತೆಯನ್ನಾಗಲಿ ಪಡೆದಿದ್ದೇವೆ ಎಂದು ಹೆಮ್ಮೆ ಪಡಲಾರೆವು. ಆದರೆ ಅದನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ.

"ಕುಮಾರಪ್ಪನವರ ಮಾತಿನಲ್ಲೆ ಹೇಳುವುದಾದರೆ ಈಗ ಬೇಕಾಗಿರುವುದು ಪುನಾರಚನೆಗೆ ಸಾಮಗ್ರಿಗಳು ಅಲ್ಲ. ಆದರೆ ತತ್ವಗಳೊಂದಿಗೆ ಬದುಕುತ್ತೇವೆ ಮತ್ತು ಬದುಕಿನ ಬಗ್ಗೆ ಮನೋಭಾವಗಳನ್ನು ಬದಲಾಯಿಸಿಕೊಳ್ಳುತ್ತೇವೆ ಎಂದು ಮುಂದೆ ಬರಬಲ್ಲ ಜನರ ತಂಡ ಬೇಕಾಗಿದೆ".

ನಿಷ್ಠಾವಂತ ಗಾಂಧೀವಿಚಾರವಾದಿಗಳಾದ ಶ್ರೀ ಕೃಷ್ಣಮೂರ್ತಿಗಳ ಈ ವಿಚಾರ ಬದ್ಧತೆ, ಅವರಿಂದ ಈ ಲೇಖನ ಕಾರ್ಯವನ್ನು ಮಾಡಿಸಿದೆ. ಇಲ್ಲಿ ಅವರು ನಮಗೆ ಡಾ॥ ಕುಮಾರಪ್ಪನವರ ವಿಚಾರಗಳ ಅರಿವಿನ ಯಾತ್ರೆ ಮಾಡಿಸುತ್ತಾರೆ. ಈ ಕೃತಿ ಸ್ಫುಟವಾಗಿ ಓದಿಸಿಕೊಳ್ಳುತ್ತದೆ. ಜೀವನದ ಗಾತ್ರಕ್ಕಿಂತ ದೊಡ್ಡದಾದ ಸಂದೇಶವನ್ನು ನೀಡುತ್ತದೆ. ನನಗೆ ಭರವಸೆಯಿದೆ, ಇದು ಸಾಹಿತ್ಯಕ್ಕೆ ಅತ್ಯಂತ ಉತ್ತಮ ಸೇರ್ಪಡೆ, ಅದಕ್ಕಿಂತ ಮಿಗಿಲಾಗಿ ಇದು ಇಂದಿನ ವ್ಯಾಪಾರೀ ಮನೋಭಾವದ ವಿದ್ವಲ್ಲೋಕದ ಕಣ್ಣು ತೆರೆಯಿಸುವಂಥ ಕೃತಿ.

ಪ್ರೊ॥ ಆರ್. ಎಸ್. ದೇಶಪಾಂಡೆ

ಪ್ರಾಧ್ಯಾಪಕರು

ಕೃಷಿ ಅಭಿವೃದ್ಧಿ ಮತ್ತು ಗ್ರಾಮ ಪರಿವರ್ತನ ಕೇಂದ್ರ

ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯ ಸಂಸ್ಥೆ

ಬೆಂಗಳೂರು.

ಮೊದಲ ಮಾತು

ಮಹಾತ್ಮ ಗಾಂಧಿಯವರ ಕೊಡುಗೆಯನ್ನು ಇಡೀ ಜಗತ್ತು ಮಾನ್ಯಮಾಡುತ್ತದೆ. ಆದರೆ ಭಾರತದಲ್ಲಿ ನಾವು ಅವರನ್ನು ಮರೆಯುತ್ತಿದ್ದೇವೆ. ಅವರು ತೋರಿದ ದಾರಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಜೆ. ಸಿ. ಕುಮಾರಪ್ಪನವರು ಗಾಂಧೀಜಿ ತೋರಿದ ಮಾರ್ಗದಲ್ಲಿ ನಡೆಯಲು ತಮ್ಮ ಬಾಳನ್ನೇ ಅರ್ಪಿಸಿಕೊಂಡರು. ಗಾಂಧೀಜಿ ಗ್ರಾಮಾಭ್ಯುದಯ ಕಾರ್ಯವನ್ನು ಅವರಿಗೆ ವಹಿಸಿದರು. ಶಾಂತಿಯ ಆರ್ಥಿಕತೆಯನ್ನು ಸ್ಥಾಪಿಸಲು ಕುಮಾರಪ್ಪನವರು ತಮ್ಮ ಇಡೀ ಜೀವನವನ್ನು ಮೀಸಲಿಟ್ಟರು. ಅವರದೇ ಮಾತಿನಲ್ಲಿ ಹೇಳುವುದಾದರೆ. ಅವರ ಪರಿಕಲ್ಪನೆ ಇದು.

"ಯಾವುದೇ ಯೋಜನೆ ದೇಶದ ಕಚ್ಚಾವಸ್ತುಗಳನ್ನು ಶೋಷಿಸಿ, ಹೆಚ್ಚು ಅಂತಃಸ್ವತ್ವವುಳ್ಳ ಮಾನವಶಕ್ತಿಯನ್ನು ನಿರ್ಲಕ್ಷಿಸುವುದೊ ಅದು ಸಮತೂಕವಿಲ್ಲದ್ದು. ಅದು ಮಾನವ ಸಮತ್ವವನ್ನು ಎಂದೂ ತರಲಾರದು."

ಅವರು ಸ್ವದೇಶಿಯನ್ನು ಪ್ರತಿಪಾದಿಸಿದರು. ಅವರ ದೃಷ್ಟಿಯಲ್ಲಿ, "ಸ್ವದೇಶಿ ಎಂದರೆ ಭಾರತದ ಇಡೀ ಮಾನವ ಶಕ್ತಿಯ ಅತ್ಯಂತ ಶ್ರೇಷ್ಠ ಉಪಯೋಗ ಮತ್ತು ಭಾರತದ ಕಚ್ಚಾ ಪದಾರ್ಥಗಳನ್ನು ಹೊರಕ್ಕೆ ಕಳಿಸಿ, ಸಿದ್ಧ ವಸ್ತುಗಳನ್ನು ಭಾರಿ ಬೆಲೆತೆತ್ತು ಮರು ಖರೀದಿ ಮಾಡದೆ, ಇಲ್ಲಿನ ಅಸಂಖ್ಯ ಹಳ್ಳಿಗಳಲ್ಲೆ ಹಂಚುವುದು."

ಜನತೆ ಅದರಲ್ಲೂ ಯುವಜನ ಈ ಮಹಾವ್ಯಕ್ತಿಯ ಬಗ್ಗೆ ಅರಿತುಕೊಳ್ಳುವಂತೆ ಹಾಗೂ ಅವರು ತೋರಿದ ದಾರಿಯಲ್ಲಿ ನಡೆಯಲು ಯತ್ನಿಸುವಂತೆ ಮಾಡುವುದು ಈ ಸಣ್ಣ ಪುಸ್ತಕದ ಉದ್ದೇಶ.

ಈ ಕಾರ್ಯವನ್ನು ನನಗೆ ವಹಿಸಿದ್ದಕ್ಕೆ ಹಾಗೂ ಈ ಪುಸ್ತಕವನ್ನು ಪ್ರಕಟಿಸಿದ್ದಕ್ಕೆ ನಾನು ಜೆ. ಸಿ. ಕುಮಾರಪ್ಪ ಸ್ಮಾರಕ ಸಾರ್ವಜನಿಕ ಟ್ರಸ್ಟ್‌ಗೆ ಋಣಿಯಾಗಿದ್ದೇನೆ. ಇದನ್ನು ಕನ್ನಡಕ್ಕೆ ಅನುವಾದಿಸಿರುವ ಶ್ರೀ ನೀ. ಕಸ್ತೂರಿಯವರಿಗೂ ನಾನು ಕೃತಜ್ಞ.

ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಗ್ರಾಮ ಪರಿವರ್ತನ ಕೇಂದ್ರದಲ್ಲಿ ಕೃಷಿ ಅಭಿವೃದ್ಧಿ ವಿಷಯದ ಪ್ರಾಧ್ಯಾಪಕರಾದ ಪ್ರೊ॥ ಆರ್. ಎಸ್. ದೇಶಪಾಂಡೆ ಅವರು ಇದಕ್ಕೆ ಮುನ್ನುಡಿ ಬರೆಯುವ ಶ್ರಮ ವಹಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಪೂರ್ಣ ಸಹಕಾರ ನೀಡಿದ ಟ್ರಸ್ಟ್‌ನ ನಿರ್ವಹಣಾ ಟ್ರಸ್ಟಿ ಶ್ರೀ ಎನ್. ಪ್ರಭಾಕರ ಹಾಗೂ ಖಜಾಂಚಿ ಶ್ರೀ ಟಿ. ಜಿ. ಸತ್ಯನಾರಾಯಣ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಜಯಂತಿ ಪ್ರಿಂಟರಿ, ಮಲ್ಲೇಶ್ವರಂ, ಬೆಂಗಳೂರು ಇವರ ಮಾಲೀಕರಿಗೂ, ಕೆಲಸಗಾರರಿಗೂ ನಾನು ಕೃತಜ್ಞ. ಹಸ್ತಪ್ರತಿಯನ್ನು ಟೈಪು ಮಾಡಿಕೊಟ್ಟ ಕುಮಾರಿ ಬಿ. ಎನ್. ಕವಿತಾ ಅವರಿಗೆ ನಾನು ಋಣಿ.

ಟಿ. ಕೃಷ್ಣಮೂರ್ತಿ
ಅಧ್ಯಕ್ಷ
ಜೆ. ಸಿ. ಕುಮಾರಪ್ಪ ಸ್ಮಾರಕ ಸಾರ್ವಜನಿಕ ಟ್ರಸ್ಟ್

ಬೆಂಗಳೂರು

ಜೆ. ಸಿ. ಕುಮಾರಪ್ಪ

ಗಾಂಧೀ ಅರ್ಥಶಾಸ್ತ್ರಜ್ಞ

ಮಹಾತ್ಮ ಗಾಂಧೀಜಿ ಒಮ್ಮೆ ಸೆರೆಮನೆಯಲ್ಲಿದ್ದಾಗ, ಅವರ ಒಬ್ಬ ಶಿಷ್ಯರು ಅವರನ್ನು ಕಾಣಲು ಹೋದರು. ವಾಪಸ್ಸು ಹೊರಡುವಾಗ ಅವರು, ಗಾಂಧೀಜಿಯನ್ನು ಜನತೆಗೆ ತಮ್ಮ ಸಂದೇಶವೇನು ಎಂದು ಕೇಳಿದರು. "ನನ್ನ ಜೀವನವೇ ನನ್ನ ಸಂದೇಶ" ಎಂಬುದೇ ಗಾಂಧೀಜಿಯ ಉತ್ತರ. ಅವರದು ಸರಳತೆ ಸತ್ಯ ಹಾಗೂ ಅಹಿಂಸೆಯ ಬದುಕು. ಜನ, ಅದರಲ್ಲೂ ತಮ್ಮ ಶಿಷ್ಯರು ಆ ಮಾರ್ಗದಲ್ಲಿ ನಡೆಯಲಿ ಎಂಬುದೇ ಅವರ ಇಚ್ಛೆ. ಗಾಂಧೀಜಿ ತೋರಿಸಿದ ಮಾರ್ಗದಲ್ಲಿ ನಡೆದವರು ಕೆಲವರಷ್ಟೆ. ಅವರಲ್ಲಿ ಒಬ್ಬರು ಜೆ. ಸಿ. ಕುಮಾರಪ್ಪ.

ಶ್ರೀ ರಾಮಚಂದ್ರ ಗುಹ (ಖ್ಯಾತ ಚಿಂತಕರು) ಅವರ ಪ್ರಕಾರ, "ಮಹಾತ್ಮರ ಕಾಲದಲ್ಲಿ ಇದ್ದ ವಿದ್ವಾಂಸರು ಮತ್ತು ಸಮಾಜವಾದಿಗಳು ತಮ್ಮನ್ನು ತಾವು "ಉದಾರವಾದಿಗಳು" ಅಥವಾ "ಸಮಾಜವಾದಿಗಳು" ಸಂಪ್ರದಾಯ ವಾದಿಗಳು ಇಲ್ಲವೇ "ಮಾರ್ಕ್ಸ್‌ವಾದಿಗಳು" ಎಂದು ಕರೆದುಕೊಳ್ಳಲು ಖುಷಿ ಪಡುತ್ತಿದ್ದರು. ನನಗೆ ತಿಳಿದಂತೆ ಇಬ್ಬರು ಮಾತ್ರವೇ ತಮ್ಮನ್ನು "ಗಾಂಧೀ ವಿಚಾರವಾದಿ" ಎಂದು ಕರೆದುಕೊಳ್ಳುತ್ತಿದ್ದರು. ಒಬ್ಬರು ಅರ್ಥಶಾಸ್ತ್ರಜ್ಞ ಜೆ. ಸಿ. ಕುಮಾರಪ್ಪ. ಕುಮಾರಪ್ಪ ಲಂಡನ್ ಮತ್ತು ನ್ಯೂಯಾರ್ಕ್‌ಗಳಲ್ಲಿ ವ್ಯಾಸಂಗ ಮಾಡಿದರು. ಲೆಕ್ಕತಜ್ಞ (ಅಕೌಂಟೆಂಟ್) ಆಗಿ ಸೊಗಸಾದ ಜೀವನಮಾರ್ಗದಲ್ಲಿದ್ದರು. ಅದನ್ನು ಬಿಟ್ಟು ಗಾಂಧೀಜಿ ಬಳಿಗೆ ಹಾಗೂ ರಾಷ್ಟ್ರೀಯ ಚಳುವಳಿಗೆ ಸೇರಲು ಬಂದರು. ಗ್ರಾಮ ಅರ್ಥವ್ಯವಸ್ಥೆಯನ್ನು ಪರಿಸರಾನುಗುಣವಾಗಿ ಪುನರ್ಘಟಿಸಲು ಅನೇಕ ವರ್ಷ ದುಡಿದರು. ಮಹಾತ್ಮರ ಇನ್ನೊಬ್ಬ ಸಮಕಾಲೀನ ಬುದ್ಧಿಜೀವಿ ನಿರ್ಮಲ ಕುಮಾರ ಬೋಸ್, ಮಾನವ ಶಾಸ್ತ್ರಜ್ಞರು, ಗಾಂಧೀವಾದಿ ಎನಿಸಿಕೊಳ್ಳಲು ಸಂಕೋಚವಿಲ್ಲದಿದ್ದವರು." (12-2-2006 ರ ಹಿಂದೂ ಪತ್ರಿಕೆಯಲ್ಲಿನ ಲೇಖನ). ಶ್ರೀ ರಾಮಚಂದ್ರ ಗುಹ ಅವರು ಜೆ. ಸಿ. ಕುಮಾರಪ್ಪನವರ ಜೀವನ ಮತ್ತು ಕಾರ್ಯವನ್ನು ತುಂಬ ಚೆನ್ನಾಗಿ ವಿಶ್ಲೇಷಿಸಿದ್ದಾರೆ.

ಜೆ. ಸಿ ಕುಮಾರಪ್ಪನವರ ಬಾಲ್ಯದ ಹೆಸರು ಜೋಸೆಫ್ ಚೆಲ್ಲದೊರೈ. ಅವರು ಹುಟ್ಟಿದ್ದು 1892 ಜನವರಿ 4ರಂದು ತಮಿಳುನಾಡಿನ ತಂಜಾವೂರಿನಲ್ಲಿ. ತಂದೆ ಎಸ್. ಡಿ. ಕಾರ್ನಿಲಿಯಸ್, ತಾಯಿ ಎಸ್ಥರ್ ರಾಜನಾಯಕಮ್. ಅವರ ಮುದ್ದು ಹೆಸರು "ಚೆಲ್ಲ". ಅವರು ತಮ್ಮ ತಂದೆ-ತಾಯಿಯವರ ಒಂಭತ್ತನೆಯ ಮಗು. ಚೆಲ್ಲ ತನ್ನ ಐದನೆಯ ವಯಸ್ಸಿನಲ್ಲಿ ಕಡಲೂರಿನ ಸೆಂಟ್ ಜೋಸೆಫ್ ಶಾಲೆಗೆ ಸೇರಿದ. ಶಾಲೆಯಲ್ಲಿ ತುಂಬ ಶಿಸ್ತಿನ ಹುಡುಗ. ಕಾಲಕ್ಲುಪ್ತತೆಯಲ್ಲಿ ತುಂಬ ಕಟ್ಟುನಿಟ್ಟು. ಪ್ರತಿದಿನವೂ ಅಂದಂದಿನ ಮನೆಕೆಲಸ ಮುಗಿಸುತ್ತಿದ್ದ. ಬೆಳಿಗ್ಗೆ ತಿಂಡಿ ಏನಾದರೂ ತಡ ಆದರೆ, ಖಾಲಿ ಹೊಟ್ಟೆಯಲ್ಲೆ ಶಾಲೆಗೆ ಸಕಾಲಕ್ಕೆ ಹೋಗುತ್ತಿದ್ದ.

12 ವರ್ಷ ಆದಾಗ ಡೊವ್‌ಟನ್ ಗಂಡುಮಕ್ಕಳ ಯುರೋಪಿಯನ್ ಶಾಲೆ ಸೇರಿದ. ತುಂಬ ಕ್ರಮಬದ್ಧ ವಿದ್ಯಾರ್ಥಿ. ಎಳೆತನದಿಂದಲೇ, ತನ್ನ ನಿಗದಿತ ಕಾರ್ಯಕ್ರಮಗಳಲ್ಲಿ ಚಾಚೂ ತಪ್ಪದ ಸ್ವಭಾವ. ತುಂಬ ಕಟ್ಟುನಿಟ್ಟು, ಕ್ಲುಪ್ತತೆ. ಒಮ್ಮೆ ಗೆಳೆಯನೊಂದಿಗೆ ಆಟಕ್ಕೆ ಬರುವುದಾಗಿ ಗೊತ್ತುಮಾಡಿಕೊಂಡಿದ್ದ. ಆದರೆ ಅವನ ತಂದೆ, ಲಾಟೀನಿಗೆ ಚಿಮಣಿ ತಂದುಕೊಡಲು ಹೇಳಿದರು. ಪೇಟೆಗೆ ಹೋಗಿ ಚಿಮಣಿ ತರುವುದು ಸಾಧ್ಯವಾಗದು, ಏಕೆಂದರೆ ಅದೇ ಸಮಯದಲ್ಲಿ ತನ್ನ ಗೆಳೆಯನೊಂದಿಗೆ ಆಟವಾಡುವುದು ಗೊತ್ತಾಗಿದೆ, ಆ ಮಾತನ್ನು ಉಳಿಸಿಕೊಳ್ಳಬೇಕು ಎಂದು ಹೇಳಿದ. ತಂದೆ ಸಿಟ್ಟಾದರು, ಅವನನ್ನು ಚೆನ್ನಾಗಿ ಬಯ್ದರು. ಆಗ ಕುಮಾರಪ್ಪ ಹೇಳಿದ, "ಅಪ್ಪ, ನೀವು ಮೊದಲೇ ಹೇಳಿದ್ದರೆ, ನಾನು ಇವೊತ್ತು ನನ್ನ ಗೆಳೆಯನ ಜೊತೆಗೆ ಹೋಗಲು ಗೊತ್ತು ಮಾಡಿಕೊಳ್ಳುತ್ತಿರಲಿಲ್ಲ. ಆದರೆ ಈಗ ನಾಳೆ ಹೋಗಿ ಚಿಮಣಿ ತಂದುಕೊಡುತ್ತೇನೆ." ಹೀಗೆ ಹೇಳಿ ಆಟಕ್ಕೆ ಹೊರಟುಹೋದ. ಇದು ಅವಿಧೇಯತೆ ಎಂದು ನಮ್ಮಲ್ಲಿ ಅನೇಕರಿಗೆ ತೋರಬಹುದು. ಆದರೆ ಆತನಿಗೆ ಅದು ಕೊಟ್ಟ ಮಾತಿಗೆ ಬೆಲೆಕೊಡುವ ವಿಚಾರ. ತಂದೆಯ ಮಾತು ಕೇಳಲಿಲ್ಲ ಎಂದು ಆತನಿಗೆ ದುಃಖವೂ ಆಯಿತು. ಆಟ ಆಡಿ ಬಂದ ನಂತರ, ತಾಯಿಯ ಬಳಿಹೋಗಿ, ತಂದೆ ತನ್ನ ಮೇಲೆ ಸಿಟ್ಟಾಗಿರುವುದನ್ನು ಹೇಳಿದ. ತಾಯಿ ಹೇಳಿದಳು, "ಇಲ್ಲ ಚೆಲ್ಲ. ತಂದೆ ಸಿಟ್ಟಾಗಿಲ್ಲ, ನಿನ್ನ ಗೆಳೆಯನ ಜೊತೆಗೆ ಗೊತ್ತು ಮಾಡಿದ್ದ ಕಾರ್ಯಕ್ರಮವನ್ನು ಬಿಡಲಿಲ್ಲವಲ್ಲ, ಅವರಿಗೆ ಹೆಮ್ಮೆಯೇ ಆಗಿದೆ". ತಂದೆ ಆಕೆಗೆ ಹೇಳಿದ್ದರು, "ನೋಡು ಈ ಹುಡುಗನನ್ನು. ಮಾತು ಉಳಿಸಿಕೊಳ್ಳಲು ಅವನಿಗೆ ಎಷ್ಟು ಕಾಳಜಿ ! ದೊಡ್ಡವನಾದ ಮೇಲೆ ಏನಾಗುತ್ತಾನೋ !".

ಕುಮಾರಪ್ಪನವರ ಹೆಸರು ಚೆಲ್ಲ ಎಂದಿತಲ್ಲ, ಅವರು ಸೆಂಟ್‌ಪಾಲ್ಸ್ ಹೈಸ್ಕೂಲಿನಿಂದ ಮೆಟ್ರಿಕ್ ಪಾಸು ಮಾಡಿದರು. ವೆಸ್ಲಿಯನ್ ಮಿಷನ್ ಕಾಲೇಜಿಗೆ ಸೇರಿದರು. ಅವರ ಉಪಾಧ್ಯಾಯರು ಮಿ. ಹೋವರ್ಡ್ ಓಕಲೇ. ಲೆಕ್ಕದಶಾಸ್ತ್ರ (ಅಕೌಂಟೆನ್ಸಿ) ಓದು ಎಂದು ಸೂಚಿಸಿದರು. ಲಂಡನ್‌ನ ಮಿ. ಬಾರ್ನೆಸ್ ಎಂಬ ಅಕೌಂಟೆಂಟರ ಬಳಿ ವಿದ್ಯಾರ್ಥಿಯಾಗಲು ಗೊತ್ತುಮಾಡಿದರು. ಆಗ 1913. ಅಲ್ಲಿ ಕುಮಾರಪ್ಪ ಐದು ವರ್ಷ ದುಡಿದು ಅಕೌಂಟೆಂಟ್ ಪದವಿ ಪಡೆದರು. ಆ ಸಂಸ್ಥೆಯ ಅವರನ್ನು ಆ ಕಂಪನಿಯಲ್ಲಿ ಪಾಲುದಾರನಾಗಲು ಸಲಹೆ ಮಾಡಿತು. ಆದರೆ ಚೆಲ್ಲ ವಾಪಸ್ಸು ಬರಬೇಕಾಗಿತ್ತು ತಂದೆ-ತಾಯಿ ಇಷ್ಟದಂತೆ ಭಾರತಕ್ಕೆ ಮರಳಿದ ಮೇಲೆ ಒಂದು ಸಂಸ್ಥೆ ಸೇರಿ ಅಕೌಂಟೆಂಟ್ ಆಗಿ ಕೆಲಸ ಮಾಡಿದರು. ಮೂರು ವರ್ಷದ ಅನುಭವ ಪಡೆದು, ಮುಂಬೈನ ದೇವರ್ಸ್ ವಾಣಿಜ್ಯ ವಿದ್ಯಾಲಯಕ್ಕೆ ಸೇರಿದರು. ಅನಂತರ ಅಮೇರಿಕಾಗೆ ಹೋದರು. ಸಿರಾಕ್ಯೂಸ್‌ನಲ್ಲಿ ವಾಣಿಜ್ಯ ಆಡಳಿತ (ಬಿಸಿನೆಸ್ ಅಡ್ಮಿನಿಸ್ಟ್ರೇಷನ್) ವಿಷಯದಲ್ಲಿ ಬಿ.ಎಸ್.ಸಿ., ಪದವಿ ಪಡೆದರು. ಆಮೇಲೆ ಕೊಲಂಬಿಯಾದಲ್ಲಿ ಎಂ.ಎ., ಪದವಿ ಗಳಿಸಿದರು. ತಮ್ಮ ಪ್ರಾಧ್ಯಾಪಕರು ಡಾ|| ಇ.ಆರ್.ಎ. ಸಾಲಿಗ್ಮನ್ ಅವರ ಸಲಹೆಯಂತೆ "ಸಾರ್ವಜನಿಕ ಹಣಕಾಸು ಮತ್ತು ಬಡತನ" (Public Finance and Poverty) ಎಂಬ ಪ್ರಬಂಧವನ್ನು ರಚಿಸಿದರು. ಆಗಲೇ ಚೆಲ್ಲ, ಜೆ. ಸಿ. ಕುಮಾರಪ್ಪ ಎಂಬ ಹಿಂದೂ ಕೌಟುಂಬಿಕ ಹೆಸರನ್ನು ಇಟ್ಟುಕೊಂಡರು.

ಗಾಂಧೀಜಿಯೊಡನೆ ಮೊದಲ ಭೇಟಿ

ಗಾಂಧೀಜಿಯೊಡನೆ ಅವರ ಮೊದಲ ಭೇಟಿ ಒಂದು ದೊಡ್ಡ ಕಥೆ, ಗಮನಾರ್ಹ ಕಥೆ, ಕುಮಾರಪ್ಪ ಪಾಶ್ಚಿಮಾತ್ಯ ಶಿಕ್ಷಣ ಪಡೆದವರು, ರೀತಿ ರಿವಾಜು ಎಲ್ಲ ಪಾಶ್ಚಿಮಾತ್ಯವೇ. ಪೂರಾ ಪಾಶ್ಚಿಮಾತ್ಯ ಉಡುಪು, ಷರಾಯಿ, ಷರ್ಟ್, ಕೊರಳ ಟೈ ಎಲ್ಲ. ಇಂಥ ಪಾಶ್ಚಿಮಾತ್ಯ ಶೈಲಿಯ ವ್ಯಕ್ತಿ ಗಾಂಧೀಜಿಯ ಅನುಯಾಯಿ ಆದರಲ್ಲ, ಹೇಗೆ ? ಅದೇ ಒಂದು ವಿಸ್ಮಯ.

ಆಗ ಗಾಂಧೀಜಿ ಮುಂಬೈಯಲ್ಲಿ ಮಣಿಭವನದಲ್ಲಿ ತಂಗಿದ್ದರು. ಕುಮಾರಪ್ಪ ತಮ್ಮ ಪ್ರಬಂಧವನ್ನು ತೆಗೆದುಕೊಂಡು ಅವರಲ್ಲಿಗೆ ಹೋದರು. ಅದಕ್ಕೆ ಗಾಂಧೀಜಿಯ ಮುನ್ನುಡಿ ಕೇಳಲು ಹೋದರು. ಎಂದಿನಂತೆ ಪಾಶ್ಚಿಮಾತ್ಯ ಶೈಲಿಯ ಉಡುಪು. ಅಲ್ಲಿ ಗಾಂಧೀಜಿಯ ಕಾರ್ಯದರ್ಶಿ ಪ್ಯಾರೇಲಾಲ್‌ರನ್ನು ಭೇಟಿಮಾಡಿ, ಗಾಂಧೀಜಿಯವರನ್ನು ನೋಡಲು ಅವಕಾಶ ಕೇಳಿದರು. ಆದರೆ ಗಾಂಧೀಜಿ ಒಂದು ಸಭೆಯಲ್ಲಿ ನಿರತರಾಗಿದ್ದರು. ಕುಮಾರಪ್ಪ ಅವರನ್ನು ನೋಡಲು ಆಗಲಿಲ್ಲ. ತಮ್ಮ ಪ್ರಬಂಧವನ್ನು ಪ್ಯಾರೇಲಾಲರ ಕೈಗಿತ್ತು, ಅದನ್ನು ಗಾಂಧೀಜಿಗೆ ತಲುಪಿಸಬೇಕೆಂದು ಹೇಳಿ, ಹಿಂದಿರುಗಬೇಕಾಯಿತು. ಆಮೇಲೆ 1929, ಮೇ 9ರಂದು ಮಧ್ಯಾಹ್ನ 2-30ಕ್ಕೆ ಸಬರ್ಮತಿ ಆಶ್ರಮದಲ್ಲಿ ಗಾಂಧೀಜಿಯನ್ನು ಭೇಟಿ ಮಾಡಬಹುದು ಎಂದು ಅವರಿಗೆ ತಿಳಿಸಲಾಯಿತು. ಆ ನಡುವೆ ಗಾಂಧೀಜಿ "ಸಾರ್ವಜನಿಕ ಹಣಕಾಸು ಮತ್ತು ಬಡತನ" ಪ್ರಬಂಧವನ್ನು ಓದಿ ನೋಡಿದ್ದರು. ಅವರನ್ನು ಕಾಣಲು ಕುಮಾರಪ್ಪ ಸಬರ್ಮತಿ ಆಶ್ರಮಕ್ಕೆ ಹೋದರು. ಅಲ್ಲಿನ ಸರಳತೆಗೆ ಅವರು ಬೆರಗಾದರು.

ಅವರನ್ನು ಇಳಿಸಿದ್ದ ಅತಿಥಿ ಕೋಣೆಯಲ್ಲಿ ಒಂದು ಮಂಚ ಇತ್ತು, ಇನ್ನೇನೂ ಇರಲಿಲ್ಲ. ಪಾಶ್ಚಿಮಾತ್ಯ ರೀತಿಯ ಶೌಚಾಲಯ ಇರಬಹುದು ಎಂದುಕೊಂಡಿದ್ದರು. ಅಂತಹದೇನೂ ಇರಲಿಲ್ಲ. ಬೇಗ ಭೇಟಿ ಮುಗಿಸಿ ಕಾಲು ತೆಗೆಯಬೇಕು ಎಂದುಕೊಂಡರು. ಕುಮಾರಪ್ಪನವರ ಮಾತನ್ನೇ ಉದಹರಿಸುವುದು ಸೂಕ್ತವಾದೀತು. "ದಿಣ್ಣೆಯ ದಾರಿಯಲ್ಲಿ ಒಂದು ಮರದ ಕೆಳಗೆ ಮುದುಕನೊಬ್ಬ ಕುಳಿತಿದ್ದುದನ್ನು ಕಂಡೆ, ಸಗಣಿಯಿಂದ ಸಾರಿಸಿದ ನೆಲದಮೇಲೆ, ನೂಲುತ್ತ ಕುಳಿತಿದ್ದ. ನೂಲುವ ಚರಕವನ್ನು ನಾನು ಎಂದೂ ನೋಡಿರಲಿಲ್ಲ. ನಿಗದಿತ ಸಮಯಕ್ಕೆ ಇನ್ನೂ ಹತ್ತು ನಿಮಿಷವಿತ್ತು. ನಾನು ಕೈಕೋಲನ್ನು ಊರಿ ನಿಂತು ನೋಡತೊಡಗಿದೆ. ಐದು ನಿಮಿಷದ ನಂತರ ಆ ಮುದುಕ ತನ್ನ ಗಡಿಯಾರ ನೋಡಿಕೊಂಡು, ತನ್ನ ಬೊಚ್ಚು ಬಾಯಿ ತೆರೆದು, ನಗೆ ಬೀರುತ್ತ, "ಕುಮಾರಪ್ಪನೇ" ಎಂದು ಕೇಳಿದ. ಪ್ರಶ್ನಿಸಿದವರು ಮಹಾತ್ಮ ಗಾಂಧಿಯೆ ಇರಬೇಕು ಎಂದು ಒಮ್ಮೆಲೇ ನನಗೆ ಹೊಳೆಯಿತು. ಆದ್ದರಿಂದ ನಾನು ಕೇಳಿದೆ ತಾವು ಗಾಂಧೀಜಿಯೇ ಎಂದು. ಹೌದೆಂದು ಆತ ತಲೆದೂಗಿದ. ನಾನು ಸಗಣಿ ಸಾರಿಸಿದ ನೆಲದ ಮೇಲೆ ಕುಳಿತೆ. ನನ್ನ ರೇಷ್ಮೆ ಷರಾಯಿಯ ಗರಿಗರಿ ಲೆಕ್ಕಕ್ಕೆ ಬರಲಿಲ್ಲ. ಕಾಲು ಚಾಚಿಕೊಂಡು, ವಾಲಿದಂತೆ ಕುಳಿತಿದ್ದ ನನ್ನನ್ನು ನೋಡಿ, ಯಾರೋ ಒಬ್ಬರು ಒಳಗಿನಿಂದ ಒಂದು ಕುರ್ಚಿ ಎತ್ತಿಕೊಂಡು ದಡದಡನೆ ಬಂದರು. ಎದ್ದು ಆರಾಮವಾಗಿ ಕುರ್ಚಿಯ ಮೇಲೆ ಕುಳ್ಳಿರಿ ಎಂದು ಗಾಂಧೀಜಿ ಹೇಳಿದರು. ಅವರೇ ನೆಲದಮೇಲೆ ಕುಳಿತಿರುವಾಗ, ನಾನು ಕುರ್ಚಿಯಲ್ಲಿ ಕೂರಲಾರೆ ಎಂದೆ".

ಮಾತುಕತೆಯಲ್ಲಿ, ಗಾಂಧೀಜಿ, ಅರ್ಥಶಾಸ್ತ್ರದ ಬಗ್ಗೆ ತಮ್ಮ ನಿಲುವೂ ಕುಮಾರಪ್ಪನವರ ನಿಲುವಿನಂಥದೇ ಎಂದರು. ಆದ್ದರಿಂದ, ತಮ್ಮ ಗ್ರಾಮೋದ್ಧಾರ ಕಾರ್ಯಕ್ರಮದಲ್ಲಿ ಕುಮಾರಪ್ಪನವರು ಸಹಾಯ ಮಾಡಬಹುದು, ಗುಜರಾತಿನ ಕೆಲವು ಹಳ್ಳಿಗಳಲ್ಲಿ ಸಮೀಕ್ಷೆ ನಡೆಸಬಹುದು, ಗುಜರಾತ್ ವಿದ್ಯಾಪೀಠದ ಪ್ರಾಧ್ಯಾಪಕರು ನೆರವು ನೀಡುತ್ತಾರೆ ಎಂದರು. ಸಮೀಕ್ಷೆಯ ಕೆಲಸದಲ್ಲಿ ವಿದ್ಯಾಪೀಠದ ಉಪ ಕುಲಪತಿ ಕಾಕಾ ಸಾಹೇಬ ಕಾಲೇಲಕರರು ಮಾರ್ಗದರ್ಶನ ಮಾಡುತ್ತಾರೆ ಎಂದೂ ಹೇಳಿದರು. ಕುರ್ಚಿ ತಂದಿಟ್ಟವರೇ ಆ ಕಾಲೇಲಕರರು.

ಗಾಂಧೀಜಿ ದಂಡಿಯಾತ್ರೆ ಮಾಡುತ್ತಿದ್ದಾಗ, ಕುಮಾರಪ್ಪನವರ ಪ್ರಬಂಧ "ಸಾರ್ವಜನಿಕ ಹಣಕಾಸು ಮತ್ತು ಬಡತನ" ಆಶ್ರಮದ ಪತ್ರಿಕೆ "ಯಂಗ್ ಇಂಡಿಯಾ" ದಲ್ಲಿ ಪ್ರಕಟಗೊಂಡಿತು. ಆಗ, ಗಾಂಧೀಜಿಯ ಮುನ್ನುಡಿ ಸೇರಿಸಿ ಅದನ್ನು ಪ್ರಕಟಮಾಡುವ ಯೋಚನೆ ಕುಮಾರಪ್ಪನವರಿಗೆ ಹೊಳೆಯಿತು. (ಗಾಂಧೀಜಿಯ ಸಮಯ ಉಳಿಸಲು) ತಾವೇ ಒಂದು ಕರಡು ಮುನ್ನುಡಿ ಸಿದ್ಧಮಾಡಿ, ಅವರಿಗೆ ತೋರಿಸಲು ಒಯ್ದರು, ಗಾಂಧೀಜಿ ಹೇಳಿದರು. "ನಾನೇನಾದರೂ ಮುನ್ನುಡಿಗೆ ರುಜು ಹಾಕಬೇಕಾದರೆ, ಅದನ್ನು ನಾನೇ ಬರೆಯಬೇಕು, ಆದರೆ ಸದ್ಯದಲ್ಲಿ ನನಗೆ ಪುರುಸೊತ್ತು ಇಲ್ಲ. ಮುನ್ನುಡಿ ಬರೆಯಲಾರೆ." ಆಗ "ಯಂಗ್ ಇಂಡಿಯಾ" ಸಂಪಾದಕರು ಮಹದೇವ ದೇಸಾಯಿ. ಅವರೂ ಮತ್ತು ಗಾಂಧೀಜಿ ಇಬ್ಬರೂ ಬಂಧಿತರಾಗಿದ್ದರಿಂದ ಕುಮಾರಪ್ಪನವರೇ ಪತ್ರಿಕೆ ಸಂಪಾದಕ ರಾಗಬೇಕಾಯಿತು. ಹೀಗೆ ಕುಮಾರಪ್ಪ ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಅವರ ಅನುಯಾಯಿಯೇ ಆದರು.

ಬ್ರಿಟಿಷ್ ರಾಜ್ಯದ ವಿರುದ್ಧ ದಂಗೆ

ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದರಲ್ಲ. ಆಗ ಲಕ್ಷಾಂತರ ಜನ ಬ್ರಿಟಿಷ್ ರಾಜ್ಯದ ವಿರುದ್ಧ ದಂಗೆ ಎದ್ದರು. ಅದು ಶಾಂತಿಯುತ ಚಳುವಳಿ. "ಯಂಗ್ ಇಂಡಿಯಾ"ದ ಪ್ರಬಲ ಸಂಪಾದಕೀಯಗಳಿಂದ ಕುಮಾರಪ್ಪ ಜನತೆಗೆ ಸ್ಫೂರ್ತಿ ನೀಡುತ್ತಿದ್ದರು. ಅದು ಗಾಂಧೀಕ್ರಾಂತಿಯ ವಾರಪತ್ರಿಕೆ. ಕುಮಾರಪ್ಪನವರ ಲೇಖನ ತುಂಬ ಹರಿತ. ಲೇಖನಗಳು ಬ್ರಿಟಿಷ್ ರಾಜ್ಯಕ್ಕೆ ಸವಾಲು ಎಸೆಯುವಂತಿದ್ದವು. ಅವರು ಸರ್ಕಾರದ ತೆರಿಗೆ ನೀತಿಯನ್ನು ಕಟುವಾಗಿ ಟೀಕಿಸಿದರು. ಅಸಹಕಾರಕ್ಕೆ ಬರಲು ಜನರಿಗೆ ಕರೆಕೊಟ್ಟರು. ಪ್ರಭುತ್ವವನ್ನು ಟೀಕಿಸಲು ಎಷ್ಟು ಉಗ್ರ ಮಾತು ಬಳಸಿದರೆಂದರೆ, ಅವರ ಒಬ್ಬ ಸಹಕಾರ್ಯಕರ್ತರೇ ಅಂತಹ ಕಟು ಲೇಖನಗಳ ಪ್ರಕಟಣೆಯನ್ನು ವಿರೋಧಿಸಿದರು. ಇದಕ್ಕೆ ಕುಮಾರಪ್ಪನವರ ಉತ್ತರ - ಕೆಟ್ಟುದನ್ನು ಬಯಲಿಗೆಳೆದು, ಸತ್ಯವನ್ನು ಸಮರ್ಥಿಸುವಲ್ಲಿ ಯಾವ ರಾಜಿಯೂ ಇರುವಂತಿಲ್ಲ. ಆ ಕಾರ್ಯಕರ್ತ ಪತ್ರಿಕೆಯ ಸಂಚಿಕೆಯನ್ನು ಗಾಂಧೀಜಿಗೆ ತೋರಿಸಿದ, ಗಾಂಧೀಜಿ ನಕ್ಕು ಹೇಳಿದರು. "ಕುಮಾರಪ್ಪ ಮದರಾಸಿನವರು, ಮದರಾಸಿನಲ್ಲಿ ಮೆಣಸಿನಕಾಯಿ ಪ್ರಸಿದ್ಧ, ಮೆಣಸಿನಕಾಯಿಯ ಖಾರ ತೆಗೆಯುವುದು ಸಾಧ್ಯವೇ?"

ಅಂಥ ಉಗ್ರ ಟೀಕೆಗೆ ಪ್ರಭುತ್ವದ ಪ್ರತಿಕ್ರಿಯೆ ಪತ್ರಿಕೆಯ ಮೇಲೆ ವಾಕ್ಬಂಧನ. ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರು, ಕುಮಾರಪ್ಪನವರು ತಮ್ಮ ಮುಂದೆ ಹಾಜರಾಗಬೇಕೆಂದು ನೋಟಿಸು ಜಾರಿ ಮಾಡಿದರು. ಆಜ್ಞೆ ಹೀಗಿತ್ತು.

"ನೀವು "ಯಂಗ್ ಇಂಡಿಯಾ" ದ ನಾನಾ ಸಂಚಿಕೆಗಳಲ್ಲಿ ರಾಜದ್ರೋಹಕಾರಕ ಲೇಖನಗಳನ್ನು ಬರೆಯುತ್ತಿದ್ದೀರಿ. ಇದರಿಂದ ಕಾನೂನು ಪ್ರಕಾರ ಸ್ಥಾಪಿತವಾದ ಸರ್ಕಾರದ ಬಗ್ಗೆ ಜನರಲ್ಲಿ ದ್ವೇಷ ತಿರಸ್ಕಾರ ಹಾಗೂ ಅಪ್ರೀತಿ ಉಂಟಾಗುತ್ತದೆ. ಆದ್ದರಿಂದ ಉದ್ದೇಶಪೂರ್ವಕವಾಗಿ ರಾಜದ್ರೋಹದ ಭಾವನೆಗಳು ಪ್ರಚಾರಗೊಳ್ಳುತ್ತವೆ. ಇದು ಭಾರತೀಯ ದಂಡ ಸಂಹಿತೆಯ 124-A ಕಲಮಿನ ಪ್ರಕಾರ ದಂಡನಾರ್ಹ. ನಿಮ್ಮ ಮೇಲೆ ಕ್ರಮ ಕೈಗೊಳ್ಳಲು ಸಾಕಷ್ಟು ಆಧಾರವಿರುವುದಾಗಿ ನಾನು ಭಾವಿಸುತ್ತೇನೆ. ಆದ್ದರಿಂದ ನೀವು 12-2-1931 ಮಧ್ಯಾಹ್ನ 2 ಗಂಟೆಗೆ, ನನ್ನ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದೂ, ಮತ್ತು ನಿಮಗೆ ಶಿಕ್ಷೆ ವಿಧಿಸಬಾರದೇಕೆ ಎಂಬ ಬಗ್ಗೆ ಸಮಜಾಯಿಷಿ ನೀಡಬೇಕೆಂದೂ ಕೇಳುತ್ತೇನೆ."

ಕುಮಾರಪ್ಪ ಕೋರ್ಟಿಗೆ ಹಾಜರಾದರು. ಆದರೆ ಒಳ್ಳೆಯ ನಡತೆ ಬಗ್ಗೆ ಮುಚ್ಚಳಿಕೆ ಬರೆದುಕೊಡಲು ನಿರಾಕರಿಸಿದರು. ಕೋರ್ಟಿನಲ್ಲಿ ಅವರು ನೀಡಿದ ಹೇಳಿಕೆ ಸ್ಪಷ್ಟವಾಗಿತ್ತು. ನ್ಯಾಯ ಮತ್ತು ಸತ್ಯದ ವಿಷಯದಲ್ಲಿ ಕಿಂಚಿತ್ತೂ ತಲೆ ಬಾಗದಂತಿತ್ತು. ಮ್ಯಾಜಿಸ್ಟ್ರೇಟರ ಮುಂದೆ ಅವರು ನೀಡಿದ ಹೇಳಿಕೆಯ ಸೂಕ್ತ ಭಾಗವನ್ನು ಉದಹರಿಸುವುದು ಉಚಿತವಾದೀತು.

"ಇಂದಿನ ಭಾರತ ಸರ್ಕಾರದ ನಿಲುವನ್ನು ಪರಿಶೀಲನೆಗೆ ಎತ್ತಿಕೊಳ್ಳುತ್ತೇನೆ, ತೋಳುಬಲದ ಬೆದರಿಕೆಯಿಂದ, ಪ್ರಜೆಗಳ ನಿಷ್ಠೆ ಇದೆ ಎಂದು ಹೇಳಿಕೊಳ್ಳುವುದು ಸರ್ವಾಧಿಕಾರಿ ಸರ್ಕಾರ, ಅದಕ್ಕೆ ವಿರುದ್ಧವಾಗಿ ತಾನು ಆಳುವ ಜನತೆಯ ಮುಕ್ತವಾದ ಜನಾಭಿಪ್ರಾಯದ ತಳಹದಿಯ ಮೇಲೆ ನಿಂತ ಸರ್ಕಾರ ಮಾತ್ರ ಕಾನೂನು ಪ್ರಕಾರ ಸ್ಥಾಪಿತವಾದ ಸರ್ಕಾರವಾದೀತು. ತೋರಿಕೆಗಾದರೂ ಭಾರತ ಸರ್ಕಾರ ಅಂಥ ಪ್ರಭುತ್ವವಾಗಿದೆಯೇ ? ಭಾರತ ಸರ್ಕಾರ ಸ್ಥಾಪಿತವಾಗಿರುವುದು ಗ್ರೇಟ್ ಬ್ರಿಟನ್ನಿನ ಸಂಸತ್ತಿನ ಕಾಯಿದೆಯಿಂದ, ಬ್ರಿಟಿಷ್ ಸಂಸತ್ತು ಪ್ರತಿನಿಧಿಸುವುದು ಬ್ರಿಟಿಷ್ ಜನತೆಯ ಅಭಿಪ್ರಾಯವನ್ನು ಮಾತ್ರ. ಆದ್ದರಿಂದ ಬ್ರಿಟಿಷ್ ಸರ್ಕಾರ, ಲಂಡನ್‌ನಲ್ಲಿ ಮಾತ್ರ ನ್ಯಾಯಬದ್ಧ ಸಂಸ್ಥೆವಾಗಿರಬಲ್ಲದು, ಪೀಕಿಂಗ್‌ನಲ್ಲಿ ಅಲ್ಲ. ಅಥವಾ ದೆಹಲಿಯಲ್ಲಿ ಅಲ್ಲ. ಆ ಸ್ಥಳಗಳಲ್ಲಿ ಅದು ಒಲ್ಲದ ಜನತೆಯ ಮೇಲೆ ತನ್ನ ಆಡಳಿತ ಹೊರಿಸುವ ಅಕ್ರಮ ವ್ಯವಸ್ಥೆ. ಈ ಸರ್ಕಾರದ ಬಗ್ಗೆ ಭಾರತದ ಜನತೆಗೆ, ಚಂದ್ರನಲ್ಲಿನ ಮಾನವನಿಗಿಂತ ಹೆಚ್ಚಿನ ನಿಷ್ಠೆ ಏನೂ ಇಲ್ಲ. ಪ್ರೀತಿಯ ಸಂಬಂಧಕ್ಕೆ ಅವಕಾಶವೇ ಇಲ್ಲದಿರುವಾಗ, ಅಪ್ರೀತಿಯನ್ನು ಹರಡುವ ಅಪರಾಧ ನನ್ನದಾಗಲಾರದು. ಭಾರತ ಸರ್ಕಾರ ಜನತೆಯ ಹಕ್ಕುಗಳನ್ನು ಕಿತ್ತುಕೊಂಡಿದೆ. ಕಾನೂನುಗಳು ಏನಿದ್ದರೂ ಕಾರ್ಯಾಂಗದ ಆದೇಶ ಅಥವಾ ಸುಗ್ರೀವಾಜ್ಞೆ ಮಾತ್ರ. ಆದ್ದರಿಂದ ಸಾರ್ವಭೌಮತ್ವ ಇರುವ ಜನತೆಯಿಂದ ನಿಮಗೆ ಯಾವ ಅಧಿಕಾರವೂ ದತ್ತವಾಗಿಲ್ಲ. ನನ್ನ ಮೇಲೆ ನಿಮಗೆ ಯಾವ ಅಧಿಕಾರವ್ಯಾಪ್ತಿಯೂ ಇಲ್ಲ. ಈ ಕಪಟ ನ್ಯಾಯಾಂಗ ವಿಚಾರಣೆಯಲ್ಲಿ ಭಾಗವಹಿಸಲು ನಾನೇನೂ ಬಾಧ್ಯಸ್ಥನಲ್ಲ, ನೀವು ನನ್ನ

ಮೇಲೆ ವಿಧಿಸಬಹುದಾದ ಶಿಕ್ಷೆ ಕುರಿತಂತೆ, ನಾನು ಇಂಥದೇ ಬೇಕೆಂದು ಕೇಳಿ ನಿಮ್ಮನ್ನು ಅಗೌರವಿಸ ಬಯಸುವುದಿಲ್ಲ. ನಿಮಗೆ ಆದೇಶಗಳು ಇದ್ದೇ ಇವೆ. ಏನು ಹೇಳುವಿರೋ, ಸಂತೋಷದಿಂದ ಕೇಳುತ್ತೇನೆ."

ಇದನ್ನು ಕೇಳಿಯಾದ ಮೇಲೆ, ಮ್ಯಾಜಿಸ್ಟ್ರೇಟರು ಅವರಿಗೆ ಎರಡು ವರ್ಷ ಸೆರೆವಾಸ ವಿಧಿಸಿದರು.

ಕುಮಾರಪ್ಪನವರ ಈ ಪಟ್ಟು ಬಿಡದ ಮನೋಭಾವ ರಾಜಕಾರಣಿಗಳಲ್ಲಿ, ರಚನಾತ್ಮಕ ಕಾರ್ಯಕರ್ತರಲ್ಲಿ ಹಾಗೂ ಜನಸ್ತೋಮದಲ್ಲಿ ಕೂಡ ಅವರ ಖ್ಯಾತಿಯನ್ನು ಹೆಚ್ಚಿಸಿತು. ಅವರು ತಮ್ಮ ಕೆಲಸದಲ್ಲಿ ತುಂಬ ದೃಢಮನಸ್ಕರಾಗಿದ್ದರು. ನಿಷ್ಠುರಾಗಿದ್ದರು. ಆದ್ದರಿಂದ ಅವರು ರಕ್ತದ ಒತ್ತಡಕ್ಕೆ ಒಳಗಾಗಬೇಕಾಯಿತು.

ಇತಿಹಾಸ ಪ್ರಸಿದ್ಧ ಬಿಹಾರ ಭೂಕಂಪ ಆದಾಗ, ಗಾಂಧೀಜಿ ಕುಮಾರಪ್ಪನವರನ್ನು ಅಲ್ಲಿಗೆ ಪರಿಹಾರ ಕಾರ್ಯಕ್ಕೆ ಕಳಿಸಿದರು. ಕುಮಾರಪ್ಪ ಆ ಕಾರ್ಯದಲ್ಲಿ ತನ್ಮಯರಾಗಿ ಪೂರಾ ಮುಳುಗಿದರು. ಎಂದಿನಂತೆ ಗಾಂಧೀಜಿ ಕಾರ್ಯದ ಪ್ರಗತಿಯುನ್ನು ತಿಳಿಯುಬಯುಸಿದರು. ಕಾರ್ಯವನ್ನು ನೋಡಿ ಅದರ ಬಗ್ಗೆ ವರದಿ ಮಾಡಲು ಕುಮಾರಪ್ಪನವರಿಗೆ ಹೇಳಿ ಕಳಿಸಿದರು. ಕುಮಾರಪ್ಪ ಕೊಟ್ಟ ಉತ್ತರ ಇದು. "ನಾನು ಕೆಲಸದಲ್ಲಿ ಮುಳುಗಿದ್ದೇನೆ, ಗಾಂಧೀಜಿ ನೋಡಬಯಸಿದರೆ, ಅವರೇ ಇಲ್ಲಿಗೆ ಬರಲಿ." ಕುಮಾರಪ್ಪನವರ ಧಾಟಿಯೆ ಹೀಗೆ. ಇದರಲ್ಲಿ ಅಗೌರವದ ಗಂಧವೇನೂ ಇರಲಿಲ್ಲ. ಗಾಂಧೀಜಿಯೂ ಇದನ್ನು ಅಗೌರವ ಎಂದು ಭಾವಿಸಲಿಲ್ಲ. ಸಂತ್ರಸ್ತರ ಸೇವೆಯಲ್ಲಿ ಕುಮಾರಪ್ಪನವರಿಗೆ ಇದ್ದ ದೃಢ ನಿಷ್ಠೆಯ ಬಿಗಿ ಎಂದೇ ಭಾವಿಸಿದರು.

ಇನ್ನೊಂದು ಘಟನೆ ಸ್ವಾರಸ್ಯಕರ. ಬಿಹಾರ ಭೂಕಂಪ ಪರಿಹಾರ ಸಮಿತಿಯ ಸಭೆಗೆ ಹಾಜರಾಗಲೆಂದು ಹಾಗೂ ಪರಿಹಾರ ಕಾರ್ಯವನ್ನು ಅವಲೋಕಿಸಲೆಂದು ಗಾಂಧೀಜಿ ಪಟ್ನಾಗೆ ಬಂದರು. ಕೆಲವು ಕಾರ್ಯಕರ್ತರೂ ಜೊತೆಗಿದ್ದರು. ಹಾಲು ಹಣ್ಣು ತರಕಾರಿ ಇತ್ಯಾದಿ ವಿಶೇಷ ಪದಾರ್ಥಗಳು ಬೇಕೆಂದು ಕೆಲವರಿಗೆ ಆಸೆ. ಆದರೆ ಕುಮಾರಪ್ಪನವರ ಪ್ರಕಾರ, ಇದನ್ನೆಲ್ಲ ಒದಗಿಸುವುದು ಆಗದ ಮಾತು. ಏಕೆಂದರೆ, ಅವುಗಳ ಸರಬರಾಜಿನಿಂದ, ಅವರೇ ವಿಧಿಸಿದ್ದ ಆಹಾರದ ಆಣೆ ಮಿತಿ ಮೀರಿ ಹೋಗುತ್ತಿತ್ತು. ಆ ಮಿತಿಯ ನಿಯಮ ಕಾರ್ಯಕರ್ತರಿಗೆ ಮಾತ್ರ ಅಲ್ಲ. ಸ್ವತಃ ಕುಮಾರಪ್ಪನವರಿಗೂ ಕೂಡ. ಅದು ಇಕ್ಕಟ್ಟಿನ ಸಂದರ್ಭ. ಇದನ್ನು ಅವರು ಮಹದೇವ ಭಾಯಿಗೆ ವಿವರಿಸಿದರು. ಗಾಂಧೀಜಿ ಮತ್ತು ಅವರ ತಂಡದವರ ಆಹಾರ ವೆಚ್ಚಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದರು. ವಿಷಯ ಗಾಂಧೀಜಿಯವರಿಗೆ ಮುಟ್ಟಿತು. ಅವರು ಕುಮಾರಪ್ಪನವರಿಗೆ ಹೇಳಿದರು. "ಪರಿಹಾರ ಕಾರ್ಯದಲ್ಲಿ ನೆರವಾಗಲೆಂದೇ ನಾನು ಇಷ್ಟು ದೂರ ಬಂದಿರುವುದು. ಇಲ್ಲಿಗೆ ಬರಲು ಇದೊಂದೇ ಉದ್ದೇಶ. ಅಂದಮೇಲೆ ನನ್ನ ವೆಚ್ಚವನ್ನು ಪರಿಹಾರ ಸಮಿತಿ ಲೆಕ್ಕಕ್ಕೆ ಏಕೆ ಸೇರಿಸಬಾರದು?" ಆಗ ಕುಮಾರಪ್ಪ, ಸಾವಿರಾರು ಪರಿಹಾರ ಕಾರ್ಯಕರ್ತರ ವೆಚ್ಚದ ತನಿಖೆ, ಪರಿಮಿತಿಗಳನ್ನು ನೋಡಬೇಕಾದ ಸಮಸ್ಯೆಯನ್ನು ಗಾಂಧೀಜಿಗೆ ವಿವರಿಸಿದರು. ತಲಾ ಒಂದು ಆಣೆ ವೆಚ್ಚ ಹೆಚ್ಚಿಸಿದರೂ, ಪರಿಹಾರ ಸಮಿತಿಗೆ ಸಾವಿರಾರು ರೂಪಾಯಿ ಹೆಚ್ಚುವರಿ ಆಗುತ್ತದೆ.

ಆದರೆ ಗಾಂಧೀಜಿ ತಮ್ಮ ವೆಚ್ಚಕ್ಕೆ ಬೇರೆ ಏರ್ಪಾಡು ಮಾಡಿಕೊಳ್ಳುವುದು ಸರಿ ಎಂದು ಬಿನ್ನವಿಸಿದರು. ಈ ನಿಲುವನ್ನು ಗಾಂಧೀಜಿ ಮೆಚ್ಚಿಕೊಂಡರು. ತಮ್ಮ ಸಲುವಾಗಿ ಒಂದು ಪೈಸೆ ವೆಚ್ಚವೂ ಪರಿಹಾರ ಸಮಿತಿಗೆ ಹೊರೆ ಆಗದಂತೆ ನೋಡಿಕೊಳ್ಳಲು ಮಹದೇವ ಭಾಯಿ ಅವರಿಗೆ ಹೇಳಿದರು. ಇದು ಕುಮಾರಪ್ಪನವರ ಹಿರಿಮೆಗೆ ನಿದರ್ಶನ, ಗಾಂಧೀಜಿಯ ಹಿರಿಮೆಗೂ ನಿದರ್ಶನ.

"ಪೀಪ್ ಬಿಹೈಂಡ್ ದಿ ಐರನ್ ಕರ್ಟನ್" (ಪರದೆಯ ಹಿಂದಲ ನೋಟ) ಎಂಬುದು ಕುಮಾರಪ್ಪನವರ ಒಂದು ಪುಸ್ತಕ. ಅದಕ್ಕೆ ಮುನ್ನುಡಿ ಬರೆಯುತ್ತ ಕಾಕಾಸಾಹೇಬ ಕಾಲೇಲಕರರು ಹೇಳುತ್ತಾರೆ. "ಕುಮಾರಪ್ಪ ಒಳ್ಳೆಯ ಪಳಗಿದ ಕಾರ್ಯಕರ್ತರು. ಅವರಿಗೆ ಭಾರತದ ಎಳೆಎಳೆಯೂ ಗೊತ್ತು. ಅವರು ಗಾಂಧೀದರ್ಶನದಲ್ಲಿ ಆಳವಾಗಿ ಮಿಂದವರು. ಅವರು ವಿದ್ಯಾರ್ಥಿದೆಸೆಯಲ್ಲಿ ಅಮೆರಿಕಾ, ಯುರೋಪ್‌ಗಳಲ್ಲಿ ಸಾಕಷ್ಟು ದೀರ್ಘ ಸಮಯ ಇದ್ದುದರಿಂದ ಪಶ್ಚಿಮ ಜಗತ್ತಿನ ಕೂಲಂಕಷ ಅರಿವು ಅವರಿಗಿತ್ತು. ಆತ ಒಬ್ಬ ವೃತ್ತಿಪರ ಚಾರ್ಟರ್ಡ್ ಅಕೌಂಟೆಂಟ್ ಬೇರೆ. ಭಾರತದ ಸಾಲಗಳ ಸಮಸ್ಯೆ ಎಂಬುದರ ಬಗ್ಗೆ ಅಧ್ಯಯನ ಮಾಡಬೇಕೆಂದು ಅವರಿಗೆ ಗಾಂಧೀಜಿ ಹೇಳಿದರು. ಭಾರತದ ನಾನಾ ಪ್ರಾಂತ್ಯಗಳಲ್ಲಿ ಜನಸ್ತೋಮದ ಆರ್ಥಿಕ ಪರಿಸ್ಥಿತಿಯನ್ನು ಪರಿವೀಕ್ಷಣ ಮಾಡುವ ಅವಕಾಶವೂ ಅವರಿಗೆ ದೊರಕಿತ್ತು. ಕಡೆಗೆ, ಭಾರತದ ಗ್ರಾಮ ಕೈಗಾರಿಕೆಗಳ ಪುನರುತ್ಥಾನದ ಕಾರ್ಯವನ್ನು ಸಂಯೋಜಿಸಲು ಗಾಂಧೀಜಿ ಅವರನ್ನು ಆರಿಸಿದರು. ಅಂಥ ಪರಿಪಕ್ವ ಅರ್ಥಶಾಸ್ತ್ರಜ್ಞ ಹಾಗೂ ನಿಷ್ಠ ಸಾಮಾಜಿಕ ಕಾರ್ಯಕರ್ತರ ಅನುಭವದ ಲಾಭವನ್ನು ರಾಷ್ಟ್ರ ಹಾಗೂ ರಾಷ್ಟ್ರಪ್ರಭುತ್ವ ಪಡೆದುಕೊಳ್ಳಬೇಕು. ಭಾರತದಲ್ಲಿ ಯಾವ ಸ್ವಾರ್ಥ ಹಿತವೂ ಇಲ್ಲದ, ಯಾವ ಸ್ವಹಿತಾಸಕ್ತಿಯ ಆಸೆಯೂ ಇಲ್ಲದ ಹಾಗೂ ಯಾವ ಪೂರ್ವಾಗ್ರಹವೂ ಇಲ್ಲದ ಕೆಲವೇ ವ್ಯಕ್ತಿಗಳಲ್ಲಿ ಕುಮಾರಪ್ಪ ಒಬ್ಬರು. ಇದು ಒಬ್ಬ ನಿಷ್ಠಾವಂತ ಸಾಮಾಜಿಕ ಕಾರ್ಯಕರ್ತನ ವಾಸ್ತವವಾದ ನಿಖರವಾದ ವಿಶ್ಲೇಷಣೆ.

ಒಮ್ಮೆ ಗಾಂಧೀಜಿ ಕಸ್ತೂರಿಬಾ ಸಮೇತ ಮಗನವಾಡಿಗೆ ಹೋದರು. ಕುಮಾರಪ್ಪನವರೊಂದಿಗೆ ಕೆಲವು ದಿನ ಇದ್ದರು. ಕುಮಾರಪ್ಪ ಹರಿನಾರಾಣೆ ಆಶ್ರಮವಾಸಿ. ಅವರ ಊಟ ಗ್ರಾಮೋದ್ಯೋಗ ವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ. ಪ್ರತಿದಿನ ಸಫಾಯಿ ಕಾರ್ಯಕ್ರಮ (ಪಾಕೀಜು ಕೆಲಸ) ದಲ್ಲಿ ಭಾಗವಹಿಸುತ್ತಿದ್ದರು. ಒಂದು ದಿನ ಅಡುಗೆಮನೆಯ ಆಚೆ ಅಂಗಳದಲ್ಲಿ ಮುಸುರೆ ಪಾತ್ರೆಗಳನ್ನು ತೊಳೆಯುತ್ತಿದ್ದರು. ಜೊತೆಗೆ ಗಾಂಧೀಜಿ ಸಹ, ಇಬ್ಬರೂ ಆ ಕೆಲಸದಲ್ಲಿ ಮಗ್ನರಾಗಿದ್ದರು. ಕಸ್ತೂರಿಬಾ ಅಲ್ಲಿಗೆ ಬಂದರು. ಕೋಪ ಬಂತು ಅವರಿಗೆ, "ನಿಮಗೆ ಬೇರೆ ಕೆಲಸ ಕಾದಿದೆ" ಎಂದು ಸಿಟ್ಟಿನಿಂದ ಗಾಂಧೀಜಿಗೆ ಹೇಳಿದರು. ಗಾಂಧೀಜಿ ತೊಳೆಯುತ್ತಿದ್ದ ಪಾತ್ರೆಯನ್ನು ಸೆಳೆದುಕೊಂಡು, "ನೀವು ಹೋಗಿ, ನಾನು ಮುಸುರೆ ತೊಳೆಯುತ್ತೇನೆ." ಎಂದರು ಗಾಂಧೀಜಿ ನಸುನಕ್ಕು ಹೇಳಿದರು. "ನೋಡಿದೆಯಾ ಕುಮಾರಪ್ಪ, ನೀನೇ ಅದೃಷ್ಟಶಾಲಿ. ಬಯ್ಯಲು ನಿನಗೆ ಹೆಂಡತಿ ಇಲ್ಲ. ಮನೆಯ ನೆಮ್ಮದಿ ಉಳಿಸಲು ನಾನು ಹೆಂಡತಿಯ ಮಾತು ಕೇಳಬೇಕು. ನಾನು ಹೋಗುತ್ತೇನೆ. ಪಾತ್ರೆ ತೊಳೆಯುವ ಕೆಲಸವನ್ನು ಕಸ್ತೂರಿಬಾ ಮುಗಿಸುತ್ತಾಳೆ."

ಕುಮಾರಪ್ಪನವರೂ ನಗುತ್ತ ಹೇಳಿದರು." "ನಿಮ್ಮ ಅರ್ಧಾಂಗಿ ಕೆಲಸ ಮುಗಿಸಿದರೆ, ಏನೂ ತಕರಾರು ಇಲ್ಲ." ಕುಮಾರಪ್ಪನವರಿಗೆ, ಶ್ರಮವೇ ಜೀವನದ ಆಧಾರ. ಬುದ್ಧಿಜೀವಿಗಳು ಕೈಕೆಸರು ಮಾಡಿಕೊಳ್ಳಬೇಕು. ಅದೇ ರೀತಿ ದುಡಿಯುವ ಜನರೂ ತಮ್ಮ ಬೌದ್ಧಿಕ ಪ್ರಗತಿಗಾಗಿ ಶ್ರಮಿಸಬೇಕು. ಈ ಪರಿಕಲ್ಪನೆಯಲ್ಲಿ ಕುಮಾರಪ್ಪ, ಗಾಂಧೀಜಿ ಇಬ್ಬರಿಗೂ ದೃಢನಂಬಿಕೆ.

ಕುಮಾರಪ್ಪ 1947ರಲ್ಲಿ ಇಂಗ್ಲೆಂಡಿಗೆ ಹೋದರು. ಅಲ್ಲಿ ಶಾಂತಿ ಕಾರ್ಯಾಸಕ್ತ ಸಂಘ ಸಂಸ್ಥೆಗಳ ಹಾಗೂ ಕಾರ್ಯಕರ್ತರ ಸಂಪರ್ಕ ಬೆಳೆಸಿಕೊಂಡರು. ಇಂಗ್ಲೆಂಡಿನ ಜನ ಯುದ್ಧದ ಬಿಸಿ ಅನುಭವಿಸಿದ್ದರು. ಅವರಿಗೆ ಕುಮಾರಪ್ಪನವರ ಭಾಷಣಗಳು ತುಂಬ ಪ್ರೋತ್ಸಾಹಕವಾಗಿದ್ದವು, ಸ್ಫೂರ್ತಿದಾಯಕವಾಗಿದ್ದವು. ಅಂತಾರಾಷ್ಟ್ರೀಯ ಯುದ್ಧ ವಿರೋಧಿಗಳ ಸಂಸ್ಥೆ 1949-50 ರಲ್ಲಿ ಶಾಂತಿನಿಕೇತನದಲ್ಲಿ, ಸೇವಾಗ್ರಾಮದಲ್ಲಿ ಎರಡೂ ಕಡೆ ಸಮ್ಮೇಳನಗಳನ್ನು ಏರ್ಪಡಿಸಿತ್ತು. ಎರಡರಲ್ಲೂ ಕುಮಾರಪ್ಪನವರೇ ಪ್ರಧಾನ ಭಾಷಣಕಾರರು, ಅವರ ಮಾತು ಸಭಾಸದರಿಗೆ ಸ್ಫೂರ್ತಿದಾಯಕವಾಗಿತ್ತು. 1951ರಲ್ಲಿ ಅವರು ಚೀನಾಗೆ ಭೇಟಿಯಿತ್ತರು. ಅಲ್ಲಿ ಭಾರತದ ಪರವಾದ ತಂಡದಲ್ಲಿ ಸದಸ್ಯರಾಗಿ ಅಲ್ಲಿನ ಸ್ವಾತಂತ್ರ್ಯದಿನದಲ್ಲಿ ಭಾಗವಹಿಸಿದ್ದರು. ಚೀನಾ ನಡೆಸುತ್ತಿದ್ದ ಸಮಾಜ ನಿರ್ಮಾಣ ಕಾರ್ಯದಲ್ಲಿ ಆಸಕ್ತಿವಹಿಸಿ ಅಧ್ಯಯನ ಮಾಡಿದರು. ಚೀನಾ ಖಾಸಗಿ ಭೂಮಾಲಿಕತ್ವವನ್ನು ತೆಗೆದು ಹಾಕಿತ್ತು. ರೈತರ ಸಹಕಾರ ಸಂಘಗಳನ್ನು-ಕಮ್ಯೂನ್-ಜಾರಿಗೆ ತಂದಿತ್ತು. ಆ ಸಂಘಗಳು ಉತ್ಪಾದನೆ ಹಾಗೂ ವಿತರಣೆಗಳಲ್ಲಿ ಸ್ವಾವಲಂಬಿ ಆಗುವಂತೆ ಮಾಡಿತ್ತು- ಅವರು ಚೀನಾದಿಂದ ಬಂದ ಮೇಲೆ "ಜನತಾ ಚೀನಾ, ನಾನು ಕಂಡದ್ದು, ಕಲಿತದ್ದು", ಎಂಬ ಪುಸ್ತಕವನ್ನು ಬರೆದರು.

ಅನಂತರ ಅವರು ಭಾರತ ಸರ್ಕಾರದ ಕೋರಿಕೆಯಂತೆ, ಕೃಷಿ ಮತ್ತು ಗೃಹ ಕೈಗಾರಿಕೆಗಳನ್ನು ಅಧ್ಯಯನ ಮಾಡಲು ಜಪಾನಿಗೆ ಹೋಗಿ ಬಂದರು. "ಜಪಾನಿನ ಕೃಷಿ, ಗೃಹಕೈಗಾರಿಕೆ ಹಾಗೂ ಸಣ್ಣಕೈಗಾರಿಕೆಗಳು" ಎಂಬ ಒಂದು ವಿವರವಾದ ವರದಿಯನ್ನು ಪ್ರಕಟಿಸಿದರು.

ಗ್ರಾಮ ಪುನರುದ್ಧಾರದ ಬಗ್ಗೆ ಅವರು ತಮ್ಮದೇ ಆದ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಅದಕ್ಕೆ ವಾಸ್ತವಿಕ ರೂಪು ಕೊಡುವ ಉದ್ದೇಶದಿಂದ, ಅವರು ವರ್ಧಾ ಹತ್ತಿರ ಸೆಲ್ಡೊ ಎಂಬ ಹಳ್ಳಿಯಲ್ಲಿ ಒಂದು ಕೇಂದ್ರವನ್ನು ಆರಂಭಿಸಿದರು. ಕೆಲವು ಎಕರೆ ಜಮೀನಿನಲ್ಲಿ. ಕೃಷಿ ಮತ್ತು ಕೃಷಿ ಕೈಗಾರಿಕೆಗಳೇ ಆ ಗ್ರಾಮಕೇಂದ್ರದ ಆಧಾರ. ಅದಕ್ಕೆ ಪನ್ನೈ ಆಶ್ರಮ ಎಂದು ಹೆಸರಿಟ್ಟರು. ಮುಂದೆ, ಪನ್ನೈ ಆಶ್ರಮಕ್ಕೆ ತಮ್ಮ ಸರ್ವಗಮನ ನೀಡುವ ಉದ್ದೇಶದಿಂದ ಅವರು, ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಅಧ್ಯಕ್ಷ ಪದವಿಯನ್ನೂ ಅದರ ಚಟುವಟಿಕೆಗಳನ್ನೂ ಕೈಬಿಟ್ಟರು.

1952ರಲ್ಲಿ ಲೇಖಕ ಮಗನವಾಡಿಯಲ್ಲಿ ವಿದ್ಯಾರ್ಥಿಯಾಗಿ ಇದ್ದಾಗ, ಕುಮಾರಪ್ಪನವರು, ಅಂತಾರಾಷ್ಟ್ರೀಯ ಅರ್ಥಶಾಸ್ತ್ರಜ್ಞರ ಸಮ್ಮೇಳನಕ್ಕೆ ಆಹ್ವಾನಿತರಾಗಿ ಮಾಸ್ಕೋಗೆ ಹೋದರು.

ರಷ್ಯಾದ ಆರ್ಥಿಕ ಪುನರ್ರಚನಾ ಕಾರ್ಯಗಳ ಕೂಲಂಕಷ ಅಧ್ಯಯನ ಮಾಡಿದರು. ಅಲ್ಲಿನ ಆರ್ಥಿಕ ಪ್ರಗತಿಯೇನೋ ಅವರಿಗೆ ತುಂಬ ಹಿಡಿಸಿತು. ಆದರೆ ಅಲ್ಲಿ ವ್ಯಕ್ತಿಸ್ವಾತಂತ್ರ್ಯದ ಬಗ್ಗೆ ರಷ್ಯಾ ಸರ್ಕಾರದ ನಿರ್ಲಕ್ಷ್ಯ ಹಾಗೂ ಶಸ್ತ್ರಾಸ್ತ್ರಗಳ ಬಗೆಗೆ ಅತಿಯಾದ ಗಮನ ಇವು ಅವರಿಗೆ ಹಿಡಿಸಲಿಲ್ಲ. ಅದರ ಬಗ್ಗೆ ಮುಕ್ತರಾಗಿ ಟೀಕೆ ಮಾಡಿದರು.

ಅದೇ ವರ್ಷ ಅವರು ಜರ್ಮನಿಗೆ ಹೋಗಿ, ವಿಶ್ವಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದರು. ಗಾಂಧೀಜಿಯ ಶಾಂತಿ ಅರ್ಥಶಾಸ್ತ್ರ ಕಲ್ಪನೆಯನ್ನು ಸಭೆಯ ಮುಂದೆ ನಿವೇದಿಸಿದರು. ಯುರೋಪ್ ದೇಶಗಳು ಹಿಂಸೆ ಮತ್ತು ಯುದ್ಧಗಳ ಹಾದಿಯಲ್ಲಿ ನಡೆಯುತ್ತಿರುವವರೆಗೆ, ಪ್ರಜಾ ಪ್ರಭುತ್ವವನ್ನು ಶಾಂತಿಯುತ ಸಮಾಜವನ್ನು ನೆಲೆಗೊಳಿಸುವುದು ಸಾಧ್ಯವಿಲ್ಲ ಎಂದು ನೇರವಾಗಿ ತಿಳಿಸಿದರು. ಇದಕ್ಕೆ ಕಾರಣವಾದ ಸನ್ನಿವೇಶವೆಂದರೆ, ಶೀತಲ ಸಮರದ ಹಿನ್ನಲೆಯಲ್ಲಿ ರಷ್ಯಾ ಅಮೆರಿಕವನ್ನು ಟೀಕಿಸುತ್ತಿದ್ದುದು, ಜರ್ಮನಿಯಿಂದ ಮರಳಿದ ನಂತರ, "ಕಬ್ಬಿಣದ ಪರದೆಯ ಹಿಂದಿನ ನೋಟ" ಎಂಬ ಪುಸ್ತಕ ಬರೆದರು.

ಸಮಾಜವಾದಿ ತತ್ವದ ಬಗ್ಗೆ ಕುಮಾರಪ್ಪನವರಿಗೆ ಯಾವಾಗಲೂ ಒಲವು, ಅದೇ ರೀತಿ ಪಾಶ್ಚಿಮಾತ್ಯ ದೇಶಗಳಲ್ಲಿನ ಬಡಜನರ ಶೋಷಣೆ ಬಗ್ಗೆ ಅಸಂತುಷ್ಟಿ. ಇದು ಭಾರತ ಸರ್ಕಾರಕ್ಕೆ ಇಷ್ಟವಾಗಲಿಲ್ಲ. ಆ ಪ್ರತಿಕೂಲ ಸನ್ನಿವೇಶದಲ್ಲೂ ಕುಮಾರಪ್ಪ ತಮ್ಮ ಟೀಕಾಸ್ತ್ರ ಪ್ರಯೋಗವನ್ನು ಮುಂದುವರಿಸಿದರು. ಅದರಿಂದಾಗಿ ಅವರ ಆರೋಗ್ಯ ಏರುಪೇರಾಯಿತು. ರಕ್ತದ ಒತ್ತಡ ಹೆಚ್ಚಿತು. ಇದರಿಂದ ಅವರು ತಮ್ಮ ಚಟುವಟಿಕೆಗಳನ್ನು ತಗ್ಗಿಸಬೇಕಾಯಿತು. ತಮಿಳುನಾಡಿನ ಮಧುರೈ ಜಿಲ್ಲೆಯ ಕಲ್ಲುಪಟ್ಟಿಯ ಗಾಂಧೀ ನಿಕೇತನ ಆಶ್ರಮಕ್ಕೆ ಹೋಗಿ, ನೆಲೆಸಿದರು. ಅನಾರೋಗ್ಯವಿದ್ದರೂ ಅವರು ಕಾಂಚಿಪುರದಲ್ಲಿ ನಡೆದ ಅಖಿಲ ಭಾರತ ಸರ್ವೋದಯ ಸಮ್ಮೇಳನಕ್ಕೆ ಹೋದರು. ಆಚಾರ್ಯ ವಿನೋಬಾ ಸಹ ಬಂದಿದ್ದರು.

ಆಗಿನ ರಾಷ್ಟ್ರಪತಿ ಡಾ|| ರಾಜೇಂದ್ರಪ್ರಸಾದರು ಕಲ್ಲುಪಟ್ಟಿಗೆ ಬಂದು ಕುಮಾರಪ್ಪನವರನ್ನು ಭೇಟಿಯಾದರು. ಅವರಿಬ್ಬರ ಮಾತುಕತೆಯಲ್ಲಿ, ಕುಮಾರಪ್ಪನವರು ಭಾರತ ಸರ್ಕಾರದ ಅಂದಿನ ಅರ್ಥನೀತಿ, ಗ್ರಾಮೀಣ ಜನತೆಯ ಹಿತಕ್ಕೆ ವಿರುದ್ಧವಾಗಿ ಸಾಗುತ್ತಿದೆ ಎಂದು ರಾಷ್ಟ್ರಪತಿಗಳಿಗೆ ಮತ್ತೆ ಮತ್ತೆ ಹೇಳಿದರು. ನಾವು ಗಾಂಧಿಯವರ ಭಜನೆ ಮಾಡುತ್ತೇವೆ. ಆದರೆ ಅವರು ತೋರಿಸಿದ ದಾರಿಗೆ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತೇವೆ. ಇದನ್ನು ಮಾಡುತ್ತಿರುವವರು ಗಾಂಧೀಜಿ ಬದುಕಿದ್ದಾಗ ಅವರ ಅನುಯಾಯಿಗಳಾಗಿದ್ದವರೇ. ಅವರು ಈಗ ಅಧಿಕಾರಕ್ಕೆ ಬಂದಿದ್ದಾರೆ. ಗಾಂಧೀಜಿಯ ಸಂದೇಶವನ್ನು ಅಸಡ್ಡೆ ಮಾಡುತ್ತಿದ್ದಾರೆ. ಯಾವುದೇ ಮುಲಾಜಿಲ್ಲದೇ ಹೀಗೆ ಅಧ್ಯಕ್ಷರಿಗೆ ಹೇಳಿದರು.

1953ರಲ್ಲಿ ಕುಮಾರಪ್ಪ ಗ್ರಾಮೋದ್ಯೋಗ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ. "ಹದಿನೈದು ವರ್ಷಗಳ ಹಿಂದ ನನ್ನ ದೇಹದ ಬಲಭಾಗಕ್ಕೆ ಪಾರ್ಶ್ವವಾಯು ಆಯಿತು. ಡಾ|| ಜೀವರಾಜ ಮೆಹತಾ ಮತ್ತು ಡಾ|| ಗಿಲ್ಡರ್ ಅವರು ಪರೀಕ್ಷೆಮಾಡಿ, ರೋಗವನ್ನು

ಪತ್ತೆ ಮಾಡಿದರು. ಇದು ಅಧಿಕ ರಕ್ತ ಒತ್ತಡದ ಪರಿಣಾಮ, ಸಂಪೂರ್ಣ ವಿಶ್ರಾಂತಿ ಅಗತ್ಯ ಎಂದು ಸೂಚಿಸಿದರು. ಆಗ ಮಹಾತ್ಮ ಗಾಂಧೀಜಿ ನನ್ನನ್ನು ಸೇವಾಗ್ರಾಮಕ್ಕೆ ಕರೆಸಿ, ತಮ್ಮ ಕುಟೀರದಲ್ಲಿಯೇ ಇಟ್ಟುಕೊಂಡರು. ಸುಮಾರು ಒಂದು ವರ್ಷ ಕಾಲ ಪ್ರಕೃತಿ ಚಿಕಿತ್ಸೆ, ವಿಶ್ರಾಂತಿಗಳಿಂದ ವಾಸಿ ಮಾಡಿದರು" ಮುಂದೆ ಕುಮಾರಪ್ಪ ಕೂನೂರಿನಲ್ಲಿ ಒಂದು ಸಮ್ಮೇಳನದಲ್ಲಿ ಇದ್ದಾಗ ಮತ್ತೆ ರಕ್ತದ ಒತ್ತಡ ಏರಿತು. ಅವರನ್ನು ಬೆಂಗಳೂರಿಗೆ ಕರೆತಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಲಾಯಿತು. ಅವರು ಕರ್ನಾಟಕಕ್ಕೆ ಹಲವು ಬಾರಿ ಬಂದಿದ್ದರು. 1952ರಲ್ಲಿ ಪಶ್ಚಿಮವಾಹಿನಿಯಲ್ಲಿ ನಡೆದ ಸರ್ವೋದಯ ಮೇಳದಲ್ಲಿ ಭಾಗವಹಿಸಿದ್ದರು.

1960ರಲ್ಲಿ ಅವರನ್ನು ಮದರಾಸು ಸೆಂಟ್ರಲ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಪಂಡಿತ ಜವಾಹರಲಾಲ ನೆಹರು ಆಸ್ಪತ್ರೆಗೆ ಬಂದು ಭೇಟಿ ಮಾಡಿದರು. ಇಬ್ಬರ ಭೇಟಿ ತುಂಬ ಭಾವಪೂರ್ಣವಾಗಿತ್ತು. ಪರಸ್ಪರ ಕೈಹಿಡಿದುಕೊಂಡು ತುಂಬ ಹೊತ್ತು ಮೌನವಾಗಿ ಇದ್ದರು. ಹಳೆಯ ನೆನಪುಗಳು ಅವರ ಮನಸ್ಸಿಗೆ ಬಂದಿದ್ದವೋ ಏನೋ, ಸ್ವಲ್ಪ ಹೊತ್ತಾದ ಮೇಲೆ ನೆಹರು ಅವರು ದೇಶದ ಆರ್ಥಿಕ ಅಭಿವೃದ್ಧಿಗೆ ಸಲಹೆ ನೀಡಬೇಕೆಂದು ಕುಮಾರಪ್ಪನವರನ್ನು ಕೋರಿದರು. ಕುಮಾರಪ್ಪನವರು ಹೇಳುತ್ತಿದ್ದಂತೆ, ನೆಹರು ಹಾಳೆಯಲ್ಲಿ ಗುರುತು ಮಾಡಿಕೊಳ್ಳುತ್ತಿದ್ದರು. ಇದನ್ನು ನೋಡಿದ ಕುಮಾರಪ್ಪ, ಆ ಹಾಳೆಯನ್ನು ಕೊಡಿ ಎಂದರು. ಅದನ್ನು ತೆಗೆದುಕೊಂಡು ಹರಿದು ಹಾಕಿದರು. "ಏನು ಮಾಡಿಬಿಟ್ಟಿರಿ?" ಎಂದು ನೆಹರು ಕೇಳಿದರು. ಕುಮಾರಪ್ಪ ನಕ್ಕು ಹೇಳಿದರು, "ನೀವು ದೆಹಲಿಗೆ ಹೋದ ಮೇಲೆ ಏನು ಮಾಡುತ್ತಿದ್ದಿರೋ ಅದನ್ನೇ ನಾನು ಮಾಡಿದೆ." ಗಾಂಧೀಜಿಯ ಇಬ್ಬರು ಅನುಯಾಯಿಗಳ ನಡುವೆ ನಡೆದಿದ್ದು ಇದು. ಒಬ್ಬರು ಗಾಂಧೀಮಾರ್ಗಕ್ಕೆ ಬದ್ಧರಾಗಿದ್ದರು. ಇನ್ನೊಬ್ಬರು ರಾಜಕೀಯ ಒತ್ತಡದಲ್ಲಿ ಮಾರ್ಗದಿಂದ ಆಚೆ ಸರಿದಿದ್ದರು.

ಗ್ರಾಮೋದ್ಧಾರ ಸತ್ಯ ಅಹಿಂಸೆಗಳನ್ನು ಆಧರಿಸಿರಬೇಕು. ಇದು ಕುಮಾರಪ್ಪನವರ ಗುರಿ. ಇದಕ್ಕಾಗಿ ಅವರು ಮಿತಿಮೀರಿ ಶ್ರಮಿಸಿದ್ದರು. ಅವರ ರಕ್ತದ ಒತ್ತಡ ಹೆಚ್ಚಿತು. ದೇಹ ಸಹಕರಿಸದಿದ್ದರೂ, ಅವರ ಚೇತನ ಉನ್ನತವಾಗಿತ್ತು. ಪರೀಕ್ಷೆ ಮಾಡಿದ ಡಾಕ್ಟರುಗಳು ಪೂರ್ಣ ವಿಶ್ರಾಂತಿಯನ್ನು ಸಲಹೆ ಮಾಡಿದರು. 1953 ಜುಲೈನಲ್ಲಿ ಅವರು ಕೆಲಸದಿಂದ ನಿವೃತ್ತರಾಗುವ ಯೋಚನೆಯನ್ನು ಗ್ರಾಮೋದ್ಯೋಗ ಪತ್ರಿಕೆಯಲ್ಲಿ ಬರೆದು ತಿಳಿಸಿದರು. "ಗಾಂಧೀಜಿ ಉಸ್ತುವಾರಿಯಲ್ಲಿ ಪ್ರಕೃತಿ ಚಿಕಿತ್ಸೆ ಪಡೆದಂದಿನಿಂದ, ಆ ಅತ್ಯುತ್ತಮ ಸ್ವಯಂ ಆರೈಕೆಯಿಂದಾಗಿ ನಾನು ಕೆಲಸ ಮಾಡಲು ಸಾಧ್ಯವಾಗಿದೆ. ಗೆಲವಾಗಿದ್ದಾಗ ದಿನಕ್ಕೆ 10-12 ಘಂಟೆ ಕೆಲಸ ಮಾಡುತ್ತೇನೆ. ಅಷ್ಟು ಗೆಲವು ಇಲ್ಲದಿದ್ದಾಗ ಕೆಲಸ ಕಡಿಮೆ ಮಾಡುತ್ತೇನೆ. ಅರವತ್ತು ವರ್ಷಗಳ ಶ್ರಮದಿಂದ ನನ್ನ ದೇಹ ಕಳೆದ ಕೆಲವು ವರ್ಷಗಳಿಂದಲೂ, ದುರ್ಬಲಗೊಳ್ಳುತ್ತ ಬಂದಿದೆ, ಇಷ್ಟಾದರೂ ಸೂಕ್ತ ಎಚ್ಚರದಿಂದ ಹಾಗೂ ನಿತ್ಯದ ಹೊಂದಾಣಿಕೆಯಿಂದ, ನಾನು ಚೀನಾ, ಜಪಾನು, ಜರ್ಮನಿ, ಸೋವಿಯತ್ ರಷ್ಯಾಗಳಲೆಲ್ಲಾ ದೂರ ದೂರ ಸಂಚಾರ ಮಾಡಲು ಸಾಧ್ಯವಾಗಿದೆ. ಜೊತೆಗೆ ದೈನಂದಿನ ಕೆಲಸವನ್ನು ನಿಭಾಯಿಸಿದ್ದೇನೆ."

ಕಾಯಿಲೆ ಇದ್ದರೂ, ಅವರು ಕೂನೂರಿನಲ್ಲಿ ನಡೆದ ಸಮ್ಮೇಳನಕ್ಕೆ ಹೋದರು. ಅಲ್ಲಿ ಪಾರ್ಶ್ವವಾಯು ಹೊಡೆದು ಒಂದು ವಾರ ಮಲಗಿಸಿತು. ಅವರನ್ನು ಪರೀಕ್ಷೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ವಿವರವಾದ ಪರೀಕ್ಷೆ ಮಾಡಿದ ಮುಖ್ಯ ವೈದ್ಯರು ಮತ್ತೆ ಸಂಪೂರ್ಣ ವಿಶ್ರಾಂತಿಯನ್ನೇ ಸಲಹೆ ಮಾಡಿದರು. ಸಾಧ್ಯವಾದರೆ ನಿವೃತ್ತರೇ ಆಗಿ ಎಂದರು.

"ಈ ವೈದ್ಯಕೀಯ ಸಲಹೆಗಳನ್ನು ನಾನು ಸರ್ವ ಸೇವಾ ಸಂಘದ ಮುಂದಿರಿಸಿ, ನಿವೃತ್ತನಾಗಲು ಅವಕಾಶ ಕೋರಿದೆ. ಈಗಲೇ ನಿವೃತ್ತಿ ಬೇಡ, ಕೆಲಸದ ತೀವ್ರತೆ ತಗ್ಗಿಸಿ, ಓಡಾಟ ಕಡಿಮೆ ಮಾಡಿ, ಒಂದು ಕಡೆ ನೆಲೆ ನಿಲ್ಲಿರಿ. ದಿನದಿನದ ಕೆಲಸದ ಹೊಣೆಯನ್ನು ಬಿಟ್ಟು, ಮಾರ್ಗದರ್ಶನ, ಸಲಹೆಯಿತ್ತು, ಸಹಾಯ ಮಾಡಿ ಎಂದು ನನಗೆ ಹೇಳಲಾಗಿದೆ. ಹಾಗೆ ಮಾಡಲು ಪ್ರಯತ್ನಿಸುತ್ತಿದ್ದೇನೆ. ನನ್ನ ಆರೋಗ್ಯ ಅವಕಾಶವೀಯುವಷ್ಟರ ಮಟ್ಟಿಗೆ ಅವರ ಇಚ್ಛೆಯನ್ನು ಪೂರೈಸಲು ಪ್ರಯತ್ನಿಸುತ್ತಿದ್ದೇನೆ. " ಎಂದು ಬರೆದರು.

ಇದನ್ನು ಓದಿದ ಅನೇಕ ಬಂಧು-ಮಿತ್ರರು, ತಮ್ಮೊಡನೆ ಬಂದು ಇರಬೇಕೆಂದು ಕರೆದರು. ಅಂತಿಮವಾಗಿ ಅವರು ತಮಿಳುನಾಡಿನ ಮಧುರೆ ಜಿಲ್ಲೆಯ ಕಲ್ಲುಪಟ್ಟಿಯ ಗಾಂಧೀನಿಕೇತನ ಆಶ್ರಮದಲ್ಲಿ ಇರಲು ನಿರ್ಧರಿಸಿದರು. ಈ ಆಶ್ರಮ, ಗಾಂಧೀ ತತ್ವ ಶ್ರೇಷ್ಠರಾದ ಜಿ. ವೆಂಕಟಾಚಲಪತಿ ಮತ್ತು ಆರ್. ಗುರುಸ್ವಾಮಿ ಮುಂತಾದವರು ಕಟ್ಟಿದ್ದು, ಈಗಲೂ ಇದು ಖಾದಿ ಗ್ರಾಮೋದ್ಯೋಗ ಇತ್ಯಾದಿ ರಚನಾತ್ಮಕ ಕಾರ್ಯದಲ್ಲಿ ನಿರತವಾಗಿದೆ. ಎಣ್ಣೆ ಗಾಣದ ಉದ್ಯಮವನ್ನು ಸಂಘಟಿಸಲು ನನ್ನನ್ನೇ ಸರ್ವಸೇವಾ ಸಂಘ ಅಲ್ಲಿಗೆ ಕಳಿಸಿತು. ನಾನು ಸುಮಾರು ಒಂದು ವರ್ಷ ಅಲ್ಲಿದ್ದೆ. ಅಲ್ಲಿ ಬೆಳಿಗ್ಗೆ ಸಂಜೆ ಪ್ರಾರ್ಥನಾಸಭೆ ಇರುತ್ತಿತ್ತು. ಕುಮಾರಪ್ಪನವರು ಬರುತ್ತಿದ್ದರು, ಅವುಗಳಲ್ಲಿ ಭಾಗವಹಿಸುವ ಹಾಗೂ ಆಗಾಗ ಅವರೊಂದಿಗೆ ಮಾತನಾಡುವ ಭಾಗ್ಯ ನನಗೆ ದೊರತಿತ್ತು.

ಕುಮಾರಪ್ಪನವರ ಗೆಳೆಯ ಸ್ವಾಮಿ ಮುರುಗೇಶನ್ ಅವರು ಸಿಂಹಳದಲ್ಲಿ ಒಂದು ಆಶ್ರಮ ನಡೆಸುತ್ತಿದ್ದರು. ಕುಮಾರಪ್ಪ ವಿಶ್ರಾಂತಿಗಾಗಿ ಅಲ್ಲಿಗೆ ಹೋದರು. ಅಲ್ಲಿದ್ದಾಗ ಅವರಿಗೆ ಸ್ವಾಮೀಜಿ ಆಯುರ್ವೇದ ಚಿಕಿತ್ಸೆ ನಡೆಸಿದರು ಅನಂತರ ಅವರು ಕಲ್ಲುಪಟ್ಟಿಗೆ ಮರಳಿದರು. ಅವರಿಗಾಗಿಯೇ ಒಂದು ಹೊಸ ಕುಟೀರವನ್ನು ನಿರ್ಮಿಸಲಾಯಿತು. ಅದಕ್ಕೂ ಗಾಂಧೀ ನಿಕೇತನ ಆಶ್ರಮ ಖರ್ಚು ಮಾಡಲು ಬಿಡಲಿಲ್ಲ ಕುಮಾರಪ್ಪ, ಅನೇಕ ವರ್ಷಗಳ ಹಿಂದೆ ತಾವು ಇಂಗ್ಲೆಂಡಿನ ಬ್ಯಾಂಕಿನಲ್ಲಿ ಇಟ್ಟಿದ್ದ ಸಣ್ಣ ಮೊತ್ತವನ್ನು ಇದಕ್ಕಾಗಿ ಬಳಸಿದರು. ಉಳಿದ ಎಲ್ಲ ವೆಚ್ಚವನ್ನು ಸರ್ವ ಸೇವಾ ಸಂಘ ಭರಿಸಿತು.

ಭೂದಾನ ಚಳುವಳಿಯನ್ನು ವೀಕ್ಷಿಸಲೆಂದು ಅಮೇರಿಕಾದ ಇಬ್ಬರು ಪ್ರವಾಸಿಗರು ಮಿ. ರಾಬರ್ಟ್ ಮತ್ತು ಮಿ. ಬರ್ನಿಸ್ಟೀಲ್ ಭಾರತಕ್ಕೆ ಬಂದು ವಿನೋಬಾ ಸಂಗಡ ತಂಗಿದರು. ಅನಂತರ ಕಲ್ಲುಪಟ್ಟಿಗೆ ಬಂದರು. ಕುಮಾರಪ್ಪನವರೊಂದಿಗೆ ಚರ್ಚೆ ಮಾಡಿದರು. ತುಂಬ ಪ್ರಭಾವಿತರಾದರು. ಎರಡು ಸುದ್ದಿ ಚಿತ್ರಗಳನ್ನು ತೆಗೆದರು. ಒಂದು ವಿನೋಬಾಜಿಯ ಭೂದಾನ ಯಾತ್ರೆ ಕುರಿತ "ನಡಿಗೆ ಕ್ರಾಂತಿ", ಇನ್ನೊಂದು ಕುಮಾರಪ್ಪ ಹಾಗೂ ಅವರ ಕೆಲಸದ ಬಗ್ಗೆ "ಮೌನಕ್ರಾಂತಿ."

ಮುಂದೆ 1966ರಲ್ಲಿ ಆಗಿನ ಸಮುದಾಯ ಅಭಿವೃದ್ಧಿ ಖಾತೆಯ ರಾಜ್ಯಮಂತ್ರಿ ಶ್ರೀ ಎಸ್. ಕೆ. ಡೇ. ಕುಮಾರಪ್ಪನವರ ಭೇಟಿಗೆ ಕಲ್ಲುಪಟ್ಟಿಗೆ ಬಂದರು. ಹಲವು ವರ್ಷಗಳ ಹಿಂದೆ ಅವರು ವರ್ಧಾದ ಮಗನವಾಡಿಯಲ್ಲಿ ಕುಮಾರಪ್ಪನವರನ್ನು ಭೇಟಿಮಾಡಿದ್ದರು. ಭಾರತದ ಸರ್ಕಾರದ ಸಮುದಾಯ ಅಭಿವೃದ್ಧಿ ಯೋಜನೆಗೆ ಆಶೀರ್ವಾದ ಕೋರಿದ್ದರು. ಶ್ರೀ ಡೇ ಮತ್ತು ಕುಮಾರಪ್ಪನವರ ನಡುವಿನ ಸಂವಾದ ಸ್ವಾರಸ್ಯಕರವಾಗಿದೆ. ಶ್ರೀ ಡೇ ಹೇಳಿದರು, "ಕುಮಾರಪ್ಪಾಜಿ, ನಾಲ್ಕುವರ್ಷದ ಹಿಂದೆ ತಮ್ಮನ್ನು ಕಂಡು, ಸಮುದಾಯ ಅಭಿವೃದ್ಧಿ ಯೋಜನೆಯ ಯಶಸ್ಸಿಗಾಗಿ ತಮ್ಮ ಆಶೀರ್ವಾದ ಕೋರಿದ್ದೆ. ತಾವು ಇದರಲ್ಲಿ ಗಾಂಧೀವಿಚಾರ ಏನೂ ಇಲ್ಲ, ಇದರ ಜೊತೆಗೆ ದನಿಗೂಡಿಸಲಾರೆ, ಇದು ವಿಫಲವಾಗುವುದು ಖಂಡಿತ, ಎಂದಿದ್ದಿರಿ. ಈಗ ಯೋಜನೆ ಭಾರಿ ಯಶಸ್ವಿಯಾಗಿದೆ ಎಂದು ಬಿನ್ನವಿಸಲು ಬಂದಿದ್ದೇನೆ." ಕುಮಾರಪ್ಪ ಯಶಸ್ಸು ಎಂದರೆ ಏನು ? ಎಂದು ಕೇಳಿದರು. ರಸ್ತೆ, ಆಣೆಕಟ್ಟು ನಿರ್ಮಾಣ ಇತ್ಯಾದಿ ಇತ್ಯಾದಿ ಸಾಧನೆಗಳನ್ನು ಶ್ರೀ ಡೇ ವಿವರಿಸಿದರು. ಆಗ ಕುಮಾರಪ್ಪ, "ಡೇ ಅವರೇ ಇವೆಲ್ಲ ಯೋಜನೆಯ ಯಶಸ್ಸೇ" ಎಂದು ಕೇಳಿದರು. ಹಾಗಿದ್ದರೆ, ಒಂದು ಕಾರ್ಯದ ಯಶಸ್ಸನ್ನು ಅಳತೆ ಮಾಡುವುದೇ ಹೇಗೆ ? ಎಂದು ಶ್ರೀ ಡೇ ಕೇಳಿದರು. ಇದಕ್ಕೆ ಕುಮಾರಪ್ಪನವರ ಪ್ರತಿಕ್ರಿಯೆ ಹೀಗಿತ್ತು. "ಶ್ರೀ ಡೇ, ಸಮುದಾಯ ಅಭಿವೃದ್ಧಿ ಯೋಜನೆಯ ಯಾವುದಾದರೂ ಅಂಶವನ್ನು ಪ್ರಸ್ತಾವಿಸುವ ಮುನ್ನ ನಾನು ಕೆಲವು ವ್ಯಕ್ತಿಗಳ ಪಕ್ಕೆ ಎಲಬುಗಳನ್ನು ಎಣಿಸಿ ನೋಡುತ್ತೇನೆ. ಮೂರು ವರ್ಷದ ಯೋಜನೆ ಕಾರ್ಯದ ನಂತರ ಆ ಎಲಬುಗಳ ಮೇಲೆ ಸ್ವಲ್ಪವಾದರೂ ಮಾಂಸ ಬೆಳೆದಿದ್ದರೆ, ಅದನ್ನು ಯಶಸ್ಸು ಎನ್ನುತ್ತೇನೆ. ಡೇ, ನೀವು ಹಸಿದವನಿಗೆ ರೇಷ್ಮೆ ಅಂಗಿ ತೊಡಿಸಲು ಹೊರಟಿದ್ದೀರಿ, ಯಾವತ್ತೂ ಗೆಲ್ಲಲಾರಿರಿ", ಕುಮಾರಪ್ಪನವರ ದೃಷ್ಟಿ ಸರಿಯೋ ತಪ್ಪೋ ಎಂಬುದಕ್ಕೆ, ಮುಂದೆ ಸಮುದಾಯ ಅಭಿವೃದ್ಧಿ ಯೋಜನೆ ಬಗ್ಗೆ ಸಾಮಾನ್ಯ ಜನ ಎತ್ತಿದ ಟೀಕೆಗಳೇ ಸಾಕ್ಷಿ. ಅದು ಬಲ್ಲಿದರನ್ನು ಹೆಚ್ಚು ಬಲ್ಲಿದರನ್ನಾಗಿಸಿತು. ಬಡವರಿಗೆ ಏನೂ ಮಾಡಲಿಲ್ಲ ಎಂದೇ ಟೀಕೆ ಬಂತು. ಇದೆಲ್ಲದರ ಪರಿಣಾಮವಾಗಿ, ಇಡೀ ಯೋಜನೆಯನ್ನು ಪುನರ್ರೂಪಿಸಲು, ಭಾರತ ಸರ್ಕಾರ ಬಲವಂತರಾಯ್ ಮೆಹತಾ ಸಮಿತಿಯನ್ನು ನೇಮಿಸಬೇಕಾಯಿತು.

"ಗ್ರಾಮೋದ್ಯೋಗ ಪತ್ರಿಕೆ" ಯನ್ನು ಕುಮಾರಪ್ಪ ಹಲವಾರು ವರ್ಷಗಳಿಂದ ನಡೆಸುತ್ತಿದ್ದರು. ಕ್ಷೀಣಿಸುತ್ತಿದ್ದ ಅವರ ಆರೋಗ್ಯದಿಂದಾಗಿ ಅದನ್ನು ನಿಲ್ಲಿಸಬೇಕಾಯಿತು. ಅನಂತರ ಅವರು ವಿಶ್ರಾಂತಿಗಾಗಿ 1957ರಲ್ಲಿ ಬೆಂಗಳೂರಿಗೆ ಬಂದರು. 21-5-1957 ರಂದು ಅವರು ಬರೆದರು, "ಸತ್ಯಾಗ್ರಹವಿಲ್ಲದೆ ವಿಶ್ವಶಾಂತಿ ಪಡೆಯಲು ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ. ಆದ್ದರಿಂದ ನಾನು ಕ್ರಿಸ್‌ಮಸ್ ದ್ವೀಪಕ್ಕೆ ಹೋಗಿ ನನ್ನ ತಲೆಯನ್ನು ಬ್ರಿಟಿಷರಿಗೆ ಅರ್ಪಿಸಬೇಕೆಂದು ಹೇಳಿದ್ದೇನೆ. ನನ್ನೊಡನೆ ಬರುವುದಾಗಿ ಪಂಡಿತ್ ಸುಂದರಲಾಲ್ (ಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಇತಿಹಾಸಕಾರ) ಹೇಳಿದ್ದಾರೆ. ಸಾಕ್ಷಾತ್ ಕಾರ್ಯಸಾಧ್ಯ ವಿಧಾನ ಇದೊಂದೇ, ನಿರ್ಣಯ, ಸದ್ಭಾವನೆ ಏನೂ ಪ್ರಯೋಜನವಿಲ್ಲ."

ಡಾ|| ಭರತನ್ ಕುಮಾರಪ್ಪ, ಜೆ.ಸಿ.ಕೆ. ಅವರ ಕನಿಷ್ಠ ಸಹೋದರ, ಅವರ ಹಾದಿಯಲ್ಲೇ ಅನೇಕ ವರ್ಷ ನಡೆದು ದುಡಿದಿದ್ದರು. 25-6-1957ರಂದು ಅವರು

ದೆಹಲಿಯಲ್ಲಿ ನಿಧನರಾದರು. ಮೆದುಳಿನ ರಕ್ತಸ್ರಾವದಿಂದ. ಈ ಸುದ್ದಿ ಜೆ.ಸಿ.ಕೆ. ಅವರ ಆರೋಗ್ಯವನ್ನು ಮತ್ತಷ್ಟು ಕುಗ್ಗಿಸಿತು.

1960 ಜನವರಿ 4ರಂದು ಕುಮಾರಪ್ಪನವರ 69ನೆಯ ಹುಟ್ಟುಹಬ್ಬವನ್ನು ದೇಶದಲ್ಲೆಲ್ಲ ತುಂಬ ರಚನಾತ್ಮಕ ರೀತಿಯಲ್ಲಿ ಆಚರಿಸಲಾಯಿತು. ಮದರಾಸಿನಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಕುಮಾರಪ್ಪನವರೂ ಇದ್ದರು.

1960 ಜನವರಿ 26ರ ರಾತ್ರಿ, ಅವರಿಗೆ ಅರ್ಧಾಂಗವಾಯು ಹೊಡೆಯಿತು. ಕೋಣೆಯಲ್ಲಿ ಜಾರಿ ಬಿದ್ದರು. ವೈದ್ಯರು ಬಂದು ನೋಡಿದರು. ಜನವರಿ 30 ರಂದು ಸ್ವಲ್ಪ ಚೇತರಿಸಿಕೊಳ್ಳುವಂತೆ ಕಾಣಿಸಿತು. ಅನೇಕ ಜನ ಬಂದು ಸಂಜೆಯ ಸರ್ವೋದಯ ದಿನಾಚರಣೆಗೆ ಬರಬೇಕೆಂದು ಕೇಳಿಕೊಂಡರು. ಗಾಂಧೀಜಿಯ ನಿಧನಾನಂತರ, ಅವರ ದಾರಿಯಲ್ಲಿ ನಡೆಯದೆ ನಾವು ಹನ್ನೆರಡು ವರ್ಷ ವ್ಯರ್ಥಮಾಡಿದೆವು ಎಂದರು ಕುಮಾರಪ್ಪ. "ಇವೊತ್ತು ಗಾಂಧೀಜಿಗಾಗಿ ಹೇಗೆ ಪ್ರಾರ್ಥಿಸೋಣ?" ಎಂದರು.

ಅದೇ ದಿನ (1960 ಜನವರಿ 30) ರಾತ್ರಿ 9-30ಕ್ಕೆ ಕುಮಾರಪ್ಪ ಕೊನೆಯುಸಿರೆಳೆದರು. ಗಮನಾರ್ಹವಾದುದೆಂದರೆ, ಅವರು ಗಾಂಧೀಜಿ ತೀರಿಕೊಂಡ ದಿನವೇ, ಹನ್ನೆರಡು ವರ್ಷಗಳ ನಂತರ, ತಾವೂ ತೀರಿಕೊಂಡಿದ್ದು. ಅವರೊಂದಿಗೆ ಇಪ್ಪತ್ಮೂರು ವರ್ಷ ದುಡಿದಿದ್ದ ಶ್ರೀ ವಿನಾಯಕ್ ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಶ್ರೀ ವಿನಾಯಕರು The Gandhian Crusader (ಗಾಂಧೀ ಹೋರಾಟಗಾರ) ಎಂಬ ಹೆಸರಿನಲ್ಲಿ ಕುಮಾರಪ್ಪನವರ ಜೀವನ ಚರಿತ್ರೆಯನ್ನು ಬರೆದರು. ಅದನ್ನು ತಮಿಳುನಾಡಿನ ಗಾಂಧೀಗ್ರಾಮ ಟ್ರಸ್ಟ್ ಪ್ರಕಟಿಸಿದೆ. ಪುಸ್ತಕದ ಕೊನೆಯಲ್ಲಿ ಶ್ರೀ ವಿನಾಯಕ್ ಬರೆಯುತ್ತಾರೆ, "ಬಾಪು ಮಣ್ಣಿನಿಂದ ಮಾನವರನ್ನು ಸೃಷ್ಟಿಸಿ ಅವರು ಅತ್ಯಂತ ಬಲಾಢ್ಯ ಸಾಮ್ರಾಜ್ಯದ ಇದಿರು ನಿಂತು ಹೋರಾಡುವಂತೆ ಮಾಡಿದರು. ಇಲ್ಲಿ, ಕುಮಾರಪ್ಪನವರು ಭಾಗ್ಯ ಹೀನ ಬಂಧುಗಳ ಉದ್ಧಾರದ ಬಗ್ಗೆ ಜನ ಯೋಚಿಸುವಂತೆ ಮಾಡಿದರು. ಅಂಥವರು ಇನ್ನೆಂದು ಬಂದಾರು? ಗಾಂಧೀಜಿ ಪ್ರತಿಪಾದಿಸಿದ ಸತ್ಯ-ಅಹಿಂಸೆ ಈ ಎರಡು ಮಹಾನ್ ತತ್ವಗಳ ದೀಪಧಾರಿ ಜೆ. ಸಿ. ಕುಮಾರಪ್ಪ."

ಡಾ|| ಜೆ. ಸಿ. ಕುಮಾರಪ್ಪ ಅಂಥವರು. ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದವರು ಗಾಂಧೀ ಅರ್ಥಶಾಸ್ತ್ರಜ್ಞರಾದರು. ಸರ್ವೋದಯ ಕಾರ್ಯಕರ್ತರಾದರು. ಇಂಗ್ಲೆಂಡ್, ಅಮೆರಿಕಗಳಲ್ಲಿ ಶಿಕ್ಷಣ ಪಡೆದಾತ, ನಗರದ ದೃಷ್ಟಿ ಬೆಳೆಸಿಕೊಳ್ಳಲಿಲ್ಲ. ಆದರೆ ಗ್ರಾಮ ಪುನರುತ್ಥಾನ ಕಾರ್ಯಕ್ಕೆ ತಮ್ಮ ಬಾಳನ್ನೆಲ್ಲ ಮನಃಪೂರ್ವಕವಾಗಿ ಮೀಸಲಿಟ್ಟರು. ಚೈತನ್ಯದಿಂದ, ನಿಷ್ಠೆಯಿಂದ ಹಳ್ಳಿಯ ಬಾಳಿಗೆ ಮರಳಿದರು. ಗುರು ಗಾಂಧೀಜಿಗೆ ಎರಡನೆಯವರೇ ಆದರು.

1992ನೇ ಇಸವಿಯಲ್ಲಿ ಈ ಮಹಾಪುರುಷನ ನೆನಪಿನಲ್ಲಿ, ಜೆ. ಸಿ. ಕುಮಾರಪ್ಪ ಶತಮಾನ ವರ್ಷವೆಂದು ಅಖಿಲ ಭಾರತ ಮಟ್ಟದಲ್ಲಿ ಆಚರಿಸಲಾಯಿತು. ಆಗಿನ ರಾಷ್ಟ್ರಪತಿಗಳಾಗಿದ್ದ ಶ್ರೀ ಆರ್. ವೆಂಕಟರಾಮನ್ ತಮ್ಮ ಸಂದೇಶದಲ್ಲಿ ಹೀಗೆ ಬರೆದರು.

"ಬ್ರಿಟಿಷ್ ಮತ್ತು ಅಮೆರಿಕನ್ ವಿಶ್ವವಿದ್ಯಾನಿಲಯಗಳ ಹಿರಿಯ ವಿದ್ಯಾರ್ಥಿ, ಉಚ್ಛ್ರಾಯ ಸ್ಥಿತಿಯಲ್ಲಿದ್ದ ಚಾರ್ಟರ್ಡ್ ಅಕೌಂಟೆಂಟ್, ಮುಂಬೈನಲ್ಲಿ ಬ್ರಿಟಿಷ್ ಕಂಪನಿಯಲ್ಲಿದ್ದವರು. ಪ್ರೊ. ಕುಮಾರಪ್ಪ, ಈಗ ಗಾಂಧೀ ಅರ್ಥಶಾಸ್ತ್ರದ ಮೂಲ ಸಿದ್ಧಾಂತಗಳ ಸ್ಫುಟವಾದ ಹಾಗೂ ಮನವೊಲಿಸುವಂಥ ಪ್ರತಿಪಾದಕರಾದರು. ಭಾರತದ ಮೇಲೆ ಬ್ರಿಟನ್ನಿನ ಹಣಕಾಸು ಹತೋಟಿಯ ಶೋಷಕ ಸ್ವರೂಪ ಹಾಗೂ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಂದಾಗುವ ಅಪರಿಮಿತ ಸ್ವಾವಲಂಬನ ಸಾಧ್ಯತೆಗಳು ಅವರ ಪ್ರಖರ ಮನಸ್ಸಿಗೆ ಹೊಳೆದವು. ಭಾರತದ ಹಳ್ಳಿಗಾಡಿನಲ್ಲಿ ವ್ಯಾಪಕವಾಗಿ ಸಂಚರಿಸಿ, ಅವರು ಗ್ರಾಮ ಚಳುವಳಿ ಎನಿಸಿಕೊಂಡದ್ದರ ಬಗ್ಗೆ ದಿಗ್ದಂತಿಯಾದರು. ಆ ಗ್ರಾಮವಾದಕ್ಕೆ ಆಧಾರ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಮತೋಲನ. ಜನಹಿತ ಮತ್ತು ಪರಿಸರ ಪ್ರತಿಕ್ರಿಯೆಗಳ ಸಮ್ಮಿಲನದಲ್ಲಿ ಕುಮಾರಪ್ಪ ಗಾಂಧೀಜಿಗಿಂತ ಮುಂದೆ ನಡೆದರು. ಇಂದಿನ ಕೆಲವು ಪರಿಸರ ಸಂಬಂಧಿ ಕಾಳಜಿಗಳನ್ನು ಮನಗಂಡರು. ತಾವು ಕೈಯಾಡಿಸಿದ ಪ್ರತಿಯೊಂದೂ ಪ್ರಶ್ನೆಯಲ್ಲೂ ಅವರು ಏಸುವಿನ ಬೋಧೆಯ ಕರುಣೆ, ತ್ಯಾಗ ವಿಷಯಗಳನ್ನೂ ಮಹಾತ್ಮಗಾಂಧಿಯವರ ವ್ಯಾವಹಾರಿಕ ಕ್ರಿಯಾಶಕ್ತಿಯನ್ನೂ ಆವಾಹಿಸಿದರು."

ಕುಮಾರಪ್ಪನವರ ಅಪಾರ ಕೊಡುಗೆ ಕುರಿತು ಅಂದಿನ ಉಪ-ರಾಷ್ಟ್ರಪತಿ ಶ್ರೀ ಶಂಕರ ದಯಾಳ ಶರ್ಮ ತಮ್ಮ ಸಂದೇಶದಲ್ಲಿ ಬರೆದರು. "ಸ್ವದೇಶಿಯ ಪರಿಕಲ್ಪನೆ, ಭೂ-ಸುಧಾರಣೆ, ವಿಕೇಂದ್ರೀಕೃತ ಉತ್ಪಾದನೆ, ಪರಿಸರ ಸಮತೋಲನ ಸಂರಕ್ಷಣೆ, ಖಾದಿ ಗ್ರಾಮೋದ್ಯೋಗಗಳ ಅಭಿವೃದ್ಧಿ, ಗ್ರಾಮ ಸಮುದಾಯಗಳ ಸ್ವಯಂ ಪೂರ್ಣತೆ ಮುಂತಾದ ಅನೇಕ ಪ್ರಮುಖ ಮತ್ತು ಪ್ರಸ್ತುತ ಧೋರಣೆಗಳಿಗೆ ಪ್ರೊ. ಕುಮಾರಪ್ಪನವರಿಂದ ಪ್ರಬಲ ಸಮರ್ಥನೆ ದೊರಕಿತು. ವೈಯಕ್ತಿಕ ಉದಾಹರಣೆಯಿಂದ ಅವರು ಅಸಂಖ್ಯಾತ ತರುಣ ಸ್ವಾತಂತ್ರ್ಯ ಹೋರಾಟಗಾರರಿಗೆ ರಾಷ್ಟ್ರ ಪುನರ್ರಚನೆಯ ದೀಕ್ಷೆಯನ್ನು ಕೊಟ್ಟರು." ಆಗ ಭಾರತದ ಪ್ರಧಾನಿಗಳಾಗಿದ್ದ ನಿಷ್ಠ ರಾಜಕಾರಣಿ ಶ್ರೀ ಪಿ. ವಿ. ನರಸಿಂಹರಾವ್ ಅವರು ಈ ಮಹಾಪುರುಷನ ಬಗ್ಗೆ ಏನು ಹೇಳಿದ್ದಾರೋ ನೋಡೋಣ. "ಡಾ|| ಜೋಸೆಫ್ ಕಾರ್ನಿಲಿಯಸ್ ಕುಮಾರಪ್ಪನವರ ಜೀವನ ತ್ಯಾಗ ಮತ್ತು ಸರಳತೆಗಳ ಪಾಠ. ರಾಷ್ಟ್ರ ಸಮಸ್ಯೆಗೆ ಏಕ ಪ್ರಕಾರವಾಗಿ ಅರ್ಪಿಸಿಕೊಂಡ ಅದ್ಭುತ ಉದಾಹರಣೆ. ಅವರಿಗೆ ಜನಸೇವೆಯೆ ಬದುಕಿನ ದಾರಿ. ಅದರಲ್ಲಿ ಬೋಧನೆ ಆಚರಣೆ ಏಕತ್ರವಾಗಿದ್ದವು. ಅವರ ಬರೆಹಗಳು ಪರ್ಯಾಯ ಆರ್ಥಿಕ ಅಭಿವೃದ್ಧಿ ಮಾರ್ಗವನ್ನು ಮುಂದಿಟ್ಟವು. ಯುಗದ ಅರ್ಥ ಚಿಂತನೆಯ ಮೇಲೆ ಅಳಿಸಲಾಗದ ಅಚ್ಚೊತ್ತಿದ್ದವು." ಕುಮಾರಪ್ಪನವರಿಗೆ ಕೆಲಸವೇ ಸರ್ವಸ್ವ, ಅವರಿಗೆ ಭಗವದ್ಗೀತೆಯ ಮಾತು ಸ್ಫೂರ್ತಿ ಇತ್ತಿರಬಹುದು. "ಪರಿಶ್ರಮ ಮಾಡದೆ ತಿನ್ನುವವನು ಕಳ್ಳತನ ಮಾಡುತ್ತಾನೆ." (ಗೀತಾ 3-12) ಸಂತ ಪಾಲ್ ಅದನ್ನೇ ಹೇಳಿದ. "ಕೆಲಸ ಮಾಡದವನು ಊಟ ಮಾಡಲೂ ಬಾರದು." ಕರ್ಮದ ಬಗ್ಗೆ ಗಾಂಧೀಜಿಯ ಅಭಿಪ್ರಾಯ ಅಷ್ಟೇ ಉಚಿತವಾದುದು. ಅವರು ಹೇಳುತ್ತಾರೆ. "ಸ್ವಲ್ಪ ಮಟ್ಟಿಗಷ್ಟೆ ವಿರಾಮ ಒಳ್ಳೆಯ ಅಗತ್ಯ. ಬೆವರು ಸುರಿಸಿ ದುಡಿದು ತಿನ್ನಲಿ ಎಂದು ದೇವರು ಮನುಷ್ಯನನ್ನು ಸೃಷ್ಟಿ ಮಾಡಿದ್ದು. ಯಕ್ಷಿಣಿ ಪಾತ್ರೆಯಿಂದ ಅನ್ನ ಇತ್ಯಾದಿ ಎಲ್ಲವನ್ನೂ ತಯಾರಿಸುವ ಸಾಧ್ಯತೆ ಭಯಾನಕ ಕಲ್ಪನೆ."

ಈ ಮಹಾಪುರುಷನ ಶತಮಾನೋತ್ಸವವನ್ನು ಕರ್ನಾಟಕದಲ್ಲಿ ಆಚರಿಸಲಾಯಿತು. ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಕುಮಾರಪ್ಪ ಜನ್ಮ ಶತಾಬ್ಧಿ ಸಮಿತಿ ಪರಿಣಾಮಕರವಾಗಿ ಕೆಲಸ ಮಾಡಿತು. ಡಾ॥ ಎಚ್. ನರಸಿಂಹಯ್ಯನವರು ಕಾರ್ಯಾಧ್ಯಕ್ಷರಾಗಿ ಮಾರ್ಗದರ್ಶನ ಮಾಡಿದರು. ಹಲವು ಸಭೆಗಳನ್ನು, ವಿಚಾರ ಗೋಷ್ಠಿಗಳನ್ನು ನಡೆಸಲಾಯಿತು. ಒಂದು ಸ್ಮರಣ ಸಂಚಿಕೆಯನ್ನು ಹೊರತರಲಾಯಿತು.

ಭಾರತದ ಯೋಜನೆಗಳ ಬಗ್ಗೆ ಕುಮಾರಪ್ಪನವರ ಅಭಿಪ್ರಾಯ

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಚಟುವಟಿಕೆಗಳು ಮೊದಲಿನಿಂದಲೂ ಜನಮಾನಸದ ಮೇಲೆ ನಿಚ್ಚಳವಾದ ಪ್ರಭಾವ ಬೀರಿದ್ದರಲ್ಲಿ ಸಂದೇಹವೇ ಇಲ್ಲ. ಅದು ರಾಜಕೀಯ ಹೋರಾಟದ ಕಾಲ. ಗ್ರಾಮ ಕೈಗಾರಿಕಾ ಚಳುವಳಿ ಗಾಂಧೀಜಿ ಹಾಗೂ ಕುಮಾರಪ್ಪನವರ ನೇತೃತ್ವದಲ್ಲಿ ಸತ್ಯಾಗ್ರಹದ ಅಂಗವೇ ಆಯಿತು. ಬ್ರಿಟಿಷ್ ಪ್ರಭುತ್ವವನ್ನು ಬಹಿಷ್ಕರಿಸಿ ಇಂಗ್ಲೆಂಡಿನಿಂದ ಅಮದಾದ ವಸ್ತುಗಳನ್ನು ಬಹಿಷ್ಕರಿಸಿ ಹಾಗೂ ಸ್ವಾವಲಂಬನ ಮತ್ತು ಸ್ವಯಂಪೂರ್ಣತೆಗಳನ್ನು ಅಳವಡಿಸಿಕೊಳ್ಳುವಂತೆ ಜನರ ಮನೋಭಾವವನ್ನು ಪರಿವರ್ತಿಸಿದ್ದು ಸ್ವಾತಂತ್ರ್ಯ ಹೋರಾಟಕ್ಕೆ ಗಮನಾರ್ಹವಾಗಿ ಇಂಬು ಕೊಟ್ಟಿತು. ಕೆಲವು ಪ್ರಾಂತ್ಯಗಳಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸರ್ಕಾರಗಳು, ಕುಮಾರಪ್ಪನವರ ಸಲಹೆಯಂತೆ, ಗ್ರಾಮ ಕೈಗಾರಿಕೆಗಳನ್ನು ಆರಂಭಿಸಿದವು, ಕುಮಾರಪ್ಪ ಇರುತ್ತಿದ್ದ ಮಗನವಾಡಿಯಲ್ಲಿ ಅನೇಕ ಸಭೆಗಳು ನಡೆದವು. ಹೊಸಹೊಸ ಗ್ರಾಮೋದ್ಯೋಗಗಳನ್ನು ಆರಂಭಿಸಲು ಹಾಗೂ ಅಸ್ತಿತ್ವದಲ್ಲಿ ಇದ್ದ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ಯೋಜನೆಗಳನ್ನು ರೂಪಿಸಲು ಕಾಂಗ್ರೆಸ್ ಮಂತ್ರಿಗಳು, ನಾಯಕರು ಆ ಸಭೆಗಳಿಗೆ ಬರುತ್ತಿದ್ದರು.

ಆಗಿನ ಮಧ್ಯಪ್ರಾಂತ್ಯ ಮತ್ತು ವಾಯುವ್ಯ ಪ್ರಾಂತ್ಯಗಳಲ್ಲಿ ಗ್ರಾಮೋದ್ಯೋಗಗಳನ್ನು ಸ್ಥಾಪಿಸಲು ಸಮೀಕ್ಷೆ ನಡೆಸಿ ಸಲಹೆ ನೀಡಲು, ಆಯಾ ಪ್ರಾಂತ್ಯ ಸರ್ಕಾರಗಳು ಕುಮಾರಪ್ಪನವರನ್ನು ತಮ್ಮಲ್ಲಿಗೆ ಆಹ್ವಾನಿಸಿದವು. ಅವರು ಸಮೀಕ್ಷೆ ನಡೆಸಿ, ತಮ್ಮ ವರದಿಗಳಲ್ಲಿ ಕೆಲವು ಸಲಹೆಗಳನ್ನಿತ್ತರು.

1946ರಲ್ಲಿ ಕುಮಾರಪ್ಪ ಬರೆದರು. "ದೇಶ ಕ್ಷಾಮವನ್ನು ಎದಿರಿಸುತ್ತಿದೆ. ಪ್ರಾಥಮಿಕ ಬಳಕೆಯ ಪದಾರ್ಥಗಳ ಅಭಾವವಿದೆ. ಈಗ ಜನಪ್ರಿಯ ಸರ್ಕಾರಗಳು ಬರುವುದು ವರವೇ ಆದೀತು. ಆದರೆ ಹಾಗಾಗಲು ಅಂಥ ವಸ್ತುಗಳ ಅಭಾವವನ್ನು ತುಂಬುವಂತೆ, ಆಯ್ದ ಕ್ಷೇತ್ರಗಳಲ್ಲಿ ಜನತೆಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ದೇಶದಾದ್ಯಂತ ಕೈಗೆತ್ತಿಕೊಳ್ಳಲು ಈ ಅವಕಾಶವನ್ನು ಬಳಸಿಕೊಳ್ಳಬೇಕು.

"ಅಂಥ ಕಾರ್ಯಯೋಜನೆ ಪರಿಣಾಮಕಾರಿಯಾಗಬೇಕಾದರೆ, ಅದು ದೇಶದೆಲ್ಲಡೆ ಏಕೀಕೃತವಾಗಿ ಹಾಗೂ ಸಂಯೋಜಿತವಾಗಿ ನಡೆಯಬೇಕು."

1946ರ ಜುಲೈ 31ರಂದು ಪುಣೆಯಲ್ಲಿ ಮಂತ್ರಿಗಳ ಸಮ್ಮೇಳನವೊಂದು ನಡೆಯಿತು. ಕುಮಾರಪ್ಪ ಅಲ್ಲಿಗೆ ಹೋಗಿದ್ದರು. ಭಾಗವಹಿಸಿದ್ದ ಮಂತ್ರಿಗಳಿಗೆ, ಸರ್ಕಾರದ ಕಾರ್ಯದ ಬಗ್ಗೆ ಒಂದು ವಿಜ್ಞಾಪನಾ ಪತ್ರವನ್ನು ಹಂಚಲಾಯಿತು.

ಸಭೆಯ ಫಲಿತಾಂಶವನ್ನು ಕುಮಾರಪ್ಪನವರು "ಗ್ರಾಮೋದ್ಧಾರದ ಸಮಗ್ರ ಯೋಜನೆ" ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಗ್ರಾಮ ಸ್ವರಾಜ್ಯ ಮತ್ತು ಪುರೋಭಿವೃದ್ಧಿಗಾಗಿ ನಾಲ್ಕು ಅಂಶಗಳನ್ನು ಒಳಗೊಂಡ ಒಂದು ಸನ್ನದು ಈ ಅಡಕವಾದ ಗ್ರಂಥ.

1. ಯೋಜನೆಯ ಅಗತ್ಯ ಮತ್ತುಸ್ವರೂಪ
2. ಸಮಗ್ರ ಯೋಜನೆ
3. ಕೈಗಾರಿಕೆಗಳ ಬಗೆಗಳು
4. ಗ್ರಾಮ ಕೈಗಾರಿಕೆಗಳು

ಗಾಂಧೀಜಿಯ ಅನುಯಾಯಿ ಶ್ರೀ ಶ್ರೀಮನ್ನಾರಾಯಣ ಅವರು ಬರೆದರು - "ನನಗೆ ತೋಚುವಂತೆ, ಖಾದಿ ಗ್ರಾಮೋದ್ಯೋಗಗಳ ಪೂರ್ಣ ಬೆಳವಣಿಗೆ ಆಗದಿದ್ದರೆ, ನಮ್ಮ ಜನಕ್ಕೆ ಪೂರ್ಣ ಉದ್ಯೋಗದ ಖಾತರಿ ಕೊಡುವುದು ಆಗಲಾರದು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿಕೊಂಡು ಈಗಿನ ತಂತ್ರಜ್ಞಾನವನ್ನು ಸುಧಾರಿಸಲು ನಿಶ್ಚಿತ ಪ್ರಯತ್ನ ಮಾಡಬೇಕಾದುದು ನಿರ್ವಿವಾದದ ವಿಷಯ. ಗ್ರಾಮ ಕುಶಲ ಕಸಬುಗಳನ್ನು ಹೆಚ್ಚು ದಕ್ಷಗೊಳಿಸಲು ನಾವು ಶ್ರಮಿಸಬೇಕು."

ಭಾರತ ಬ್ರಿಟಿಷ್ ಪ್ರಭುತ್ವದಿಂದ ಬಿಡುಗಡೆ ಹೊಂದಿದ ಮೇಲೆ, ಪಂಡಿತ ಜವಹರಲಾಲ ನೆಹರು ಅವರ ಸರ್ಕಾರ ಕೈಗಾರಿಕೋದ್ಯಮ ನೀತಿಯನ್ನು ಆರಿಸಿಕೊಂಡಿತು, ಜೆ.ಸಿ.ಕುಮಾರಪ್ಪ ಆ ನೀತಿಯನ್ನು ವಿರೋಧಿಸಿದರು. ಗಾಂಧೀಜಿ ಸಹ ಕುಮಾರಪ್ಪನವರಿಗೆ ಬೆಂಬಲವಿತ್ತರು.

"ಪಂಡಿತ ನೆಹರೂಗೆ ಕೈಗಾರಿಕೀಕರಣ ಎಂದರೆ ಒಲವು. ಏಕೆಂದರೆ, ಅದನ್ನು ಸಮಾಜೀಕರಿಸಿದರೆ, ಬಂಡವಾಳಗಾರಿಕೆಯ ದೋಷಗಳಿಂದ ಮುಕ್ತವಾಗುತ್ತದೆ ಎಂದು ಅವರು ನಂಬುತ್ತಾರೆ. ದೋಷಗಳು ಕೈಗಾರಿಕಾಷಾಹಿಯಲ್ಲೇ ಹುಟ್ಟಿದವು. ಎಷ್ಟೇ ಸಮಾಜೀಕರಿಸಿದರೂ ಅವು ನಿರ್ಮೂಲವಾಗುವುದಿಲ್ಲ. ಇದು ನನ್ನ ದೃಷ್ಟಿ" ಎಂದರು.

ಬಂಡವಾಳಷಾಹಿ ಕೈಗಾರಿಕೀಕರಣದ ಫಲ. ಅದು ಕೆಲವೇ ಜನರಲ್ಲಿ ಸಂಪತ್ತನ್ನು ಶೇಖರವಾಗುವಂತೆ ಮಾಡುತ್ತದೆ. ಅಂತಿಮವಾಗಿ ಶೋಷಣೆ ಹಾಗೂ ಹಿಂಸೆಯಲ್ಲಿ ಪರ್ಯವಸಾನವಾಗುತ್ತದೆ. ವಿಕೇಂದ್ರೀಕೃತ ಕುಟೀರ ಹಾಗೂ ಗ್ರಾಮ ಕೈಗಾರಿಕೆಗಳಾದರೊ ಸರಳತೆ, ಸಂಪತ್ತಿನ ನ್ಯಾಯಯುತ ವಿತರಣೆ, ಅಹಿಂಸೆ, ಮಾನವ ಪರಿಶ್ರಮ ಹಾಗೂ ಮೌಲ್ಯಗಳ ಪಾವಿತ್ರ್ಯ ಇವುಗಳತ್ತ ದಾರಿತೋರುತ್ತವೆ. ವಾಸ್ತವವಾಗಿ ಅವು ಭಾರತದಂಥ ಜನನಿಬಿಡ ದೇಶದ ಅತ್ಯಗತ್ಯವಾದ ವಿಕೇಂದ್ರೀಕೃತ ಅರ್ಥವ್ಯವಸ್ಥೆಗೆ ಒಯ್ಯುತ್ತವೆ. ಆದರೆ ಯಾಂತ್ರೀಕೃತ ಭಾರಿ ಹಾಗೂ ಕೇಂದ್ರೀಕೃತ ಉತ್ಪಾದನೆ ಮನುಷ್ಯರನ್ನು ಯಂತ್ರದ ಮೊಳೆಗಳನ್ನಾಗಿ ಮಾಡುತ್ತದೆ. ಅವರ ಸೂಕ್ಷ್ಮ ಮಾನವೀಯ ಭಾವನೆಗಳನ್ನು ತೊಡೆದುಹಾಕುತ್ತದೆ. ಆಡಂಸ್ಮಿತ್ ಆಧುನಿಕ ರಾಜಕೀಯ ಆರ್ಥಿಕತೆಯ ಜನಕ. ಆಧುನಿಕ ಉದ್ಯಮಗಳಲ್ಲಿ ಶ್ರಮ ವಿಭಜನೆಗೆ ಒಲಿದವರು. ಅವರೇ ಒಪ್ಪಿಕೊಂಡಿದ್ದಾರೆ, "ಕೇವಲ ಸಣ್ಣಪುಟ್ಟ ಕ್ರಿಯೆಗಳನ್ನೇ ಮಾಡುವುದರಲ್ಲೇ ಇಡೀ ಬದುಕನ್ನು ಸಾಗಿಸುವ ವ್ಯಕ್ತಿ ಸಾಮಾನ್ಯನಾಗಿ, ದಡ್ಡನಾಗುತ್ತಾನೆ. ಮೂರ್ಖನಾಗುತ್ತಾನೆ, ಮಾನವ ಜಂತುವಿನ ಗತಿಯೆ ಅದು."

ಯಾಂತ್ರೀಕರಣ ಕುರಿತಂತೆ ಕುಮಾರಪ್ಪನವರ ಹಾಗೂ ಗಾಂಧೀಜಿಯ ದೃಷ್ಟಿ ನಿಚ್ಚಳವಾಗಿತ್ತು. ಅದನ್ನು ಗಾಂಧೀಜಿಯ ಮಾತುಗಳಿಂದ ತಿಳಿಯಬಹುದು. "ಕಾಯಕವೇ ಪೂಜೆ, ಕೆಲಸವಿಲ್ಲದವನ ತಲೆ ದೆವ್ವದ ಮನೆ" ಎಂದರು. ಮತ್ತೂ ಹೇಳಿದರು. "ಲಕ್ಷಾಂತರ ಜನ ಕೈಗಳನ್ನು ಬಳಸದೆ ಹೋಗಿರುವುದು ಭಾರೀ ದುರಂತ. ನಮ್ಮ ಕೈ ನಮಗೆ ಪ್ರಕೃತಿ ಕೊಟ್ಟಿರುವ ವರ. ಅದನ್ನು ಹೀಗೆ ವ್ಯರ್ಥಮಾಡುವ ಅಪರಾಧಕ್ಕೆ ಸೇಡು ತೀರಿಸಿಕೊಳ್ಳುತ್ತದೆ. ಅದರ ಪರಿಣಾಮ ಭಯಂಕರ. ನಾವು ಜೀವಂತ ಯಂತ್ರಗಳನ್ನು, ನಮ್ಮ ದೇಹಗಳನ್ನೇ ತುಕ್ಕುಹಿಡಿಯಲು ಬಿಟ್ಟು, ಅದರ ಬದಲು ನಿರ್ಜೀವ ಯಂತ್ರಗಳನ್ನು ತಂದು, ಈ ಜೀವಂತ ಯಂತ್ರಗಳನ್ನು ಹಾಳು ಮಾಡುತ್ತಿದ್ದೇವೆ."

ಕುಮಾರಪ್ಪನವರಾಗಲೀ, ಗಾಂಧಿಯವರಾಗಲೀ ಯಂತ್ರವನ್ನು ನಾಶಮಾಡಬೇಕು ಎನ್ನಲಿಲ್ಲ. ಆದರೆ, ಶ್ರೀಸಾಮಾನ್ಯನ ಹಿತದೃಷ್ಟಿಯಿಂದ, ಅದರ ಮೇಲೆ ಮಿತಿ ಹೇರಬೇಕೆಂದು ಬಯಸಿದರು. ಯಂತ್ರಗಾರಿಕೆ ಬಗ್ಗೆ ಗಾಂಧೀಜಿ ಹೇಳಿದ್ದು ಎಷ್ಟು ಪ್ರಸ್ತುತ ! ಅವರು ಹೇಳುತ್ತಾರೆ, "ಕೆಲಸ ಪೂರೈಸಲು ಆಳುಗಳು ತೀರ ಕಡಿಮೆ ಇದ್ದರೆ ಯಂತ್ರಗಾರಿಕೆ ಒಳ್ಳೆಯದು. ಮಾಡಬೇಕಾದ ಕೆಲಸಕ್ಕಿಂತ ಹೆಚ್ಚಾಗಿ ಆಳುಗಳು ಇರುವಾಗ ಯಂತ್ರ ಒಂದು ಪಿಡುಗು. ಅದೇ ಭಾರತದ ಕತೆ. ನಮ್ಮ ಸಮಸ್ಯೆ ನಮ್ಮ ಹಳ್ಳಿಗಳಲ್ಲಿರುವ ಕೋಟಿ-ಕೋಟಿ ಜನಕ್ಕೆ ವಿರಾಮ ಒದಗಿಸುವುದು ಹೇಗೆ ಎಂದಲ್ಲ. ಕೆಲಸವಿಲ್ಲದ ಅವರನ್ನು ಹೇಗೆ ಬಳಸಿಕೊಳ್ಳುವುದು ಎಂಬುದು ಸಮಸ್ಯೆ. ಅಂಥ ಬಿಡುವಿನ ಕಾಲ ವರ್ಷದ ಆರುತಿಂಗಳ ದುಡಿಮೆ ಅವಧಿಗೆ ಸಮ".

ಸ್ವಯಂಪೂರ್ಣತೆಯಿಂದ ಸ್ವರಾಜ್ಯ

ಜನರ ಭೌತಿಕ ಅಗತ್ಯಗಳ ಪೂರೈಕೆಯಷ್ಟೆ ಗುರಿಯಲ್ಲ ಎಂದು ಕುಮಾರಪ್ಪ ಮನಗಂಡಿದ್ದರು. ಸ್ವಸಹಾಯ, ಪರಸ್ಪರ ಸಹಾಯ ಮತ್ತು ಸಾಮಾಜಿಕ ಐಕಮತ್ಯದ ಭಾವನೆಯನ್ನು ರೂಢಿಗೊಳಿಸಬೇಕು. ಅದೇ ನಾವು ಹೋಗಬೇಕಾದ ದಾರಿ. ಸ್ವಯಂ ಪೂರ್ಣತೆ ಮೂಲಕ ಸ್ವರಾಜ್ಯ. ನಮ್ಮ ಯೋಜಕರು ಇದನ್ನು ಅರ್ಥಮಾಡಿಕೊಳ್ಳಬೇಕು ಎಂದು ಅವರ ಆಸೆ. ನಮ್ಮ ಯೋಜನೆಗಳು ಕೆಲವೇ ಮಂದಿಯ ಯೋಗಕ್ಷೇಮವನ್ನು ಗಮನಕ್ಕೆ ತೆಗೆದುಕೊಳ್ಳಬಾರದು. ದೇಶದ ಪ್ರತಿಯೊಬ್ಬನ ಹಿತವನ್ನು ಲೆಕ್ಕಿಸಬೇಕು. ಭಾರತದಂಥ ದೇಶದಲ್ಲಿ ಬಡತನವೇ ಸಮಸ್ಯೆ. ಇಲ್ಲಿ ಹಣಕ್ಕೆ ಕೊರತೆ ಇಲ್ಲ, ಬಂಡವಾಳ ಸಿಗುತ್ತದೆ ಎಂದು ನಮ್ಮ ಯೋಜಕರು ಭಾವಿಸಬಾರದು. ನಮ್ಮ ಯೋಜನೆಗಳು ನಮ್ಮ ಜನರ ಪ್ರಾಥಮಿಕ ಅಗತ್ಯಗಳನ್ನು ನಿರ್ಲಕ್ಷಿಸಬಾರದು. ಪರಿಶ್ರಮವೇ ಸಂಪತ್ತು, ಬಂಡವಾಳ ಎಂಬುದನ್ನು ಅರಿಯಬೇಕು.

ನಮ್ಮ ಯೋಜನೆಯ ಮೊದಲನೆಯ ಲಕ್ಷ್ಯ ರೈತ, ಅನಂತರ ಇಡೀ ದೇಶ ಆಗಬೇಕು. ಆದ್ದರಿಂದ ಜನಕೋಟಿಯ ಅನ್ನ, ಬಟ್ಟೆಗಳಲ್ಲಿ ಸ್ವಯಂಪೂರ್ಣತೆಯೆ ನಮ್ಮ ಯೋಜನೆಯ ಅತ್ಯಂತ ಮುಖ್ಯ ಗುರಿ ಆಗಬೇಕು. ಇಲ್ಲವಾದರೆ ಸ್ವರಾಜ್ಯಕ್ಕೆ ಅಥವಾ ಸ್ವರಾಜ್ಯ ಸಾಧನೆಗೆ ಅರ್ಥವೇ ಇರುವುದಿಲ್ಲ.

ಪಾಶ್ಚಿಮಾತ್ಯ ಮಾದರಿಯ ಪ್ರಕಾರ, ಭಾರಿ ಪ್ರಮಾಣದ ಉದ್ಯಮಗಳನ್ನು ಸ್ಥಾಪಿಸಿ ಮತ್ತು ಯಾಂತ್ರೀಕೃತ ಕೃಷಿಯಿಂದ ಅನ್ನ, ಬಟ್ಟೆ ಮುಂತಾದ ವಸ್ತುಗಳನ್ನು ಉತ್ಪಾದಿಸಬೇಕು.

ಮುಖ್ಯ ಸಂಪನ್ಮೂಲಗಳಾದ ನೈಸರ್ಗಿಕ ಸಂಪನ್ಮೂಲಗಳು, ಸಲಕರಣೆಗಳು, ಬಂಡವಾಳ ಮತ್ತು ಶ್ರಮ ಎಲ್ಲವನ್ನೂ ಒಗ್ಗೂಡಿಸಬೇಕು. ಒಂದು ಸಂಪನ್ಮೂಲ ಕಡಿಮೆ ಇದ್ದರೆ, ಇನ್ನೊಂದನ್ನು ಹೆಚ್ಚಿನ ಪ್ರಮಾಣದಲ್ಲಿ ತರಬೇಕು. ಉದಾಹರಣೆಗೆ ಅಮೆರಿಕದಲ್ಲಿ ಶ್ರಮವರ್ಗ ಕಡಿಮೆ. ನೈಸರ್ಗಿಕ ಸಂಪನ್ಮೂಲ ಹೇರಳ. ಆದ್ದರಿಂದ ಶ್ರಮ ಉಳಿಸುವ ಯಂತ್ರವನ್ನು ಬಳಸಲಾಗುತ್ತದೆ. ಭಾರತದಲ್ಲಿ ಬಂಡವಾಳ ಕಡಿಮೆ, ಶ್ರಮವರ್ಗ ಅಪಾರ, ಇಲ್ಲಿ ಅಮೆರಿಕದ ಪದ್ಧತಿಯನ್ನೇ ತಂದರೆ, ನಿರುದ್ಯೋಗ ಉಂಟಾಗುತ್ತದೆ. ಯಂತ್ರವನ್ನು ನಡೆಸದೇ ಇಟ್ಟರೆ, ಅದಕ್ಕೇನು ಹೊಟ್ಟೆಗೆ ಹಾಕಬೇಕಾದ್ದಿಲ್ಲ. ಆದರೆ ಶ್ರಮವರ್ಗವನ್ನು ದುಡಿಸಿಕೊಳ್ಳದಿದ್ದರೆ ನಿರುದ್ಯೋಗ ಉಂಟಾಗುತ್ತದೆ. ಶ್ರಮವರ್ಗ ಹೊಟ್ಟೆಗಿಲ್ಲದೆ ಸಾಯುತ್ತದೆ. ಭಾರತದ ಮಟ್ಟಿಗೆ ಹೇಳುವುದಾದರೆ, ದೊರಕುವ ಸಂಪನ್ಮೂಲಗಳ ದಕ್ಷ ಉಪಯೋಗವೆಂದರೆ ಮಾನವ ಬಲದ ವ್ಯಾಪಕ ಹಾಗೂ ಪೂರ್ಣ ಬಳಕೆ. ಈ ವಿಧಾನವನ್ನು ನಾವು ಅನುಸರಿಸದೇ ಹೋದರೆ, ಲಭ್ಯವಿರುವ ಶ್ರಮ ಸಂಪತ್ತನ್ನು ಬೀದಿಗೆ ಬಿಸಾಡುವ ಅಪರಾಧಕ್ಕೆ ತುತ್ತಾಗುತ್ತೇವೆ. ಇದು ಅಭ್ಯುದಯಕ್ಕೆ ಹಾದಿ ಅಲ್ಲ. ಉದ್ಯೋಗ ಪ್ರಧಾನ ಉತ್ಪಾದನಾ ವಿಧಾನವೊಂದೇ ಭಾರತಕ್ಕೆ ಸೂಕ್ತ. ಪರಿಸ್ಥಿತಿಯ ಅದರಲ್ಲೂ ಗ್ರಾಮೀಣ ಭಾರತದ ಸ್ಥಿತಿಯ ಕೂಲಂಕಷ ಅಧ್ಯಯನ ಮಾಡಿ, ಕುಮಾರಪ್ಪನವರು ಮಾಡಿರುವ ವಿಶ್ಲೇಷಣೆ ಇದು. ಅವರ ಪ್ರಕಾರ ಭಾರತಕ್ಕೆ ಬೇಕಾದುದು ಕೆಳಕಾಣಿಸಿರುವ ಪ್ರಮುಖ ಕಾರ್ಯಚಟುವಟಿಕೆಗಳ ಬಗ್ಗೆ ಸೂಕ್ತಯೋಜನೆ.

1. **ಕೃಷಿ**
2. **ಗ್ರಾಮೋದ್ಯೋಗಗಳು**
3. **ಗೃಹನಿರ್ಮಾಣ, ಪಾಕೀಜು, ಆರೋಗ್ಯ**
4. **ಜನಸ್ತೋಮಕ್ಕೆ ಶಿಕ್ಷಣ**
5. **ಉಚಿತ ಗ್ರಾಮ ಸಂಘಟನೆ**
6. **ಗ್ರಾಮ ಸಂಸ್ಕೃತಿ**

ಶಾಂತಿಯ ಅರ್ಥಶಾಸ್ತ್ರ

"ಸಂಕಟಪಡುತ್ತಿರುವ ತಂದೆತಾಯಿಯುವರಿಗೆ ಕಬೀರನ ಗೀತೆ ಹೇಳಿ ಸಮಾಧಾನಗೊಳಿಸುವುದು ನನಗೆ ಸಾಧ್ಯವಿಲ್ಲ. ಹಸಿದ ಜನಕೋಟಿ ಕೇಳುವುದು ಒಂದೇ ಹಾಡು. - ಶಕ್ತಿದಾಯಕ ಆಹಾರ. ಅವರಿಗೆ ಆಹಾರವನ್ನು ಕೊಡುವಂತಿಲ್ಲ. ಅವರೇ ಸಂಪಾದಿಸಿಕೊಳ್ಳಬೇಕು. ಬೆವರು ಸುರಿಸಿಯೇ ಸಂಪಾದಿಸಬೇಕು" ಇದು 1921ರಲ್ಲಿ ಗಾಂಧೀಜಿ ಬರೆದದ್ದು. ಜನಕ್ಕೆ ನಾವು ಸಾಧನ ಒದಗಿಸಿದರೆ ಅವರು ಬೆವರು ಸುರಿಸಲು ಸಿದ್ಧ. ಬಡವನಿಗೆ ದಿನಕ್ಕೆ ಎರಡು ಊಟ ಸಿಗಬೇಕಾದರೆ, ಸಾಧನವನ್ನು ಒದಗಿಸಬೇಕು.

"ಗಾಂಧೀ ಅರ್ಥಶಾಸ್ತ್ರ" ಎಂಬುದರ ಅತ್ಯುನ್ನತ ಪ್ರತಿಪಾದಕರು ಜೆ. ಸಿ. ಕುಮಾರಪ್ಪ. ಅವರ ಬದುಕಿನ ಒಂದು ಘಟನೆಯನ್ನು ನೆನಸಿಕೊಂಡರೆ, ಹಳ್ಳಿಗಾಡಿನ ಜನತೆಯ ಬಡತನದ ಆಳ ಅರ್ಥವಾದೀತು. ಕೈಗಾರಿಕಾ ಸಮೀಕ್ಷಾ ಸಮಿತಿಯ ಅಧ್ಯಕ್ಷರಾಗಿ, ಕುಮಾರಪ್ಪ ಬಿಹಾರಿನ ಹಳ್ಳಿಗಾಡಿನಲ್ಲಿ ಸಮೀಕ್ಷೆ ನಡೆಸುತ್ತಿದ್ದರು. ಒಂದು ಸಂಜೆ ಅವರು ತಮಗೆ ಸಹಾಯ ಮಾಡುತ್ತಿದ್ದ ಕೆಲವು ವಿದ್ಯಾರ್ಥಿಗಳೊಂದಿಗೆ ಮೂಲ ಶಿಬಿರಕ್ಕೆ ವಾಪಸ್ಸು ಬರುತ್ತಿದ್ದರು. ಅಡವಿ ಪ್ರದೇಶ, ಕಗ್ಗತ್ತಲೆ ಕವಿದಿತ್ತು. ಸ್ವಲ್ಪದೂರದಲ್ಲಿ ಮುದುಡಿ

ಕುಳಿತಿದ್ದ ಒಂದು ಆಕೃತಿ ಆ ತಂಡಕ್ಕೆ ಕಾಣಿಸಿತು. ಕರಡಿ ಇರಬಹುದು ಎಂದುಕೊಂಡರು. ಆ ತಂಡ ಎಚ್ಚರಿಕೆಯಿಂದ ಅದರತ್ತ ಹೆಜ್ಜೆ ಇಟ್ಟಿತು. ಹತ್ತಿರಕ್ಕೆ ಹೋದಾಗ ಗೊತ್ತಾಯಿತು, ಅದೊಂದು ಮಾನವಾಕೃತಿ. ಚಿಂದಿ ಬಟ್ಟೆಯ ಹೆಂಗಸು, ಆ ನಡುರಾತ್ರಿಯಲ್ಲಿ ಇಲ್ಲೇನು ಮಾಡುತ್ತಿದ್ದೀಯ ಎಂದು ಒಬ್ಬ ವಿದ್ಯಾರ್ಥಿ ಕೇಳಿದ. ಆ ಬಡ ಮುದುಕಿ ಹೆದರಿ ಥರಗುಟ್ಟಿದಳು, ಕೈಯಲ್ಲಿದ್ದ ಬೇಳೆ ಕಾಳುಗಳನ್ನು ಮುಚ್ಚಿಟ್ಟುಕೊಳ್ಳಲು ಯತ್ನಿಸಿದಳು. "ಅಲ್ಲಿ ಇಲ್ಲಿ ಬಿದ್ದಿರುವ ಬೇಳೆ ಕಾಳುಗಳನ್ನು ಆರಿಸಿಕೊಳ್ಳುತ್ತಿದ್ದೇನೆ, ಹೊಟ್ಟೆಗೆ ಬೇರೆ ಏನೂ ಇಲ್ಲ" ಎಂದಳು. ರಾತ್ರಿಯಲ್ಲೇಕೆ ಕಾಳು ಆಯುತ್ತೀಯೆ ಎಂದು ಇನ್ನೊಬ್ಬ ವಿದ್ಯಾರ್ಥಿ ಕೇಳಿದ. "ಹಗಲು ಬಂದರೆ, ಜಮೀನುದಾರ ಇಲ್ಲವೇ ಅರಣ್ಯ ರಕ್ಷಕ ನನ್ನನ್ನು ಹೊಡೆಯುತ್ತಾರೆ. ನೀವೂ ಅವರ ಪೈಕಿಯೆ ಇರಬಹುದು" ಎಂದಳು. ಶಿಬಿರ ಸೇರಿದ ಮೇಲೆ, ಕುಮಾರಪ್ಪ ಈ ಘಟನೆಯನ್ನು ತಿಳಿಸಿದರು. ಬಡತನ ನಿರ್ಮೂಲನ ಯೋಜನೆ ರೂಪಿಸಲು ಹೇಳಿದಾಗ ಈ ಚಿತ್ರವನ್ನು ನೆನಪಿನಲ್ಲಿಡಿ ಎಂದು ಹೇಳಿದರು.

ಇದು 1930 ರ ಘಟನೆ. ಆದರೆ ಪರಿಸ್ಥಿತಿ ಹೆಚ್ಚೇನೂ ಬದಲಾಗಿಲ್ಲ. ಆಗಿನ ನಾಯಕರು, ಯೋಜಕರು ಆ ಪರಿಸ್ಥಿತಿಗೆ ಸ್ಪಂದಿಸಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಒಂದು ನಿರ್ಣಯಮಾಡಿ ಸತ್ತಿರುವ ಹಾಗೂ ಸಾಯುತ್ತಿರುವ ಗ್ರಾಮೋದ್ಯೋಗಗಳನ್ನು ಪುನರ್ರಚಿಸಲು ತೀರ್ಮಾನಿಸಿದರು. ಕೃಷಿ ಮತ್ತು ಗ್ರಾಮೋದ್ಯೋಗಗಳ ಮೂಲಕ ಗ್ರಾಮೀಣ ಭಾರತವನ್ನು ಪುನಶ್ಚೇತನಗೊಳಿಸುವುದೇ, ಅಂದು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದವರ ಕ್ರಿಯಾ ಯೋಜನೆ ಆಯಿತು. ಆದರೆ ಸ್ವಾತಂತ್ರ್ಯ ಬಂತೋ ಇಲ್ಲವೋ ವ್ಯೂಹತಂತ್ರ ರಷ್ಯಾ ಮಾದರಿಯ ಶೀಘ್ರ ಕೈಗಾರಿಕೆಗೆ ಬದಲಾಯಿತು. ಭಾರತದ ಗ್ರಾಮೀಣ ಅರ್ಥವ್ಯವಸ್ಥೆಯ ಮೇಲೆ ಎಂಟು ಪಂಚವಾರ್ಷಿಕ ಯೋಜನೆಗಳಿಂದ ಆದ ಪರಿಣಾಮ ನಮ್ಮ ಕಣ್ಣೆದುರಿಗೆ ಇದೆ. ಬಡವ ಬಡವನಾಗಿಯೇ ಇದ್ದಾನೆ. ಉಳ್ಳವರು, ಇಲ್ಲದವರ ನಡುವಣ ಅಂತರ ಮಾತ್ರ ಹೆಚ್ಚಿದೆ.

ಸ್ವತಂತ್ರ ಭಾರತದ ಯೋಜಕರು ದೇಶ ಭಕ್ತರಲ್ಲ ಅಥವಾ ಗ್ರಾಮೀಣ ಜನತೆ ಬಗ್ಗೆ ಕೃಷಿ ಗ್ರಾಮೋದ್ಯೋಗಗಳ ಬಗ್ಗೆ ಅವರಿಗೆ ಕಾಳಜಿ ಇರಲಿಲ್ಲ ಎಂದರೆ ಅನ್ಯಾಯವಾದೀತು. ಆದರೆ ಅವರ ನಿರೀಕ್ಷೆಗಳು ಪೊಳ್ಳಾಗಿರುವಂತಿದೆ. ಶೀಘ್ರ ಕೈಗಾರಿಕೀಕರಣವಾದರೆ, ಬೇಸಾಯದಲ್ಲಿರುವ ಹೆಚ್ಚುವರಿ ಶ್ರಮಿಕವರ್ಗದ ಬಹುಭಾಗ ಕೈಗಾರಿಕೆ ಹಾಗೂ ತತ್ಸಂಬಂಧಿತ ಕ್ಷೇತ್ರಗಳಿಗೆ ಹೊರಳುತ್ತದೆ. ಇದರಿಂದ ಭೂಮಿಯ ಮೇಲಿದ್ದ ಅನಗತ್ಯ ಒತ್ತಡ ಇಳಿಯುತ್ತದೆ. ತನ್ಮೂಲಕ ಕೃಷಿ ಉತ್ಪಾದನೆ ಹಾಗೂ ಆದಾಯ ಹೆಚ್ಚುತ್ತದೆ. ಇಂಥ ಒಂದು ಅನುಕೂಲ ಪರಿಸ್ಥಿತಿಯನ್ನು ಯೋಜಕರು ನಿರೀಕ್ಷಿಸಿದ್ದರು. ಅಲ್ಲದೆ ಶೀಘ್ರ ಕೈಗಾರಿಕೀಕರಣ ಭಾರೀ ಕೈಗಾರಿಕೆಗಳ ಮೇಲೆ ಒತ್ತು ಕೊಡುವುದರಿಂದ, ದಿನಬಳಕೆ ವಸ್ತುಗಳನ್ನು ಉತ್ಪಾದಿಸುವ ಸಣ್ಣಕೈಗಾರಿಕಾ ಕ್ಷೇತ್ರ ಹಳ್ಳಿಯಲ್ಲೇ ಉಳಿಯುತ್ತದೆ ಮತ್ತು ಭಾರೀ ಉದ್ಯಮಗಳಲ್ಲಿನ ಉದ್ಯೋಗ ಹೆಚ್ಚಳದ ಪರಿಣಾಮವಾಗಿ ಸಣ್ಣ ಕೈಗಾರಿಕೆಗಳು ಉತ್ಪಾದಿಸುವ ದಿನಬಳಕೆ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ.

ಎಂದೂ ಅವರು ಭಾವಿಸಿದ್ದರು. ಆದರೆ ದುರದೃಷ್ಟವಶಾತ್ ಈ ನಿರೀಕ್ಷೆ ಮುರಿದುಬಿತ್ತು. ಒಟ್ಟು ಆಂತರಿಕ ಉತ್ಪಾದನೆ (ಜಿ.ಡಿ.ಪಿ.) ಹೆಚ್ಚಿದಂತೆ, ಜೀವನಮಟ್ಟ ಹೆಚ್ಚಲಿಲ್ಲ. ಆರ್ಥಿಕ ಪ್ರಗತಿಯ ಫಲದ ಸಾರ್ವತ್ರಿಕ ವಿತರಣೆ ಆಗಲಿಲ್ಲ. ಕೃಷಿ ಮತ್ತು ಗ್ರಾಮೀಣ ಕ್ಷೇತ್ರದಿಂದ ಎತ್ತಂಗಡಿ ಆದ ಶ್ರಮಿಕರಲ್ಲಿ ಬಹುಪಾಲು ಜನ ನಿರುದ್ಯೋಗಿಗಳಾಗಿ ಉಳಿದರು. ಏಕೆಂದರೆ ಭಾರೀ ಉದ್ಯಮಗಳಿಗೆ ಬೇಕಾಗಿದ್ದುದು ಕುಶಲ ಅಥವಾ ಅರೆಕುಶಲ ಕೆಲಸಗಾರರು. ಇದನ್ನು ಪೂರೈಸಲು ಕೃಷಿ ಕಾರ್ಮಿಕರಿಗೆ ಆಗಲಿಲ್ಲ. ಹೀಗಾಗಿ, ಗ್ರಾಮ ಕ್ಷೇತ್ರದಿಂದ ಹೆಚ್ಚುವರಿ ಶ್ರಮಿಕರನ್ನು ಸೆಳೆದು, ಅವರನ್ನು ಭಾರೀ ಉದ್ಯಮಗಳಲ್ಲಿ ತೊಡಗಿಸಿ, ಅದರಿಂದ, ಕೃಷಿ ಕ್ಷೇತ್ರದ ಹೊರೆಯನ್ನು ಇಳಿಸಿ, ತನ್ಮೂಲಕ ಉದ್ಯೋಗಾವಕಾಶ ಹೆಚ್ಚಿಸಿ, ಗ್ರಾಮೀಣ ಉತ್ಪನ್ನಗಳಿಗೆ ಬೇಡಿಕೆಯನ್ನು ಹೆಚ್ಚಿಸಬಹುದೆಂಬ ವಿಚಾರ ಹಗಲುಗನಸಾಗಿ ಉಳಿಯಿತು.

ಪಂಚವಾರ್ಷಿಕ ಯೋಜನೆಗಳ ಅವಳಿ ಗುರಿಗಳು, ಶೀಘ್ರ ಕೈಗಾರಿಕೀಕರಣ ಹಾಗೂ ನ್ಯಾಯಯುತ ವಿತರಣೆ, ಸಾಧಿತವಾಗದೆಯೇ ಉಳಿದವು. ಇದಕ್ಕೆ ಕಾರಣ ಎರಡರ ನಡುವಿನ ಅಂತರ್ಗತ ಸಂಘರ್ಷ. ಶೀಘ್ರ ಕೈಗಾರಿಕೀಕರಣದ ಅರ್ಥ ಕೆಲವೇ ಜನರ ಕೈಯಲ್ಲಿ ಆರ್ಥಿಕ ಚಟುವಟಿಕೆಯ ಹತೋಟಿ, ಉಳಿದವರನ್ನು ಹೇಗೋ ಬದುಕಿಕೊಳ್ಳಲು ಬಿಟ್ಟುಬಿಡುವುದು. ಅಂಥ ವಾತಾವರಣದಲ್ಲಿ ನ್ಯಾಯಯುತ ಹಾಗೂ ಸಮತ್ವದ ವಿತರಣೆ ಅರಳಲಾರದು.

ಭಾರತಕ್ಕೆ ಬೇಕಾಗಿದ್ದುದು ಉತ್ಪಾದನೆಯ ಹೆಚ್ಚಳವಲ್ಲ. ಉತ್ಪಾದಕರ ಹೆಚ್ಚಳ. ಬಳಕೆಯ ಪ್ರಮಾಣ ಜೀವನಮಟ್ಟಕ್ಕೆ ಸೂಚಕ ಎನ್ನಲಾಗುತ್ತದೆ. ಕೇವಲ ಉತ್ಪಾದನೆಯಷ್ಟೆ ಬಳಕೆಯ ಪ್ರಮಾಣವನ್ನು ಹೆಚ್ಚಿಸಲಾರದು. ಉತ್ಪಾದಿತವಾದುದು ಬಳಕೆಯಾಗಬೇಕು. ಕೊಳ್ಳುವ ಶಕ್ತಿ ಇಲ್ಲದೆ ಬಳಕೆ ನಡೆಯಲಾರದು. ಇಂದಿನ ಅರ್ಥವ್ಯವಸ್ಥೆಯಲ್ಲಿ ಕೊಳ್ಳುವ ಶಕ್ತಿಯೇ ಹಣ. ಅದನ್ನು ಭಿಕ್ಷೆಯಂತೆ ಹಂಚಲಾಗುವುದಿಲ್ಲ. ಕೊಳ್ಳುವ ಶಕ್ತಿಯನ್ನು ಎಲ್ಲರಿಗೂ ಹಂಚುವ ಏಕೈಕ ವೈಜ್ಞಾನಿಕ ಹಾಗೂ ಪರಿಣಾಮಕಾರಿ ವಿಧಾನವೆಂದರೆ ಎಲ್ಲರಿಗೂ ಸಾರ್ವತ್ರಿಕವಾಗಿ ಉತ್ಪಾದಕ ಉದ್ಯೋಗವನ್ನು ಒದಗಿಸುವುದು. ಬಳಕೆ ಇಲ್ಲದೆ ಉತ್ಪಾದನೆಗೆ ಅವಕಾಶವಿಲ್ಲ. ಅರ್ಥವ್ಯವಸ್ಥೆ ಭದ್ರವಾಗಿರಬೇಕಾದಲ್ಲಿ, ಉತ್ಪಾದನೆ-ಬಳಕೆ-ಉತ್ಪಾದನೆ ಈ ಸರಪಳಿ ಭಗ್ನವಾಗದಂತೆ ಇರಬೇಕು. ಬಳಕೆಯೇ ಉತ್ಪಾದನೆಯ ತಾಯಿ ಎನ್ನಲಾಗಿದೆ. ನಮ್ಮ ಉತ್ಪಾದನಾ ವಿಧಾನದಲ್ಲಿ ಉತ್ಪಾದನೆಯ ಜೊತೆಜೊತೆಗೇ ಸಾರ್ವತ್ರಿಕ ಉದ್ಯೋಗ ಒದಗಿಸುವ ವ್ಯವಸ್ಥೆ ಅಂತರ್ಗತವಾಗಿರಬೇಕು. ಅದರಿಂದ ಹೆಚ್ಚು ಹೆಚ್ಚು ಜನ, ಉತ್ಪಾದಿತ ವಸ್ತುಗಳನ್ನು ಬಳಸಲು ಕೊಳ್ಳುವ ಶಕ್ತಿಯನ್ನು ಪಡೆಯುತ್ತಾರೆ. ಶ್ರಮ ಆಧಾರಿತ ಉತ್ಪಾದನಾ ವಿಧಾನವೊಂದೇ ನಮ್ಮ ದೇಶದ ಅಗತ್ಯಗಳನ್ನು ಪೂರೈಸಬಹುದೇ ವಿನಾ ಶ್ರಮ ಉಳಿಸುವ ವಿಧಾನಗಳಲ್ಲ.

ಭಾರತದಲ್ಲಿ ಮಾನವಶಕ್ತಿ ಹೇರಳವಾಗಿದೆ. ಬಂಡವಾಳ ಕಡಿಮೆ. ಇಲ್ಲಿ ವಿಕೇಂದ್ರೀಕೃತ ವ್ಯವಸ್ಥೆಯೊಂದೇ ಸೂಕ್ತ ಎಂಬುದು ಕುಮಾರಪ್ಪನವರ ಪೂರ್ಣ ನಂಬುಗೆ. ಏಕೆಂದರೆ ಅದರಲ್ಲಿ ಬಂಡವಾಳ ಹೂಡಿಕೆ ಕಡಿಮೆ, ಉದ್ಯೋಗ ಸಾಮರ್ಥ್ಯ ಹೆಚ್ಚು. ಕುಮಾರಪ್ಪನವರ ಈ ತೀರ್ಮಾನಕ್ಕೆ ಯಾವುದೇ ಭಾವುಕತೆ ಅಥವಾ ಸೈದ್ಧಾಂತಿಕ ಹಠ ಕಾರಣವಲ್ಲ. ಅವರದು ತುಂಬ ವೈಜ್ಞಾನಿಕ ಚಿಂತನೆ. ಅವರು ನೀಡಿದ ಈ ಸಮೀಕರಣ ಅವರ ವೈಜ್ಞಾನಿಕ ನಿಲುವಿಗೆ ಸೂಚಕ. $W = E + M$. ಇಲ್ಲಿ W ಎಂದರೆ ಸಂಪತ್ತು

(Wealth). E ಎಂದರೆ ಮಾನವಶಕ್ತಿಯ ಹೂಡಿಕೆ ಮತ್ತು M ಎಂದರೆ ಉಪಕರಣಗಳು, ಆಯುಧಗಳು ಮತ್ತಿತರ ಬಂಡವಾಳ ಮೂಲಗಳು. ಈ ಸಮೀಕರಣದಲ್ಲಿ M ಹೆಚ್ಚಿದ್ದರೆ, E ಕಡಿಮೆ ಇರುವುದು ಸಾಧ್ಯ. ಹಾಗೆಯೇ E ಹೆಚ್ಚಿದ್ದರೆ M ಕಡಿಮೆ ಸಾಕು. ನಮ್ಮ ದೇಶದ ಸಲುವಾಗಿ ಯೋಜನೆ ರೂಪಿಸುವಾಗ ನಾವು E ಮತ್ತು M ಅಂದರೆ ಮಾನವ ಸಂಪನ್ಮೂಲ ಮತ್ತು ಸಾಮುಗ್ರಿ ಅಥವಾ ಬಂಡವಾಳ ಮೂಲ ಎಷ್ಟು ಇದೆ ಅರಿತುಕೊಳ್ಳಬೇಕು. ಇದನ್ನು ಮಾಡಿದಾಗ ನಮಗೆ ತಿಳಿಯುತ್ತದೆ. ನಮ್ಮ ದೇಶದಲ್ಲಿ E ಹೇರಳವಾಗಿದೆ. M ವಿರಳವಾಗಿದೆ. ಆದ್ದರಿಂದ ನಮ್ಮ ಯೋಜನೆ ಪರಿಣಾಮಕಾರಿ ಮತ್ತು ಉಪಯುಕ್ತವಾಗಬೇಕಾದಲ್ಲಿ, ಅದು ಶ್ರಮದ ಮೇಲೆ ನಿಲ್ಲಬೇಕು. ಬಂಡವಾಳದ ಮೇಲೆ ಅಲ್ಲ. ನಾವು ಉದ್ದಕ್ಕೂ ಎಡವಿರುವುದು ಇಲ್ಲೇ. ಕುಮಾರಪ್ಪನವರ ಪ್ರಕಾರ, "ಯಾವ ಯೋಜನೆ ಕಚ್ಚಾ ವಸ್ತುಗಳನ್ನೇ ಬಳಸಿ, ಹೆಚ್ಚು ಬಲವಾದ ಮಾನವ ಶಕ್ತಿಯನ್ನು ನಿರ್ಲಕ್ಷಿಸುವುದೊ, ಅದು ಸಮತೂಕವಿಲ್ಲದ ಯೋಜನೆ. ಅದು ಎಂದಿಗೂ ಮಾನವ ಸಮಾನತ್ವವನ್ನು ಸ್ಥಾಪಿಸಲಾರದು."

ಚಕ್ರವರ್ತಿ ರಾಜಗೋಪಾಲಾಚಾರಿ ಭಾರತದ ಪ್ರಥಮ ಗವರ್ನರ್ ಜನರಲ್ ಮತ್ತು ಗಾಂಧೀಜಿಯ ಹಾಗೂ ಕುಮಾರಪ್ಪನವರ ಜೊತೆಗಾರರು, ಈ ವಿಚಾರಕ್ಕೆ ದನಿಗೂಡಿಸಿದರು. 1928ರಲ್ಲಿ ಅವರು ಬರೆದರು. "ಸಂಪತ್ತನ್ನು ಉತ್ಪಾದಿಸಿದ ನಂತರ ಅದನ್ನು ಸಮನಾಗಿ ಹಂಚುವುದು ಅಸಾಧ್ಯ. ಅದಕ್ಕೆ ಜನ ಒಪ್ಪಲಾರರು. ಆದರೆ ಉತ್ಪಾದನೆಗೆ ಮೊದಲೇ ನ್ಯಾಯಯುತವಾಗಿ ಹಂಚಿಕೆಯಾಗುವ ರೀತಿಯಲ್ಲಿ ಸಂಪತ್ತನ್ನು ಉತ್ಪಾದಿಸಬಹುದು."

ಇದು ವೈಜ್ಞಾನಿಕವೇ? ಪ್ರಗತಿಪರವೇ ?


ಭಾರೀ ಉದ್ಯಮಗಳು ಆಧುನಿಕ, ವೈಜ್ಞಾನಿಕ ಹಾಗೂ ಪ್ರಗತಿಪರವಾಗಿವೆ ಎಂದು ತೋರುತ್ತವೆ. ಇದಕ್ಕೆ ವಿರುದ್ಧ ವಿಕೇಂದ್ರೀಕೃತ ಉದ್ಯಮ ಎನ್ನುತ್ತಾರೆ.

ಇಲ್ಲಿ ನಾವು ಅರ್ಥಮಾಡಿಕೊಳ್ಳಬೇಕು, ವಿಜ್ಞಾನ ಮಾನವನಿರ್ಮಿತವಲ್ಲ, ಅದು ನಿಸರ್ಗ ನಿರ್ಮಿತ. ಪ್ರಕೃತಿ ಬದಲಾಗದ ನಿಯಮಗಳ ಪ್ರಕಾರ ನಿರ್ದಿಷ್ಟ ಪಥದಲ್ಲಿ ಸಾಗುತ್ತದೆ. ಮನುಷ್ಯ ಈ ನಿಯಮಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಒಂದು ಜ್ಞಾನ ವ್ಯವಸ್ಥೆಯಾಗಿ ಮಾಡಿದಾಗ ಅದನ್ನು ವಿಜ್ಞಾನ ಎನ್ನುತ್ತೇವೆ.

ಬೇರೆ ಮಾತಿನಲ್ಲಿ ಹೇಳುವುದಾದರೆ, ಯಾವುದೇ ಕಾರ್ಯರೀತಿಯನ್ನು ವೈಜ್ಞಾನಿಕ ಎನ್ನಬೇಕಾದರೆ, ಅದು ಎಲ್ಲಾ ವಿಧದಲ್ಲೂ ಪ್ರಕೃತಿಗೆ ಹೊಂದಿಕೆಯಾಗಿರಬೇಕು. ಎಷ್ಟು ಮಟ್ಟಿಗೆ ನಾವು ಪ್ರಕೃತಿಯಿಂದ ದೂರಸರಿಯುವೆವೊ ಅಷ್ಟರಮಟ್ಟಿಗೆ ನಾವು ಅವೈಜ್ಞಾನಿಕರು. ಹಾಗೆ ದಾರಿ ತಪ್ಪುವುದು ನಮ್ಮದೇ ನಾಶಕ್ಕೆ ನಾಂದಿ, ಏಕೆಂದರೆ ನಾವು ಪ್ರಕೃತಿಯ ಸೃಷ್ಟಿ ತಾನೇ. ನಿಸರ್ಗದಲ್ಲಿ ಯಾವ ಬಗೆಯ ಜ್ಞಾನ ಮತ್ತು ಸತ್ಯ ಕಂಡು ಬರುವುದೋ ಅದರ ಶೋಧನೆ ಮತ್ತು ಮಾನವನ ಅಗತ್ಯಗಳನ್ನು ಪೂರೈಸಲು ಅವುಗಳ ಬಳಕೆಮಾಡುವುದು ಪ್ರಗತಿಯನ್ನು ಸೂಚಿಸುತ್ತದೆ. ನಿಸರ್ಗದ ಜೊತೆಗೆ ಹಾಗೂ ಅದರ ಕಟ್ಟಳೆಗಳಿಗೆ ಅನುಗುಣವಾಗಿ ನಾವು ಎಷ್ಟು ಮಟ್ಟಿಗೆ ಸಾಗಲು ಸಾಧ್ಯವೊ, ಅಷ್ಟುಮಟ್ಟಿಗೆ ನಾವು

ಸರಿಯಾದ ದಿಕ್ಕಿನಲ್ಲಿ ಮುನ್ನಡೆಯುತ್ತೇವೆ, ನಿಸರ್ಗಕ್ಕೆ ಅಡ್ಡದಾರಿ ಹಿಡಿದರೆ ಹಿಂಸೆ, ನಾಶ ಹಾಗೂ ಘರ್ಷಣೆ ಉಂಟಾಗುತ್ತವೆ. ಆದ್ದರಿಂದ, ಮನುಷ್ಯನ ಮೂಲಭೂತ ಅಗತ್ಯಗಳನ್ನು ಪೂರೈಸಲು ಮಾಡುವ ಕ್ರಿಯೆ ಕೇವಲ ವಸ್ತುಗಳನ್ನು ಉತ್ಪಾದಿಸಿದರೆ ಸಾಲದು. ಅದು ಆತನದೇ ವ್ಯಕ್ತಿತ್ವದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಸಹಾಯಕವಾಗಿರಬೇಕು.

ಭಾರತ ಇರುವುದು ತನ್ನ ಹಳ್ಳಿಗಳಲ್ಲಿ. ಅಂತೆಯೇ ದೇಶದ ಅಭಿವೃದ್ಧಿಯ ಯಾವುದೇ ಕಾರ್ಯಕ್ರಮವೂ ಮೂಲತಃ ಗ್ರಾಮೀಣ ಜನತೆಗಾಗಿಯೇ ಇರಬೇಕು, ನಗರದ ಜನತೆ ತನ್ನ ಯೋಗಕ್ಷೇಮ ತಾನು ನೋಡಿಕೊಳ್ಳುವ ಸಾಮರ್ಥ್ಯ ಹೊಂದಿದೆ. ಕೆಳಕಾಣಿಸಿರುವ ರೇಖಾಚಿತ್ರ ಗ್ರಾಮ ಅರ್ಥವ್ಯವಸ್ಥೆಯನ್ನು ವಿವರಿಸುತ್ತದೆ.



'A' (ಎ) ಗ್ರಾಮೀಣ ಸಂಪತ್ತಿಗೆ ಸೂಚಕ. ಗ್ರಾಮ ಸಂಪದಭಿವೃದ್ಧಿಯ ಅಡ್ಡಕಲ್ಲು ಸಮತೋಲವಾಗಿರಬೇಕಾದರೆ, ಅದಕ್ಕೆ 'B' (ಬಿ) ಮತ್ತು 'C' ಕಂಬಗಳ ಆಧಾರಬೇಕು. 'B' (ಬಿ) ಅಂದರೆ ಬೇಸಾಯ. ಅರ್ಥಾತ್ ಬೇಸಾಯ ಮಾತ್ರ 'ಎ'ಗೆ ಆಧಾರ ವಾಗಲಾರದು.ಕೃಷಿ ಆದಾಯಕ್ಕೆ ಕೈಗಾರಿಕೆ ಹಾಗೂ ಇತರ ಕಾರ್ಯಗಳ ಆದಾಯದ ಪೂರಕ ನೆರವು ಅಗತ್ಯ. ಕೈಗಾರಿಕಾ ಕ್ರಾಂತಿಯು ಆಗಮನ 'ಸಿ' ಕಂಭಕ್ಕೆ ಅಂದರೆ ಗ್ರಾಮೋದ್ಯೋಗಗಳಿಗೆ ಬಲವಾದ ಏಟುಕೊಟ್ಟಿತು. ಅದರಿಂದಾಗಿ 'ಬಿ' ಕಂಭ ಅಂದರೆ ಬೇಸಾಯದ ಮೇಲಣ ಭಾರ ವಿಪರೀತವಾಯಿತು, ಜೊತೆಗೆ ಗ್ರಾಮಪುರೋಭಿವೃದ್ಧಿಯ ಅಡ್ಡಕಲ್ಲು ಏರುಪೇರಾಯಿತು, ಯೋಜಕರು ಈ ಪರಿಸ್ಥಿತಿಯನ್ನು ಸರಿಪಡಿಸಲು ಬಯಸಿದರೆ, ಅವರು ಮಾಡಬೇಕಾದ ಮೊದಲನೆಯ ಕೆಲಸ ಗ್ರಾಮಕೈಗಾರಿಕೆಯ ಕಂಭವನ್ನು ನೆಟ್ಟಗೆ ನಿಲ್ಲಿಸುವುದು, ಅದಕ್ಕೆ ಒಂದೆಡೆ ರಕ್ಷಣೆ ಕೊಡಬೇಕು, ಇನ್ನೊಂದೆಡೆ ಅದಕ್ಕೆ ತಂತ್ರಜ್ಞಾನದ ಪ್ರಗತಿಯ ಫಲವನ್ನು ಒದಗಿಸಿ ಅದು ಆರ್ಥಿಕವಾಗಿ ದೃಢವಾಗುವಂತೆ ಮಾಡಬೇಕು, ಅಂಥ ಕ್ರಮವೊಂದೇ ಗ್ರಾಮಾಭಿವೃದ್ಧಿಯನ್ನು ಮತ್ತೆ ತರಲು ಸಾಧ್ಯ.

ಪ್ರಖ್ಯಾತ ಪರಿಸರವಾದಿ ಶ್ರೀ ಸುಂದರಲಾಲ್ ಬಹುಗುಣ ಹೇಳುತ್ತಾರೆ, "ಭಾರಿ ಕೈಗಾರಿಕೋದ್ಯಮಿಗಳು ವಾಯು ಮತ್ತು ಜಲಮಾಲಿನ್ಯಕ್ಕೆ ಮುಖ್ಯಕಾರಣಗಳು, ತ್ಯಾಜ್ಯವಸ್ತುಗಳಾದ ಕೊಳಕು ಗಾಳಿ ನೀರುಗಳೇ ಮುಖ್ಯ ಕಲುಷಿತಕಾರಿಗಳು, ಉತ್ಪಾದನೆ ಕೇಂದ್ರೀಕೃತವಾದಾಗ ಕೊಳಚೆ ಪ್ರದೇಶ ತಲೆಎತ್ತುತ್ತವೆ. ಕೇಂದ್ರೀಕೃತ ಉತ್ಪಾದನಾ ವ್ಯವಸ್ಥೆ ಭೂಮಿಯನ್ನು ಶೋಷಿಸಿದೆ. ನಿರುದ್ಯೋಗ ನಿಸ್ಸಹಾಯಕತೆಗಳನ್ನು ಹುಟ್ಟುಹಾಕಿದೆ. ಇದು ಉತ್ಪಾದಕರನ್ನು ಮತ್ತು ಬಳಕೆದಾರರನ್ನು ಪರಸ್ಪರ ದೂರಗೊಳಿಸಿ ಪ್ರತ್ಯೇಕ ಮೂಲೆಗಳಿಗೆ ತಳ್ಳಿದೆ. ಅನುತ್ಪಾದಕ ಮಧ್ಯವರ್ತಿಗಳ ದಂಡನ್ನೇ ಸೃಷ್ಟಿಸಿದೆ. ಅವರು ಉತ್ಪಾದಕರನ್ನು ಶೋಷಿಸುತ್ತಾರೆ, ಬಳಕೆದಾರರನ್ನು ಹಿಂಡುತ್ತಾರೆ". ಭಾರಿ ಕೈಗಾರಿಕೆಯಲ್ಲಿ, ಉತ್ಪಾದನೆಯ

ಅಗಾಧತೆಯಿಂದಾಗಿ, ಉತ್ಪಾದಕ ಮತ್ತು ಗ್ರಾಹಕರ ನಡುವೆ ಸಂಪರ್ಕ ಇರಲಾರದು, ಅದರ ಪರಿಣಾಮವೇ ಈ ಶೋಷಣೆ. ವಿಕೇಂದ್ರೀಕೃತ ಕೈಗಾರಿಕೆಯಲ್ಲಿ ಇದಕ್ಕೆ ಆಸ್ಪದವಿಲ್ಲ. ಏಕೆಂದರೆ ಗ್ರಾಹಕ ಉತ್ಪಾದಕನ ನೇರ ಸಂಪರ್ಕದಲ್ಲಿರುತ್ತಾನೆ, ಇದರಿಂದ ಮಧ್ಯವರ್ತಿಯ ಪಾತ್ರವೇ ಬೇಕಾಗುವುದಿಲ್ಲ. ಮಾತ್ರವಲ್ಲದೆ ಇದು ಉತ್ಪನ್ನದ ಗುಣಮಟ್ಟವನ್ನು ರಕ್ಷಿಸುತ್ತದೆ.

ಇನ್ನೊಂದು ಮುಖ್ಯ ಅಂಶವೆಂದರೆ ಶ್ರಮಿಕ ವರ್ಗವನ್ನು ಬಂಡವಾಳವರ್ಗ ಶೋಷಿಸಲು ಇರುವ ಅವಕಾಶ. ಅದು ಒಡೆಯ ಮತ್ತು ಕೂಲಿ ಎಂಬ ಎರಡು ನಿರ್ದಿಷ್ಟ ಭಿನ್ನ ವರ್ಗಗಳನ್ನು ಸೃಷ್ಟಿಮಾಡುತ್ತದೆ. ಆದರಿಂದ ಘರ್ಷಣೆಗೂ ಶೋಷಣೆಗೂ ಆಸ್ಪದವಾಗುತ್ತದೆ. ಅಂಥ ಸಮಾಜದಲ್ಲಿ ಶಾಂತಿ ಹೇಗೆ ಇದ್ದೀತು ? ವಿಕೇಂದ್ರೀಕೃತ ಕ್ಷೇತ್ರದಲ್ಲಿಯಾದರೊ, ವ್ಯಕ್ತಿ ಒಡೆಯನೂ ಅಲ್ಲ, ಕೂಲಿಯೂ ಅಲ್ಲ, ಆತ ಸ್ವಯಂ ಉದ್ಯೋಗವುಳ್ಳ ಕುಶಲಿ.

ಇದೆಲ್ಲಕ್ಕೂ ಮಿಗಿಲಾಗಿ, ಯೋಜಕರು ಈಗ ಜಾಗತೀಕರಣ, ಉದಾರೀಕರಣ ಎಂದೆಲ್ಲ ಹೇಳುತ್ತಿದ್ದಾರೆ. ಉತ್ಪಾದನೆ ಮುಖ್ಯವಾಗಿ ರಫ್ತಿಗಾಗಿಯೇ ವಿನಾ ಬಳಕೆಗೆ ಅಲ್ಲ, ಆಂತರಿಕ ಅರ್ಥವ್ಯವಸ್ಥೆಯನ್ನು ಅಂತಾರಾಷ್ಟ್ರೀಯ ಅರ್ಥವ್ಯವಸ್ಥೆಗೆ ಜೊಡಿಸುವುದೇ ಇವರ ಉದ್ದೇಶ. ಇಲ್ಲಿಗೆ ಬಂದು ಕೈಗಾರಿಕೆಗಳನ್ನು ಸ್ಥಾಪಿಸಿ ಎಂದು ಬಹುರಾಷ್ಟ್ರೀಯ ಕಂಪನಿಗಳನ್ನು ಕರೆಯುತ್ತಿದ್ದೇವೆ. ಇದು ನಮ್ಮದೇ ಗ್ರಾಮೋದ್ಯೋಗಗಳಿಗೆ ಮಾರಕವಾಗುತ್ತದೆ. ಈವರೆಗೆ, ನಾವು ನಮ್ಮ ಭಾರಿ ಪ್ರಮಾಣದ ಉದ್ಯಮಗಳನ್ನು ಬೆಳೆಸಿ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಾಲ ಪಡೆಯುತ್ತಿದ್ದೆವು. ಸಾಲ ಬೆಳೆದು ಬೆಳೆದು, ಹೊರಲಾರದಷ್ಟು ಆಗಿದೆ. ಆದ್ದರಿಂದ, ವಿದೇಶಿಯರನ್ನೇ ಇಲ್ಲಿಗೆ ಬಂದು ಉದ್ಯಮ ಸ್ಥಾಪಿಸಿ ಎಂದು ಬೇಡಲಾರಂಭಿಸಿದ್ದೇವೆ. ಇದು ಎಷ್ಟು ಆದಾಯಕರವಾದೀತೋ, ಭಾರತದ ಇತಿಹಾಸವನ್ನು ಅವಲೋಕಿಸಿದರೆ ಅಂದಾಜಾದೀತು.

ಸುಂದರಲಾಲ ಬಹುಗುಣ ಅವರ ಮಾತನ್ನೇ ಮತ್ತೆ ಹೇಳುವುದಾದರೆ, "ತಮ್ಮ ಹೊಸ ಉತ್ಪಾದನಾ ತಂತ್ರಗಳಿಂದ, ಸರ್ಕಾರಗಳ ಮೇಲೆ ಚಲಾಯಿಸುವ ಪ್ರಭಾವದಿಂದ ಹಾಗೂ ಷಾಮೀಲಿನಿಂದ, ಅಂತಾರಾಷ್ಟ್ರೀಯ ಕಂಪನಿಗಳು ನಮ್ಮ ಅರ್ಥವ್ಯವಸ್ಥೆಗೆ ಗಂಡಾಂತರ ಒಡ್ಡುತ್ತಿವೆ. ಮಾನವ ಜೀವನವನ್ನು ಮಾರುಕಟ್ಟೆಯ ಆದೇಶಕ್ಕೆ ಒಳಪಡಿಸುವುದು ಸಮಾಜವನ್ನೇ ನಾಶಮಾಡಿದಂತೆ. ಮಾರುಕಟ್ಟೆಗೆ ಕಣ್ಣಿಲ್ಲ, ಪ್ರಭುತ್ವಕ್ಕೆ ಕರುಣೆಯಿಲ್ಲ, ಎರಡೂ ಕೈಜೋಡಿಸಿದರೆ ವ್ಯಕ್ತಿ ಮತ್ತು ಸಮಾಜದ ಮೇಲೆ ಯುದ್ಧ ಸಾರಿದಂತೆಯೆ".

ಗಗನಕ್ಕೆ ಏರುತ್ತಿರುವ ಬಹುಮಹಡಿ ಕಟ್ಟಡಗಳ ತೋರಿಕೆಯ ಅಭಿವೃದ್ಧಿಯಿಂದಾಗಲಿ, ವಿದೇಶಗಳಿಂದ ಹರಿದು ಬರುತ್ತಿರುವ ಬಂಡವಾಳದ ಹೆಚ್ಚಳದಿಂದಾಗಲಿ, ಅಥವಾ ನಗರಗಳಲ್ಲಿ ಹೆಚ್ಚುತ್ತಿರುವ ಭೋಗವಿಲಾಸಗಳಿಂದಾಗಲಿ ನಾವು ಕುರುಡಾಗಬಾರದು. ಭಾರತ ಇರುವುದು ಹಳ್ಳಿಗಳಲ್ಲಿ, ಆದ್ದರಿಂದ ಭಾಗ್ಯೋದಯ ಅಥವಾ ಬಡತನಗಳಿಗೆ ಸಾಕ್ಷ್ಯವನ್ನು ಹಳ್ಳಿಗಳಲ್ಲಿ ಹುಡುಕಬೇಕು. ಪ್ರಾಮಾಣಿಕವಾಗಿ ಹಾಗೆ ಹುಡುಕಿದಲ್ಲಿ, ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಹಾಗೂ ಪರಿಸರ ನಾಶಗಳ ನಗ್ನಸತ್ಯ ನಮ್ಮ ಕಣ್ಣಿಗೆ ರಾಚುತ್ತವೆ. ಆಗ, ಈ ಕಠಿಣ ವಾಸ್ತವಗಳನ್ನು ಪರಿಗಣಿಸುವುದು, ಮತ್ತು ನಮ್ಮ ವಾರಸಿಕೆಯನ್ನು ನಮ್ಮ ಪರಿಸರವನ್ನು ರಕ್ಷಿಸಲು ನಮ್ಮ ಆರ್ಥಿಕ ಕ್ರಮವನ್ನು

ಬದಲಾಯಿಸಲು ಹೆಜ್ಜೆ ಇಡುವುದು ನಮಗೆ ಹಾಗೂ ನಮ್ಮ ಸಮಾಜಕ್ಕೆ ಹಿತಕರವಲ್ಲವೇ ಎಂದು ಪ್ರಶ್ನಿಸಿಕೊಳ್ಳಲೇಬೇಕಾಗುತ್ತದೆ, ಬೇರೆ ದಾರಿಯೇ ಇಲ್ಲ. ಜೆ.ಸಿ. ಕುಮಾರಪ್ಪನವರ ಪ್ರಕಾರ, ನಮ್ಮ ಆರ್ಥಿಕಕ್ರಮವನ್ನು ಆರಿಸಿಕೊಳ್ಳುವಾಗ, ಕೆಳಕಾಣಿಸಿರುವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

1) ಆದಷ್ಟು ದಕ್ಷವಾಗಿ ಸಂಪತ್ತನ್ನು ಸೃಷ್ಟಿಸುವುದು.
2) ಸಂಪತ್ತನ್ನು ವ್ಯಾಪಕವಾಗಿ ಸಮಾನವಾಗಿ ಹಂಚುವುದು.
3) ಜನರ ಅಗತ್ಯಗಳನ್ನು ಮೊದಲು ಪೂರೈಸುವುದು. ಸುಖ ಸೌಕರ್ಯಗಳು ಅನಂತರ.
4) ಕೆಲಸಗಾರನ ಸಾಮರ್ಥ್ಯವನ್ನು ಪೂರಾ ಅರಿಯುವುದು ಮತ್ತು ಆತನ ವ್ಯಕ್ತಿತ್ವವನ್ನು ಬೆಳೆಸುವುದು.
5) ನಮ್ಮ ನಡೆ ಶೋಷಣೆ, ಸಂಘರ್ಷ ಹಾಗೂ ಹಿಂಸೆಗಳ ಅವಕಾಶವನ್ನು ತೊಡೆದು ಹಾಕುವಂತಿರಬೇಕು.
6) ಇದರಿಂದ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದ ನೆಲೆಸಬೇಕು.

ದೇಶದ ಒಟ್ಟು ಆಂತರಿಕ ಉತ್ಪಾದನೆ (GDP) ವರ್ಷಕ್ಕೆ ಹೆಚ್ಚು ಕಡಿಮೆ ಶೇ. 10ರಷ್ಟು ಹೆಚ್ಚುತ್ತಿದೆ, ಅದೇರೀತಿ ಭಾರತದ ಉಳಿತಾಯ ಪ್ರಮಾಣವೂ ಎಪ್ಪತ್ತರ ದಶಕದಿಂದೀಚೆಗೆ ಸುಮಾರು ಶೇ. 23ರಷ್ಟು ಹೆಚ್ಚುತ್ತಿದೆ. ಚೀಣಾದ ಉಳಿತಾಯ ಪ್ರಮಾಣವೇನೊ ಭಾರತಕ್ಕಿಂತ ಹೆಚ್ಚು. ಶೇ. 40ರಷ್ಟು. ಅರ್ಥಶಾಸ್ತ್ರಜ್ಞರು ಹೇಳುತ್ತಾರೆ, ನಾವು ಚೀಣಾಗೆ ಎರಡನೆಯ ಸ್ಥಾನದಲ್ಲಿದ್ದರೂ, ಚಿಂತೆ ಪಡಬೇಕಾಗಿಲ್ಲ, ಏಕೆಂದರೆ ಭಾರತ ಬಂಡವಾಳವನ್ನು ಹೆಚ್ಚು ದಕ್ಷವಾಗಿ ಬಳಸುತ್ತಿದೆ ಎಂದು. ಆದರೆ ಅಗತ್ಯವಾದುದೇನೆಂದರೆ, ಬೆಳವಣಿಗೆಯ ಹೆಚ್ಚಳಕ್ಕೂ ಆ ಬೆಳವಣಿಗೆಯ ಫಲ ಬಡವರಿಗೆ ತಲಪುವಂತೆ ಪರಿಣಾಮಕಾರಿ ಯೋಜನೆಗೂ ತಳಕು ಹಾಕಬೇಕಾಗಿದೆ. ಬೆಳವಣಿಗೆಯ ಫಲ ಬಡವನಿಗೆ ತಲುಪುತ್ತಿದೆಯೆ ? ಇದು ಪ್ರಶ್ನೆ.

ಇಂದಿಗೂ, ಭಾರತದಲ್ಲಿ ಶೇ. 35 ಜನ ಬಡತನದಲ್ಲೆ ಬದುಕುತ್ತಾರೆ. ಚೀಣಾದಲ್ಲಿ ಈ ಪ್ರಮಾಣ ಶೇ. 16, ಪಾಕಿಸ್ತಾನದಲ್ಲಿ 17 ಎನ್ನುತ್ತವೆ. ಅಂಕಿಅಂಶಗಳು. ಲಭ್ಯವಿರುವ ಮಾಹಿತಿಯ ಪ್ರಕಾರ, ನಮ್ಮ ಶ್ರಮಿಕವರ್ಗದಲ್ಲಿ ಶೇ. 9 ಮಂದಿಗೆ ಉದ್ಯೋಗವಿಲ್ಲ, ಬೆಳವಣಿಗೆಯ ಲಾಭ ಬಡವರಿಗೂ ಜಿನುಗುವಂತೆ ನಮ್ಮ ಯೋಜಕರು ಹಾಗೂ ಅನುಷ್ಠಾನಕರ್ತರು ನೋಡಿಕೊಳ್ಳಬೇಕು. ಸರ್ಕಾರ ಜಾರಿಮಾಡುವ ಕೆಲವು ಧೋರಣೆಗಳು ಗ್ರಾಮ ಸಮುದಾಯದ ಹಿತಕ್ಕೆ ವಿರುದ್ಧವಾದವು ಎಂದು ಜನಕೋಟಿಯ ಹಿತಾಸಕ್ತರಾದ ಯಾರಾದರೂ ಹೇಳಿಯಾರು. ಉದಾಹರಣೆಗೆ ನಮ್ಮ ದೇಶದಲ್ಲಿ ಗೋಧಿಗೆ ಬರ ಇಲ್ಲ, ಆದರೂ ಭಾರತ ಸರ್ಕಾರ ಆಸ್ಟ್ರೇಲಿಯಾದಿಂದ ಐದು ದಶಲಕ್ಷ ಟನ್ ಗೋಧಿ ತರಿಸಿಕೊಳ್ಳಲು ನಿರ್ಧರಿಸಿತು. ಅದೂ ಯಾವ ದರದಲ್ಲಿ ? ಆಸ್ಟ್ರೇಲಿಯಾದಿಂದ ತರಿಸಿದ್ದಕ್ಕೆ ಬೆಲೆ ಕ್ವಿಂಟಾಲಿಗೆ 950 ರೂ. ನಮ್ಮ ರೈತರಿಗೆ ಕೊಡುವ ಬೆಂಬಲ ಬೆಲೆ 650 ರೂ. ಸ್ಥಳೀಯ ರೈತರ ಸ್ಥಿತಿಗತಿಯ ಸುಧಾರಣೆ ಹಾಗಿರಲಿ, ನಮ್ಮ ಸರ್ಕಾರಕ್ಕೆ ಆಸ್ಟ್ರೇಲಿಯಾ ರೈತರದೇ ಕಾಳಜಿ. ಈ ಅಂಕಿಅಂಶಕೊಟ್ಟವರು ಬೇರೆ ಯಾರೂ ಅಲ್ಲ, ನಮ್ಮ ಮಾಜಿ ಪ್ರಧಾನಿ ವಿ.ಪಿ. ಸಿಂಗ್. ಅವರ ಹೇಳಿಕೆಗೆ ರಾಜಕೀಯ ಉದ್ದೇಶ ಇರಬಹುದು.

ಆದರೆ ಅವರು ಕೊಟ್ಟ ಈ ಅಂಕಿಅಂಶಗಳು ನಿಜವೇ ಆಗಿದ್ದಲ್ಲಿ, ಪರಿಸ್ಥಿತಿ ಗಾಬರಿ ಉಂಟುಮಾಡುವಂಥದು. ನವದೆಹಲಿಯಲ್ಲಿ ಒಂದು ರೈತ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಅವರು ಹೇಳಿದರು, ಇತರ ದೇಶಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳುವ ಸರ್ಕಾರಿ ನಿರ್ಧಾರವೇ ಮಧ್ಯಪ್ರದೇಶದಲ್ಲಿ ರೈತರ ಆತ್ಮಹತ್ಯೆಗೆ ಕಾರಣ ಎಂದು. ಅದು ರೈತರನ್ನು ಸಾಲಕ್ಕೆ ಸಿಕ್ಕಿಸಿದೆ. ಇದು ಕುಮಾರಪ್ಪನವರು ತೋರಿದ ಹಾದಿಯೆ ?

ವಿಶ್ವ ವ್ಯಾಪಾರ ಸಂಸ್ಥೆ (WTO) ಆದ ಮೇಲೆ ಏಷ್ಯ ಅಭಿವೃದ್ಧಿ ಬ್ಯಾಂಕ್ (ADB), ಅದು ಏಷ್ಯಾ ರಾಷ್ಟ್ರಗಳಲ್ಲಿ ಖಾಸಗಿ ವಲಯಗಳಿಗೆ ಹಣಕಾಸು ಒದಗಿಸುವುದರಲ್ಲಿ ನಿರತವಾಗಿದೆ. ಎಡಿಬಿ ವಿರೋಧಿ ಜನತಾ ವೇದಿಕೆ ಎ.ಡಿ.ಬಿ.ಯ ಕಾರ್ಯವನ್ನು ನವ ಉದಾರವಾದ ಎಂದು ಕರೆದು, ವಿರೋಧ ವ್ಯಕ್ತಪಡಿಸಲು ಜನರನ್ನು ಸರ್ಕಾರೇತರ ಸಂಸ್ಥೆಗಳನ್ನು ಸಂಘಟಿಸುತ್ತಿದೆ. ಎ.ಡಿ.ಬಿ.ಯ ಆಡಳಿತಗಾರರ (ಗವರ್ನರ್) ವಾರ್ಷಿಕ ಸಭೆ ಇತ್ತೀಚೆಗೆ ಹೈದರಾಬಾದಿನಲ್ಲಿ ನಡೆಯಿತು. ಎಡಿಬಿಯನ್ನು ಪ್ರತಿಭಟಿಸಲು ಏಷ್ಯಾದ ಹಾಗೂ ಭಾರತದ ಸರ್ಕಾರೇತರ ಸಂಸ್ಥೆಗಳೂ ಸಾಮಾಜಿಕ ತಂಡಗಳೂ ಒಟ್ಟುಗೂಡುತ್ತಿವೆ. ವಿಶ್ವವ್ಯಾಪಾರ ಸಂಸ್ಥೆ ಹಾಗೂ ಎಡಿಬಿಯ ಚಟುವಟಿಕೆಗಳು ಗ್ರಾಮಾಂತರ ಜನರಿಗೆ ವಿರುದ್ಧ ವಾದವು, ರಹಸ್ಯವಾದವು ಹಾಗೂ ಸಾರ್ವಜನಿಕರಿಗೆ ಹೊಣೆಇಲ್ಲದಂಥವು ಮತ್ತು ಅವುಗಳ ಯೋಜನೆಗಳು ಸಾವಿರಾರು ಗ್ರಾಮ ಕೆಲಸಗಾರರನ್ನು ಎತ್ತಂಗಡಿ ಮಾಡುತ್ತಿವೆ ಎಂದು ಎಡಿಬಿ ವಿರೋಧಿ ಜನತಾವೇದಿಕೆ ಭಾವಿಸುತ್ತದೆ. (ಹಿಂದೂ 26-3-2006).

ಶ್ರೀ ಸಿ. ಸುಬ್ರಹ್ಮಣ್ಯಂ ಭಾರತದ ಮಾಜಿ ಅರ್ಥಸಚಿವರು, ಮಹಾರಾಷ್ಟ್ರದ ಮಾಜಿ ರಾಜ್ಯಪಾಲರು ಹಾಗೂ ಅಖಿಲ ಭಾರತ ಜೆ. ಸಿ. ಕುಮಾರಪ್ಪ ಶತಮಾನೋತ್ಸವ ಸಮಿತಿಯ ಅಧ್ಯಕ್ಷರು. ಅವರು "ಧಾರಣಾಯೋಗ್ಯ ಅಭಿವೃದ್ಧಿ - ಗಾಂಧೀ ದೃಷ್ಟಿಕೋನ". (Sustainable Development - Gandhian perspective) ಎಂಬ ತಮ್ಮ ಲೇಖನದಲ್ಲಿ ಬರೆಯುತ್ತಾರೆ. "ಆಧುನಿಕ ವಿಜ್ಞಾನದ ಪ್ರಗತಿ ಹಾಗೂ ತಂತ್ರಜ್ಞಾನದ ಮುನ್ನಡೆ ಮಾನವನಿಗೆ ನಿಸರ್ಗದ ಮೇಲೆ ಸ್ವಲ್ಪ ಮಟ್ಟಿಗೆ ಒಡೆತನವನ್ನು ಕೊಡಮಾಡಿವೆ. ಈಚಿನ ವರ್ಷಗಳಲ್ಲಿ ಕೈಗಾರಿಕೆಯ ದೇಶಗಳನ್ನು ಭೌತಿಕ ಸಂಪದಭಿವೃದ್ಧಿಯ ಶಿಖರಕ್ಕೆ ಏರಿಸಿವೆ. ಜಗತ್ತಿನ ನವಸಂಪತ್ತು ಭೂಮಿಯ ಜನರಿಗೆಲ್ಲ ಸಮನಾಗಿ ಹಂಚಿಕೆ ಆಗಿಲ್ಲ, ಒಂದು ಬಿಲಿಯನ್ ಜನ ಅಪೂರ್ವ ಭೋಗದಲ್ಲಿ ಜೀವಿಸುತ್ತಿದ್ದರೆ, ಇನ್ನೊಂದು ಬಿಲಿಯನ್ ಜನ ದಟ್ಟ ದಾರಿದ್ರ್ಯದಲ್ಲಿ ಬದುಕಿದಾರೆ. ಗಗನಮುಟ್ಟುವ ಕೊಳ್ಳುಬಾಕತನ ಶ್ರೀಮಂತಿಕೆಯ ಸಂಕೇತವಾಗಿದೆ. ಜಗತ್ತಿನ ಭಾಗ್ಯಶಾಲಿಗಳ ಅತಿಯಾದ ಕೊಳ್ಳುಬಾಕತನ ಪರಿಸರ ಸಮಸ್ಯೆಯಾಗಿದೆ. ಸಾಟಿಯೆಇಲ್ಲದ ಪಿಡುಗಾಗಿದೆ. ಸಂಪನ್ಮೂಲಗಳನ್ನು ಅವರು ಬಾಚಿಕೊಳ್ಳುತ್ತಿರುವ ರೀತಿ ಕಾಡು, ನೆಲ, ನೀರು, ಗಾಳಿ ಹಾಗೂ ಹವಾಗಳನ್ನೆಲ್ಲ ನುಂಗಿ ನೊಣೆಯುವ ಇಲ್ಲವೇ ಪೂರಾಕೆಡಿಸುವ ಅಪಾಯವನ್ನು ಒಡ್ಡುತ್ತಿದೆ. ".

ಸುಬ್ರಹ್ಮಣ್ಯಂ ಅವರು ಅರ್ಥಶಾಸ್ತ್ರಜ್ಞರು, ಹಣಕಾಸಿನ ತಜ್ಞರು. ಮುಂದುವರಿದು ಹೇಳುತ್ತಾರೆ, "ಧಾರಕತ್ವ (ತಾಳಿಕೊಳ್ಳುವಿಕೆ) ಸಾಧಿಸಲು ಪರಿಸರದ ಹಾಗೂ ಸಾಮಾಜಿಕ

ಸುಧಾರಣೆಗಳು ಅಗತ್ಯ. ಇಂಧನ ವ್ಯವಸ್ಥೆಯ ಪುನರ್‌ರಚನೆ, ಜನಸಂಖ್ಯಾ ನಿಯಂತ್ರಣ, ಬಡತನ ನಿರ್ಮೂಲನ ಇತ್ಯಾದಿ, ಇದನ್ನು ಮೇಲಿಂದ ಮೇಲೆ ಹೇಳಲಾಗುತ್ತಿದೆ. ಇದರ ಜೊತೆಗೆ ಕೊಳ್ಳುಬಾಕತನವನ್ನು ಹೆಚ್ಚಿಸುತ್ತಿರುವ ಶಕ್ತಿಗಳ ವಿರುದ್ಧ ಧೈರ್ಯಯುತ ರಾಜಕೀಯ ಕ್ರಮಗಳೂ ಅಗತ್ಯ. ಜಾಹಿರಾತುಗಳ ಮೇಲೆ ಕಡಿವಾಣ ಖರೀದಿ ಪ್ರವೃತ್ತಿಯನ್ನು ನಿಲ್ಲಿಸುವುದು, ಕೊಳ್ಳುಬಾಕತನವನ್ನು ಹೆಚ್ಚಿಸುವ ಧೋರಣೆಗಳನ್ನು ತೊಡೆದುಹಾಕುವುದು ಮತ್ತು ಭಾರಿ ಕೊಳ್ಳುಬಾಕತನದ ಜೀವನ ರೀತಿಗೆ ಪರ್ಯಾಯವಾಗಿ ಗಾಂಧೀಜಿ ಮತ್ತು ಕುಮಾರಪ್ಪ ಸೂಚಿಸಿದಂಥ ಗೃಹ ಹಾಗೂ ಸಮುದಾಯದ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಅಂತಹ ಬದಲಾವಣೆಗಳು, ಅತಿಕೊಳ್ಳುಬಾಕತನದ ಭಾರವನ್ನು ಇಳಿಸಿ ಪರಿಸರಕ್ಕೆ ಸಹಾಯಕಾರಿ ಆಗುತ್ತವೆ. ಜೊತೆಗೇ ನಮ್ಮನ್ನು ಅತೃಪ್ತಿಯಲ್ಲೇ ನರಳಿಸುವ ಶಕ್ತಿಗಳನ್ನು ಪಳಗಿಸಿ ನಮ್ಮ ಮನಶ್ಶಾಂತಿಗೂ ಸಹಾಯಕಾರಿ ಆಗುತ್ತವೆ."

ಭಾರತದ ಹಳ್ಳಿಗಳಲ್ಲಿ ಯಥೇಚ್ಛವಾಗಿರುವುದು ಭೂಮಿ ಮತ್ತು ಪರಿಸರ. ಇದು ಕುಮಾರಪ್ಪನವರಿಗೆ ಖಾತರಿಯಾಗಿತ್ತು. ಕೊರತೆ ಇದ್ದುದು ಬಂಡವಾಳದಲ್ಲಿ. ಆದ್ದರಿಂದ, ಪರಿಶ್ರಮವನ್ನೇ ಸೂಕ್ತವಾಗಿ ಬಳಸಿದಲ್ಲಿ, ಅದೇ ಬಂಡವಾಳದ ಕೆಲಸ ಮಾಡಬಲ್ಲದು, ಅಲ್ಲದೆ, ಉಳಿತಾಯವನ್ನು ಹಳ್ಳಿಯ ಮಟ್ಟದಲ್ಲೆ ಅಥವಾ ಹಳ್ಳಿಗಳ ಗುಂಪುಗಳ ಮಟ್ಟದಲ್ಲೆ ಇರಿಸಿಕೊಂಡರೆ, ಅದು ಬಂಡವಾಳವಾಗಲು ಹಾಗೂ ಹೂಡಿಕೆಗೆ ಒದಗಲು ಆಸ್ಪದವಾಗಬಲ್ಲದು. ಆದರೆ ದೌರ್ಭಾಗ್ಯವೆಂದರೆ, ಗ್ರಾಮಮಟ್ಟದ ವ್ಯಾಪಾರ ಪ್ರತಿಕೂಲವಾಗಿರುವುದು, ಗ್ರಾಮ ಉತ್ಪನ್ನಗಳಿಗೆ ಕಡಿಮೆ ಬೆಲೆಕಟ್ಟಲಾಗುತ್ತದೆ. ಆದರೆ ಅವುಗಳಿಗೆ ವಿನಿಮಯಮಾಡಿಕೊಳ್ಳುವ ಉತ್ಪನ್ನಗಳಿಗೆ ಅಥವಾ ಸೇವೆಗಳಿಗೆ ಹೆಚ್ಚು ಬೆಲೆ ಕಟ್ಟಲಾಗುತ್ತದೆ. ಗ್ರಾಮಮಟ್ಟದಲ್ಲಿ ಬಂಡವಾಳ ರೂಪುಗೊಳ್ಳಲು ಆಗುವ ತೊಂದರೆಗೆ ಇದೇ ಕಾರಣ. ಇದಕ್ಕೆ ಪರಿಹಾರವೆಂದರೆ ಹಳ್ಳಿಯ ಜನತೆಗೆ ಅಭಿವೃದ್ಧಿಯನ್ನು ತಂದುಕೊಡುವ ವಿಕೇಂದ್ರೀಕೃತ ಯೋಜನೆ.

ವಿಕೇಂದ್ರೀಕೃತ ಯೋಜನೆಯನ್ನು ಸ್ಥಳೀಯ ಸ್ವಯಂಸೇವಾ ತಂಡಗಳ ಉದ್ಯಮ ಶೀಲತೆ ಹಾಗೂ ಬುದ್ಧಿಮತ್ತೆಗೆ ಬಿಟ್ಟುಬಿಡಬೇಕು. ನಮ್ಮ ಜನಕ್ಕೆ ಒಳ್ಳೆಯ ಬದುಕನ್ನು ಒದಗಿಸುವುದಕ್ಕೆ ನಮ್ಮ ಸಂಪನ್ಮೂಲಗಳು ಹೆಚ್ಚುಕಡಿಮೆ ಸಾಕಾಗುತ್ತವೆ. ನಮ್ಮ ಯಾವುದೇ ಅಗತ್ಯದ ಸಲುವಾಗಿಯೂ ನಾವು ಭಿಕ್ಷೆಗೆ ಹೋಗಬೇಕಾಗಿಲ್ಲ ಅಥವಾ ನೆರೆಹೊರೆಯ ದೇಶಗಳ ಮೇಲೆ ಯುದ್ಧಮಾಡಬೇಕಾಗಿಲ್ಲ. ನಮ್ಮ ಮೂಲಭೂತ ಅಗತ್ಯಗಳು ಪೂರೈಕೆಗೊಂಡನಂತರ, ಭೂಮಿ, ನೀರು, ಖನಿಜಗಳು ಇತ್ಯಾದಿಗಳಲ್ಲಿ ಹೆಚ್ಚುವರಿ ಏನಾದರೂ ಇದ್ದಲ್ಲಿ, ಅವನ್ನು ಧಾರಾಳವಾಗಿ ಭೋಗಜೀವನಕ್ಕಾಗಿ ಒದಗಿಸಲು ವ್ಯಾಪಾರಕ್ಕೆ ಇಡಬಹುದು ಅಥವಾ ವಿದೇಶಿ ವ್ಯಾಪಾರಕ್ಕೂ ಸೇರಿಸಬಹುದು.

ಕಚ್ಚಾ ಪದಾರ್ಥವನ್ನು ಬಳಕೆಗೆ ಯೋಗ್ಯವಾದ ಪದಾರ್ಥವಾಗಿ ಪರಿವರ್ತಿಸುವುದೂ ಬೇಕಾದಷ್ಟು ಉದ್ಯೋಗವನ್ನು ಒದಗಿಸಲು ಆಸ್ಪದವಾಗುತ್ತದೆ. ಆದ್ದರಿಂದ ನಮ್ಮ ವ್ಯಾಪಾರ ಇರಬೇಕಾದುದು ಕಚ್ಚಾ ವಸ್ತುಗಳಲ್ಲಿ ಅಲ್ಲ, ಮೌಲ್ಯವನ್ನು ಪಡೆದುಕೊಂಡ ಪರಿಷ್ಕೃತ ಉತ್ಪನ್ನಗಳಲ್ಲಿ, ಇದು ಖಂಡಿತವಾಗಿಯೂ, ನಮ್ಮ ಹಳ್ಳಿಯ ಜನತೆಗೆ ಉತ್ಪಾದಕ

ಉದ್ಯೋಗವನ್ನು ಒದಗಿಸಲು ಉತ್ತಮ ಅವಕಾಶವನ್ನು ನೀಡುತ್ತದೆ. ಆದರೆ ಒಂದು ಮಾತ್ರ ಖಂಡಿತವಾಗಿ ಇರಬೇಕು. ಏನೆಂದರೆ, ಆ ಶ್ರಮಿಕರಿಗೆ, ಸಾಕಷ್ಟು ಮಟ್ಟಿನ ರೀತಿಯಲ್ಲಿ ಬದುಕಲು ಸಾಧ್ಯವಾಗುವಷ್ಟು ವೇತನ ನೀಡಬೇಕು. ಹಾಗೂ ಅವರು ತಮ್ಮದೇ ಆದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಲು ಸಾಕಷ್ಟು ವಿರಾಮ ಒದಗಿಸಬೇಕು. ಇದರಿಂದ ಇಡೀ ದೇಶದ ಅಭಿವೃದ್ಧಿ ಆಗುವುದು ಖಂಡಿತ.

ಯೋಜನೆಮಾಡಲು ಆರಂಭಿಸುವಾಗ ಒಂದು ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲ ಸಮೃದ್ಧವಾಗಿದೆ. ಇದು ಒಂದು ಹೊರೆ ಆಗದೆ, ಆಸ್ತಿ ಆಗುವ ರೀತಿಯಲ್ಲಿ ನಾವು ಯೋಜನೆ ಮಾಡಬೇಕು. ಬಂಡವಾಳ ಹೇರಳವಾಗಿದ್ದು, ಶ್ರಮಶಕ್ತಿ ಕಡಿಮೆ ಇರುವಂಥ ದೇಶಗಳಲ್ಲಿ ಮಾತ್ರ ಶ್ರಮ ಉಳಿಸುವ ವಿಧಾನಗಳು ಸೂಕ್ತ. ನಮ್ಮ ದೇಶಕ್ಕೆ ಸೂಕ್ತವಾದುದು, ಹೆಚ್ಚು ಮಾನವ ಶ್ರಮವನ್ನು ಬಳಸಿಕೊಳ್ಳುವ ಹಾಗೂ ಕಡಿಮೆ ಬಂಡವಾಳ ಕೇಳುವಂಥ ಉತ್ಪಾದನಾ ವಿಧಾನಗಳು. ಈಗ ನಾವು ಆರಂಭಿಸಿರುವಂತೆ, ಪಾಶ್ಚಿಮಾತ್ಯ ದೇಶಗಳನ್ನು ಅನುಸರಿಸತೊಡಗಿ, ರಾಶಿರಾಶಿ ಲಾಭ ಸಂಪಾದಿಸಲು ಮಾನವ ಶ್ರಮ ಉಳಿಸುವ ವಿಧಾನಗಳನ್ನು ಅನುಸರಿಸಿದರೆ, ಅದು ಶ್ರಮಿಕರನ್ನು ಎತ್ತಂಗಡಿ ಮಾಡುತ್ತದೆ, ಬಡತನವನ್ನು ಹೆಚ್ಚಿಸುತ್ತದೆ. ಶ್ರಮ ಉಳಿತಾಯ ವಿಧಾನಗಳನ್ನೂ ಮುಂದುವರಿದ ತಾಂತ್ರಿಕ ವಿಧಾನಗಳನ್ನೂ ಅನುಸರಿಸಬಾರದು ಎಂದು ಕುಮಾರಪ್ಪ ಸಲಹೆಮಾಡಿದರು, ಏಕೆಂದರೆ, ಅದರಿಂದ ಲಾಭವೇನೊ ರಾಶಿ ಬೀಳುತ್ತದೆ, ಆದರೆ ಜೊತೆಗೇ ನಿರುದ್ಯೋಗವೂ ಬಡತನವೂ ಹೆಚ್ಚುತ್ತವೆ. ಇದು ಬಡವ ಬಲ್ಲಿದರ ನಡುವೆ ದ್ವೇಷವನ್ನು ಉಂಟುಮಾಡುತ್ತದೆ. ಅದರ ಪರಿಣಾಮ ಹಿಂಸೆ ಯುದ್ಧ. ಕೇಂದ್ರೀಕೃತ ಉತ್ಪಾದನಾ ವಿಧಾನದಲ್ಲಿ, ಬೆಲೆಯನ್ನು ನಿರ್ಧರಿಸುವುದು ಲಾಭವೇ ವಿನಾ ವೇತನವಲ್ಲ, ಬಂಡವಾಳಗಾರನಿಗೆ ಬೇಕಾದುದು ಗರಿಷ್ಠ ಲಾಭ, ಕನಿಷ್ಠ ವೇತನ, ಇದು ಕಾರ್ಮಿಕ ವಿರೋಧಿ ಧೋರಣೆ.

ಇನ್ನೂ ಒಂದು ಮುಖ್ಯ ಅಂಶವಿದೆ, ಕೃಷಿಯನ್ನು ಒಂದು ಕೈಗಾರಿಕೋದ್ಯಮ ಎಂದು ಭಾವಿಸಬಾರದು. ಬೆಲೆ ಚೌಕಟ್ಟಿಗೆ ಒಳಪಡಿಸಬಾರದು. ಅಲ್ಲದೆ ಕೃಷಿ ಉತ್ಪನ್ನಗಳನ್ನೆಲ್ಲ ಸ್ಥಳೀಯವಾಗಿ ವಿತರಿಸಬೇಕು ಅಥವಾ ಮಾರಬೇಕು. ಹೆಚ್ಚುವರಿಯಾದುದು ಮಾತ್ರ ದೂರದ ಮಾರುಕಟ್ಟೆಗಳಿಗೆ ಹೋಗಬೇಕು. ಅಂತಾರಾಷ್ಟ್ರೀಯ ವ್ಯಾಪಾರ ಏನಿದ್ದರೂ ಆಂತರಿಕ ಬಳಕೆಗೆ ಅನಗತ್ಯವಾದ ಹೆಚ್ಚುವರಿ ಉತ್ಪನ್ನಗಳಲ್ಲಿ ಮಾತ್ರ ಇರಬೇಕು.

ನಾವು ಜಾಗತಿಕ ಸ್ಪರ್ಧೆಯಿಂದ ದೂರಸರಿದು, ರಾಷ್ಟ್ರೀಯ ನೀತಿಯ ಮೇಲೆ ನಮ್ಮ ಗಮನಹರಿಸಬೇಕು. ನಮ್ಮ ಜನಕೋಟಿಯ ಮೂಲಭೂತ ಅಗತ್ಯಗಳನ್ನು ಪೂರೈಸುವುದೇ ನಮ್ಮ ಆದ್ಯತೆ ಆಗಬೇಕು. ನಾವು ಶಾಂತಿಯಿಂದ ಬಾಳಬೇಕಾದರೆ ಇದು ಅಗತ್ಯ. ಕುಮಾರಪ್ಪನವರ ಪ್ರಕಾರ ಇದು ವಿತರಣಾ ನ್ಯಾಯ. ಅವರು ಹೇಳಿದರು, "ನಗರ ಪ್ರದೇಶಗಳಲ್ಲಿ ದಿಢೀರನೆ ಮೇಲೇಳುತ್ತಿರುವ ಹೊಸ ಕಟ್ಟಡಗಳ ತೋರಿಕೆಯ

ಅಭಿವೃದ್ಧಿಯನ್ನು ನೋಡಿ, ಕೆಲವು ಉದ್ಯಮಗಳನ್ನು ನಡೆಸಲು ಬಂಡವಾಳ ಶೇಖರಿಸುವುದನ್ನು ನೋಡಿ ಅಥವಾ ಪೇಟೆ ಜನರ ಭೋಗಜೀವನ ನೋಡಿ ನಾವು ಕುರುಡಾಗಬಾರದು. ಭಾರತ ಇರುವುದು ಹಳ್ಳಿಗಳಲ್ಲಿ.

ಅಭಿವೃದ್ಧಿ ಇಲ್ಲವೇ ಬಡತನಕ್ಕೆ ಸಾಕ್ಷಿಯನ್ನು ಅರಸಬೇಕಾದುದು ಹಳ್ಳಿಯಲ್ಲಿ ಮಾತ್ರ."

ಇದೇ ಸ್ವದೇಶಿಯ ಅರ್ಥ

ಕೊಳ್ಳುವಾತನ ಕರ್ತವ್ಯ :

"ಬಹುಮಟ್ಟಿಗೆ ಕೊಳ್ಳುವಾತನ ನಿಗಾ ಇರುವುದು ಆದಷ್ಟು ಮಟ್ಟಿಗೆ ಹಾಗೂ ಆದಷ್ಟು ಅಗ್ಗವಾಗಿ ತನ್ನ ಅಗತ್ಯ ಪೂರೈಸಿಕೊಳ್ಳುವುದರಲ್ಲಿ." ಆದರೆ ಕೊಳ್ಳುವಾತ ತನ್ನ ವ್ಯವಹಾರದ ಪೂರ್ಣ ಪರಿಣಾಮಗಳನ್ನು ಪರಿಗಣಿಸಬೇಕು, ಕೊಳ್ಳುವಾಗ ಕೆಳಕಾಣಿಸಿರುವ ಅಂಶಗಳನ್ನು ಯೋಚಿಸಬೇಕು.

1) ಪದಾರ್ಥ ಎಲ್ಲಿಂದ ಬಂದುದು ?
2) ಅವನ್ನು ತಯಾರಿಸಿದವರು ಯಾರು ?
3) ಯಾವ ವಸ್ತುಗಳಿಂದ ?
4) ಕಾರ್ಮಿಕರು ಎಂಥ ಸ್ಥಿತಿಯಲ್ಲಿ ಇದ್ದಾರೆ, ಕೆಲಸ ಮಾಡುತ್ತಾರೆ ?
5) ಅಖೈರು ಬೆಲೆಯ ಎಷ್ಟುಭಾಗ ಅವರಿಗೆ ಕೂಲಿಯಾಗಿ ಸಿಗುತ್ತದೆ ?
6) ಉಳಿದ ಹಣದ ಹಂಚಿಕೆ ಹೇಗೆ ?
7) ಪದಾರ್ಥ ಹೇಗೆ ತಯಾರಾಗುತ್ತದೆ ?
8) ಉದ್ಯಮ ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಹೇಗೆ ಜೋಡಣೆ ಆಗುತ್ತದೆ ?
9) ಇತರ ರಾಷ್ಟ್ರಗಳೊಂದಿಗೆ ಅದರ ಸಂಬಂಧವೇನು ?

ಕೊಳ್ಳುಗನ ದೃಷ್ಟಿಯಲ್ಲಿ ಇದು ಅತಿ ಎನಿಸಬಹುದು. ಆದರೆ ಈ ದಾರಿ ಹಿಡಿದಾಗ ಮಾತ್ರವೇ ಆತ ಆದರ್ಶ ಕೊಳ್ಳುಗ ಆಗಬಹುದು. ಆದ್ದರಿಂದಲೇ, ಅತಿ ಕೇಂದ್ರೀಕೃತ ಉತ್ಪಾದನೆ ಯುದ್ಧಕ್ಕೆ, ಖೂನಿಗೂ ದಾರಿ ಎಂದು ಕುಮಾರಪ್ಪ ಎಚ್ಚರಿಕೆ ನೀಡುತ್ತಾರೆ. ಅತ್ಯಂತ ಅಭಿವೃದ್ಧಿ ಪಡೆದಿರುವ ರಾಷ್ಟ್ರಗಳಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆಯ ದೆಸೆಯಿಂದ, ಹೆಚ್ಚುವರಿ ಉತ್ಪಾದನೆಯೆ ಸಮಸ್ಯೆಯಾಗಿದೆ. ಅವರು ತಮ್ಮ ಯಂತ್ರಗಳನ್ನು ಓಡಿಸುತ್ತಿರಬೇಕಾದರೆ ಈ ಹೆಚ್ಚುವರಿಯನ್ನು ಹೇಗಾದರೂ ವಿಲೇವಾರಿಮಾಡಬೇಕು. ಅಂಥ ದೇಶಗಳು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳನ್ನು ಗುಲಾಮರನ್ನಾಗಿಸಿಕೊಳ್ಳಲು ಹಿಂಸಾ ವಿಧಾನಗಳನ್ನು ಅನುಸರಿಸುತ್ತವೆ. ಇದರಿಂದ ಯುದ್ಧಗಳೇ ಘಟಿಸಬಹುದು.

ಅಂತೆಯೇ ಮೇಲುಪಂಕ್ತಿಯನ್ನು ಹಾಕಿಕೊಡಲೆಂದು, ಕುಮಾರಪ್ಪನವರು ವ್ಯರ್ಥವಾದ ಪದಾರ್ಥಗಳನ್ನೇ ಮತ್ತೆ ಬಳಸಿ, ಮಗನಚೂಲಾ, ಮಗನದೀಪ, ಕೈಯಿಂದ ಮಾಡಿದ ಕಾಗದ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಿದರು.

ಶ್ರೀ ವಿ. ಪದ್ಮನಾಭನ್ ಒಬ್ಬ ಪ್ರಾಮಾಣಿಕ ಪ್ರಸಿದ್ಧ ರಚನಾತ್ಮಕ ಕಾರ್ಯಕರ್ತ. ಅವರು ಕುಮಾರಪ್ಪನವರ ಬಗ್ಗೆ ಬರೆಯುತ್ತಾರೆ, "ಕುಮಾರಪ್ಪನವರ ವ್ಯಕ್ತಿತ್ವವನ್ನು ಪೂರ್ಣವಾಗಿ ಅರಿತುಕೊಳ್ಳಬೇಕಾದರೆ, ಅವರ ಬರೆಹಗಳನ್ನು ಆಳವಾಗಿ

ಅಧ್ಯಯನಮಾಡಬೇಕು, ಅವರು ಈ ದೇಶದಲ್ಲಿ ಇದ್ದ ಮಹಾನ್ ವ್ಯಕ್ತಿ. ತಮ್ಮ ಬೀಜರೂಪದ ಹಾಗೂ ಉತ್ಪಾದಕ ಚಿಂತನೆಗಳನ್ನು ಯಥಾರ್ಥವಾಗಿ ವ್ಯಕ್ತಪಡಿಸುತ್ತಿದ್ದರು. ತಮ್ಮ ಹಳೆಯ ಸಂಗಡಿಗರೇ ನಡೆಸುವ ಸರ್ಕಾರವಾಗಲಿ ಅಥವಾ ರಚನಾತ್ಮಕ ಕಾರ್ಯದಲ್ಲಿ ಜೊತೆಗಾರರಾಗಿದ್ದವರೇ ನಡೆಸುತ್ತಿರಲಿ ಅವರು ಯಾವುದೇ ದಾಕ್ಷಿಣ್ಯವಿಲ್ಲದೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದರು. ಈ ಆಶ್ಚರ್ಯಕರ ವ್ಯಕ್ತಿ ಗಾಂಧೀಜಿಯ ವಿಚಾರಗಳಿಗೆ ರೂಪುಕೊಟ್ಟರು ಮಾತ್ರವಲ್ಲ, ತಾವೇ ಮಾನವ ಸಮಾಜದ ದೌರ್ಬಲ್ಯಗಳನ್ನು ಹಾಗೂ ವೈಫಲ್ಯಗಳನ್ನು ಬಯಲಿಗೆ ಎಳೆಯುತ್ತಿದ್ದರು".

ಕುಮಾರಪ್ಪ ಹದಿನಾರಾಣೆ ಗಾಂಧೀವಿಚಾರವಾದಿ, ಗಾಂಧೀಜಿಯವರ ಸತ್ಯಾಗ್ರಹ ಚಳುವಳಿಯ ಬಿರುಸಿನ ನಡುವೆಯೂ, ಅವರು ಸಮಾಜದ ಅಭಿವೃದ್ಧಿಯ ಸಾಧಕಬಾಧಕಗಳ ಬಗ್ಗೆ ಗಮನವಿಟ್ಟಿರುತ್ತಿದ್ದರು. ಪಾಶ್ಚಿಮಾತ್ಯ ಮಾದರಿಯ ಸಮಾಜ ಮತ್ತು ಅದರಲ್ಲಿ ಅಂತರ್ಗತವಾಗಿದ್ದ ಬಡಜನರ ಶೋಷಣೆಗಳ ಬಗ್ಗೆ ಅವರಿಗೆ ವಿಶೇಷವಾದ ಅಂತರ್ದೃಷ್ಟಿ ಇತ್ತು. ಅದಕ್ಕೆ ಪರ್ಯಾಯವನ್ನು ಯೋಚಿಸುತ್ತಿದ್ದರು. ದೇಶದ ಭವಿಷ್ಯವೇನು, ಮುಂದೆ ಕೈಗೊಳ್ಳಬೇಕಾದ ಕ್ರಮವೇನು ಎಂಬ ಬಗ್ಗೆ ಗಾಂಧೀಜಿಯ ಚಿಂತನೆ, ಕನಸುಗಳಲ್ಲಿ ಅವರೂ ಭಾಗಿಗಳಾಗಿದ್ದರು. ಕೆಲಸದಲ್ಲಿ ಅವರದು ತುಂಬ ಕಟ್ಟುನಿಟ್ಟು, ಕ್ರಮಬದ್ಧತೆ ತತ್ವಗಳಲ್ಲಿ ತೀರ ವ್ಯಾವಹಾರಿಕ. ಬಡಜನರಿಗೆ ಸಾಮಾಜಿಕ ಆರ್ಥಿಕ ನ್ಯಾಯವನ್ನು ಒದಗಿಸಬೇಕಾದಲ್ಲಿ ಹಾಗೂ ಜನಸ್ತೋಮಕ್ಕೆ ಉದ್ಯೋಗ ಒದಗಿಸಬೇಕಾದಲ್ಲಿ ವಿಕೇಂದ್ರೀಕೃತ ಸಾಮಾಜಿಕ ಆರ್ಥಿಕ ವ್ಯವಸ್ಥೆಯೊಂದೇ ದಾರಿ ಎಂಬ ಬಗ್ಗೆ ಅವರಿಗೆ ಅಚಲ ನಿಷ್ಠೆ.

ಕುಮಾರಪ್ಪನವರು ಅರ್ಥಚಿಂತನೆಗೆ ಒಂದು ಹೊಸ ದಿಸೆಯನ್ನೇ ಕೊಟ್ಟರು, ಅದನ್ನು ತುಂಬಾ ವಾಸ್ತವಿಕವಾಗಿಸಿದರು. ಗ್ರಾಮೀಣ ಭಾರತದಲ್ಲಿ ಸಿಗುವ ಶ್ರಮಶಕ್ತಿಯ ಪೂರ್ಣ ಬಳಕೆಯೇ ಅವರ ಪ್ರಮುಖ ಕಾಳಜಿ. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ, ಹಳ್ಳಿಯ ಜನಕ್ಕೆ ಲಾಭದಾಯಕ ಉದ್ಯೋಗ ಒದಗಿಸಿದಾಗ, ನಗರ ಪ್ರದೇಶಗಳ ಮೇಲಿನ ಒತ್ತಡ ಕಡಿಮೆ ಆಗುವುದೆಂದು ಅವರು ಮನಗಂಡಿದ್ದರು. ಅಲ್ಲದೆ ಪರಿಸರ ಸಂರಕ್ಷಣೆ ಬಗ್ಗೆ ಅವರಿಗೆ ವಿಶೇಷ ಆಸಕ್ತಿ. ಮಾನವರಿಗೂ ಅವರ ಸುತ್ತಲ ನಿಸರ್ಗಕ್ಕೂ ನಡುವೆ ಸಾಮರಸ್ಯವನ್ನು ಅವರು ಪ್ರತಿಪಾದಿಸುತ್ತಿದ್ದರು. ಮಾನವನ ಪಾತ್ರ ನಿಸರ್ಗವನ್ನು ಶೋಷಿಸುವುದಿಲ್ಲ, ಶ್ರೀಮಂತಗೊಳಿಸುವುದು ಎಂದು ವಾದಿಸುತ್ತಿದ್ದರು. ಧಾರಕಶಕ್ತಿಯುಳ್ಳ ಅಭಿವೃದ್ಧಿಯ ಬಗ್ಗೆ ಯೋಚಿಸುತ್ತಿದ್ದರು. ಜಗತ್ತನ್ನು ಹೆಚ್ಚು ವಾಸಯೋಗ್ಯವಾಗಿಸಲು ಪರ್ಯಾಯ ಉಪಾಯಗಳನ್ನು ಅನ್ವೇಷಿಸುವವರೆಲ್ಲರಿಗೂ, ಅವರ ಜೀವನ ಮತ್ತು ಕಾರ್ಯ ಹಿಂದು ದಾರಿದೀಪ.

ಶಾಶ್ವತ ಅರ್ಥಶಾಸ್ತ್ರ

ಶಾಂತಿ ಮತ್ತು ಶಾಶ್ವತತೆ ಸತ್ಯ ಅಹಿಂಸೆಗಳ ಚಿಗುರುಗಳು. ಗಾಂಧೀ ಅರ್ಥಶಾಸ್ತ್ರಕ್ಕೆ ಇವೇ ಆಧಾರ ಸೂತ್ರಗಳು. ಅವನ್ನೇ ಕುಮಾರಪ್ಪ ಪೂರ್ಣವಾಗಿ ಪ್ರತಿಪಾದಿಸಿದ್ದು, ಈ ತತ್ವವನ್ನು ಕೇವಲ ಪ್ರಮೇಯವಾಗಿ ಸೀಮಿತಗೊಳಿಸಿದರೆ ನಾವು ನಮ್ಮ ಕರ್ತವ್ಯ ಮಾಡಿದಂತಾಗುವುದಿಲ್ಲ. ಅದನ್ನು ಆಚರಣೆಗೆ ತರಲು ಯತ್ನಿಸಬೇಕು.

ಅರ್ಥಶಾಸ್ತ್ರ ಎಂದರೇನು ?

ಜೀವಿಗಳು ತಮ್ಮ ಅಗತ್ಯಗಳನ್ನು ಹೇಗೆ ಪೂರೈಸಿಕೊಳ್ಳುತ್ತವೆ ಎಂಬುದರ ಶಾಸ್ತ್ರವೇ ಅರ್ಥಶಾಸ್ತ್ರ. ಅವು ಯಾವುದೇ ವಿಧಾನ ಅನುಸರಿಸಲಿ, ಜೊತೆಯ ಜೀವಿಗಳೊಂದಿಗೆ ಸಹಕಾರ ಅಥವಾ ಸಂಘರ್ಷ ಇದ್ದೇ ಇರುತ್ತದೆ. ಯಾವ ದಾರಿ ಹಿಡಿಯಬೇಕು ? ಸಹಕಾರದ್ದೋ ಅಥವಾ ಸಂಘರ್ಷದ್ದೊ ? ನಾವು ನಮ್ಮ ಸಹಚರರೊಂದಿಗೆ ಸಹಕಾರದಿಂದ ಅಂದರೆ ಯಾರನ್ನೂ ನೋಯಿಸದೆ ಮತ್ತು ಸಾಧ್ಯವಾದಲ್ಲಿ ಇತರರಿಗೆ ಸಹಾಯಮಾಡಿ ನಮ್ಮ ಅಗತ್ಯಗಳನ್ನು ಪೂರೈಸಿಕೊಂಡಲ್ಲಿ ಮಾತ್ರ ಶಾಶ್ವತ ಆರ್ಥಿಕತೆ ಸಾಧ್ಯ. ನಮ್ಮ ಆರ್ಥಿಕ ಕಾರ್ಯ ಕೇವಲ ಹಣ ಮಾಡುವುದಕ್ಕೆ ಅಥವಾ ಸೌಕರ್ಯ ಸಂಪಾದನೆಗೆ ಮಾತ್ರ ಇರಬಾರದು, ನಾವು ಪೂರ್ಣ ಲಾಭ ಪಡೆಯುವುದಾದರೂ, ಇತರರನ್ನು ಗಾಸಿಮಾಡಬಾರದು, ನಮ್ಮ ಆರ್ಥಿಕ ಚಟುವಟಿಕೆ ನಿಸರ್ಗದೊಂದಿಗೆ ಸಾಮರಸ್ಯ, ಜೋಡಣೆ ಮತ್ತು ಸಹಕಾರದಿಂದಿರಬೇಕು.

ಬದುಕು ಮುಂದೆ ಸಾಗಲು ಇದೊಂದೇ ದಾರಿ, ಉದಾಹರಣೆಗೆ ನಮ್ಮ ಕೃಷಿಕಾರ್ಯವನ್ನು ತೆಗೆದುಕೊಳ್ಳಿ. ಅದು ಅತ್ಯಂತ ಸಹಜ ಕ್ರಿಯೆ. ಬಲಿತ ಬೀಜ ಗಿಡದಿಂದ ಬಿದ್ದು ನೆಲದಲ್ಲಿ ಹುದುಗಿಹೋಗುತ್ತದೆ. ಅದು ಮೊಳೆತು, ನೆಲದಲ್ಲಿ ಬೇರುಬಿಡುತ್ತದೆ. ನೀರು ಸೂರ್ಯನ ಬೆಳಕುಗಳ ನೆರವಿನಿಂದ ಭೂಮಿಯಿಂದ ಪೋಷಣೆಯನ್ನು ಹೀರಿಕೊಳ್ಳುತ್ತದೆ. ಹಾಗೆ ಬೆಳೆದು ಬೇರು ಎಲೆಗಳನ್ನು ಬಿಟ್ಟು ಗಿಡವಾಗುತ್ತದೆ, ಗಾಳಿ ಸೂರ್ಯನಿಂದ ಪೋಷಣೆ ಪಡೆದುಕೊಳ್ಳುತ್ತದೆ. ಎಲೆಗಳು ನೆಲಕ್ಕೆ ಉದುರಿ ಕೊಳೆತು, ಕಾಯಿಗಿಡ ಹೀರಿಕೊಂಡು ಬೆಳೆದಿದ್ದ ವಸ್ತುಗಳನ್ನು ತಾನೂ ಹೊರಚೆಲ್ಲುತ್ತದೆ. ಈ ನಿಸರ್ಗವ್ಯಾಪಾರ ತಲೆಮಾರಿನಿಂದ ತಲೆಮಾರಿಗೆ ಮುಂದುವರಿಯುತ್ತದೆ. ಅದೇ ರೀತಿ ಜೇನುನೊಣ ತನ್ನ ಪೋಷಣೆಗಾಗಿ, ಗಿಡಗಳಿಂದ ಜೇನನ್ನು ಪರಾಗವನ್ನು ಹೀರಿಕೊಳ್ಳುತ್ತದೆ. ಆದರೆ ಈ ಕಾರ್ಯದಲ್ಲಿ ಅದು ಹೂವನ್ನು ಫಲವಂತಗೊಳಿಸುತ್ತದೆ. ಆದರಿಂದ ಕಾಳುಗಳು ಉತ್ಪತ್ತಿಯಾಗುತ್ತವೆ. ಇದು ತಲೆಮಾರುಗಳಲ್ಲಿ ಮುಂದುವರಿಯುತ್ತದೆ. ನಡುವೆ ಏನಾದರೂ ತಡೆ ಬರುವವರೆಗೂ ಇದು ಸಾಗುತ್ತದೆ. ಇದು ನಿಸರ್ಗದ ಶಾಶ್ವತ ಜೀವಚಕ್ರ. ಒಂದು ರೀತಿಯಲ್ಲಿ ಇದೇ ಶಾಶ್ವತ ಅರ್ಥಶಾಸ್ತ್ರ. ಈ ಚಕ್ರ ಎಲ್ಲಿಯಾದರೂ ಕಡಿದು ಹೋದಲ್ಲಿ ವಿನಾಶ, ನಷ್ಟ ಸಂಭವಿಸುತ್ತವೆ. ನಮಗೆ ತಿಳಿದಂತೆ, ನಾವು ನಿಸರ್ಗಕ್ಕೆ ಎದುರಾಗಿ ಹೋದಾಗ, ಅದು ಉಗ್ರವಾಗುತ್ತದೆ, ವಿನಾಶಕಾರಿ ಆಗುತ್ತದೆ. ಆದ್ದರಿಂದ ನಮ್ಮ ಹಿತಕ್ಕಾಗಿಯೆ ನಾವು ನಿಸರ್ಗದೊಂದಿಗೆ ಸಹಕರಿಸಬೇಕು. ಜೀವಚಕ್ರ ಉಳಿದಿರುವಂತೆ ನೋಡಿಕೊಳ್ಳಬೇಕು.

ನಮಗೆ ಚೆನ್ನಾಗಿ ಅರ್ಥವಾಗಲೆಂದು, ಕುಮಾರಪ್ಪನವರು ಆರ್ಥಿಕ ಚಟುವಟಿಕೆಯನ್ನು ಐದು ಬಗೆಗಳಾಗಿ ವಿಂಗಡಿಸಿದ್ದಾರೆ.

1) ***ಪರಾವಲಂಬಿ ಅರ್ಥಶಾಸ್ತ್ರ :*** ಹುಲಿಯ ಉದಾಹರಣೆ ಕೊಡುತ್ತಾರೆ, ಹುಲಿ ಇತರ ಪ್ರಾಣಿಗಳನ್ನು ತಿಂದು ಬದುಕುತ್ತದೆ.

2) ***ದರೋಡೆ ಅರ್ಥಶಾಸ್ತ್ರ :*** ಕೋತಿ ಮರದ ಹಣ್ಣು ತಿಂದು ಬದುಕುತ್ತದೆ. ಅದನ್ನು ಬೆಳೆಯಲು ತಾನು ಏನೂ ಮಾಡಿರುವುದಿಲ್ಲ, ಆದರೆ ಇಲ್ಲಿ ಹಿಂಸೆ ಅಥವಾ ನಾಶ ಇಲ್ಲ.

3) ***ಉದ್ಯಮದ ಅರ್ಥಶಾಸ್ತ್ರ***

ಮರದ ಹಣ್ಣು ತಿನ್ನುತ್ತ ಹಕ್ಕಿಗಳು ತಮ್ಮದೇ ಗೂಡು ಕಟ್ಟುತ್ತವೆ. ಅವು ಉತ್ಪಾದಕವೂ ಹೌದೂ, ಬಳಕೆದಾರರೂ ಹೌದು ಎನ್ನಬಹುದು.

4) ***ಸಂಘಜೀವಿ ಅರ್ಥಶಾಸ್ತ್ರ***

ಜೇನುನೊಣಗಳು ತಮಗಾಗಿ ಅಲ್ಲ, ತಮ್ಮ ಇಡೀ ಗುಂಪಿಗಾಗಿ ಉತ್ಪಾದಿಸುತ್ತವೆ.

5) ***ಸೇವೆಯ ಅರ್ಥಶಾಸ್ತ್ರ***

ಹಕ್ಕಿ ಆಹಾರ ತಂದು ತನ್ನ ಮರಿಗೆ ಕೊಡುತ್ತದೆ. ಬದಲಾಗಿ ಏನನ್ನೂ ನಿರೀಕ್ಷಿಸದು. ತಾಯಿ ತನ್ನ ಮಗುವಿಗೆ ಮಾಡುವ ಹಾಗೆ.

ಐದನೆಯದು ಅಂದರೆ ಸೇವೆಯ ಅರ್ಥಶಾಸ್ತ್ರ ಅಹಿಂಸೆಯದು, ಅದರಲ್ಲಿ ಹಿಂಸೆಗೆ ಅವಕಾಶ ಇಲ್ಲ ಅಥವಾ ಕಡಿಮೆ, ಇದು ಮನುಷ್ಯರಿಗೂ ಅನ್ವಯಿಸುತ್ತದೆ, ಸೇವಾ ಅರ್ಥಶಾಸ್ತ್ರವನ್ನು ನಾವು ಅನುಸರಿಸಿದರೆ ಹಿಂಸೆಗಾಗಲಿ ಯುದ್ಧಕ್ಕಾಗಲಿ ಆಸ್ಪದವೇ ಇರುವುದಿಲ್ಲ.

ಪ್ರಾಣಿಗಳು ಮತ್ತು ಸಸ್ಯಗಳು ನಿಸರ್ಗ ನಿಯಮಗಳಿಗೆ ಕಟ್ಟುನಿಟ್ಟಾಗಿ ಒಳಪಡುತ್ತವೆ. ಆದರೆ ಮಾನವ ಪ್ರಾಣಿಗೆ "ಮುಕ್ತ ವಿಚಾರ" ಎಂಬುದು ಇದೆಯಲ್ಲ, ಈ ಮುಕ್ತ ವಿಚಾರವನ್ನು ನಾವು ಇತ್ಯಾತ್ಮಕವಾಗಿ ಬಳಸಿದರೆ, ನಮಗೂ ಒಳಿತು ಮಾಡಿಕೊಳ್ಳಬಹುದು, ಜೊತೆಯವರಿಗೂ ಮಾಡಬಹುದು ಆದರೆ ನಾಣ್ಯಕ್ಕೆ ಇನ್ನೊಂದು ಮುಖವಿದೆ, ಪೂರಾ ನೇತ್ಯಾತ್ಮಕವಾದುದು. ಈ ಮುಕ್ತ ವಿಚಾರವನ್ನು ತಪ್ಪು ರೀತಿಯಲ್ಲಿ ಬಳಸಿದರೆ, ಸಮಾಜದಲ್ಲಿ ನಿಸರ್ಗದಲ್ಲಿ ತೊಂದರೆ ಉಂಟುಮಾಡುತ್ತೇವೆ. ಕೊನೆಗೆ ನಮ್ಮನ್ನೇ ಹಾಳು ಮಾಡಿಕೊಳ್ಳುತ್ತೇವೆ. ನಾವು ಪ್ರಜ್ಞಾವಂತರಾಗಿದ್ದರೆ, ಸೇವಾ ಅರ್ಥಶಾಸ್ತ್ರವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಶಾಶ್ವತ ಅರ್ಥಶಾಸ್ತ್ರ ನಮ್ಮ ಗುರಿ ಆಗಬೇಕು. ಆಗ ಶಾಂತಿಯ ಆರ್ಥಿಕತೆ ಸಾಧ್ಯ.

ಜೆ.ಸಿ. ಕುಮಾರಪ್ಪ ಈ ರೀತಿ ಆರ್ಥಿಕ ವಿಶ್ಲೇಷಣೆ ಮಾಡಿದ್ದು ಗಾಂಧೀಜಿಗೆ ತುಂಬ ಹಿಡಿಸಿತು. ಅವರು ಬರೆದರು, "ಇವುಗಳ ಮೂಲಕವೇ ನಾವು ಈಗ ನಮ್ಮ ಸುತ್ತ ನೋಡುವ ಕ್ಷಣಭಂಗುರತೆಗೆ ಬದಲಾಗಿ ಶಾಶ್ವತ ಆರ್ಥಿಕತೆಗೆ ಬರುತ್ತೇವೆ ಎಂದು ಗ್ರಾಮೋದ್ಯೋಗ ಡಾಕ್ಟರು (ಪಂಡಿತರು) ತೋರಿಕೊಟ್ಟಿದ್ದಾರೆ. ಆತ್ಮವನ್ನು ದೇಹ ಗೆದ್ದು ಅಡಗಿಸಿಡಬೇಕೆ ಅಥವಾ ಆತ್ಮ ಗೆಲ್ಲಬೇಕೆ, ಬಿದ್ದುಹೋಗುವ ದೇಹದ ಮೂಲಕ ವ್ಯಕ್ತಗೊಳ್ಳಬೇಕೆ ? ಈ ಪ್ರಶ್ನೆಯನ್ನು ಅವರು ಬಿಡಿಸಲೆತ್ನಿಸುತ್ತಾರೆ. ದೇಹದ ಅಲ್ಪ ಅಗತ್ಯಗಳನ್ನು ಆರೋಗ್ಯಕರ ರೀತಿಯಲ್ಲಿ ಪೂರೈಸಿದರೆ, ಆಗ ಅದು ಅವಿನಾಶಿಯಾದ ಆತ್ಮದ ಉದ್ದೇಶ ಸಾಧನೆಗೆ ನೆರವಾಗಲು ಮುಕ್ತವಾಗಿರುತ್ತದೆ. ಇದೇ ಸರಳ ಜೀವನ, ಉನ್ನತ ಚಿಂತನ."

ಶಾಶ್ವತ ಅರ್ಥಶಾಸ್ತ್ರದ ಬಗ್ಗೆ ಕುಮಾರಪ್ಪ ಹೇಳುತ್ತಾರೆ, "ನಿಸರ್ಗದಲ್ಲಿ ಇರುವ ಕೆಲವು ವಸ್ತುಗಳಿಗೆ ಜೀವ ಇದ್ದಂತೆ ತೋರುವುದಿಲ್ಲ. ಅವು ಬೆಳೆಯುವುದಿಲ್ಲ ಅಥವಾ ಹಿಗ್ಗುವುದಿಲ್ಲ, ಆದ್ದರಿಂದ ಅವುಗಳನ್ನು ಬಳಸಿದರೆ ಅವು ತೀರಿಹೋಗುತ್ತವೆ ಅಥವಾ

ಬಳಕೆಯಾಗಿ ಹೋಗುತ್ತವೆ. ಕಲ್ಲಿದ್ದಲು, ಪೆಟ್ರೋಲು, ಕಬ್ಬಿಣ ತಾಮ್ರ ಚಿನ್ನ ಬೆಳ್ಳಿ ಯುರೇನಿಯಂ ಮುಂತಾದ ಅದಿರುಗಳು ಅಥವಾ ಲೋಹಗಳು ಮೊದಲಾದ ವಸ್ತುಗಳ ದಾಸ್ತಾನು ನಿರ್ದಿಷ್ಟ ಪ್ರಮಾಣದಲ್ಲಿ ನಿಸರ್ಗದ ಭಂಡಾರದಲ್ಲಿ ಇದೆ. ಇವುಗಳ ಪ್ರಮಾಣ ಸೀಮಿತ, ಆದ್ದರಿಂದ ಇವು ನಶ್ವರ ಎನ್ನಬಹುದು, ಆದರೆ ನದಿಯಲ್ಲಿ ಸದಾ ಹರಿಯುವ ನೀರಿನ ಪ್ರವಾಹ ಅಥವಾ ಕಾಡಿನಲ್ಲಿ ಸದಾ ಬೆಳೆಯುವ ಮರ ಇವುಗಳನ್ನು ಶಾಶ್ವತ ಎನ್ನಬಹುದು. ಏಕೆಂದರೆ ಮನುಷ್ಯನ ಸೇವೆಯಲ್ಲಿ ಇವುಗಳ ದಾಸ್ತಾನು ತೀರದಂಥದು, ಅಪಾರ. ನಮ್ಮ ಜೀವನ ರೀತಿಯನ್ನು ಶಾಶ್ವತ ಅರ್ಥಶಾಸ್ತ್ರದ ಆಧಾರದಮೇಲೆ ನಿಲ್ಲಿಸಿದರೆ ವಿಶ್ವಶಾಂತಿಗೆ ದಾರಿ ಆಗುತ್ತದೆ. ಆದರೆ ಇನ್ನೊಂದು ಮಾರ್ಗ ಅಸಾಮರಸ್ಯ, ಅನಾರೋಗ್ಯಕರ ಸ್ಪರ್ಧೆ ಹಗೆತನ ಮತ್ತು ವಿಶ್ವಯುದ್ಧಕ್ಕೆ ಕೊಂಡೊಯ್ಯುತ್ತದೆ."

ಜೆ.ಸಿ. ಕುಮಾರಪ್ಪ ಹೆಸರಿಸಿದ ಶಾಶ್ವತ ಅರ್ಥಶಾಸ್ತ್ರವೇ ಇಂದು ಅರ್ಥಶಾಸ್ತ್ರಜ್ಞರು "ಧಾರಕ ಅಭಿವೃದ್ಧಿ" (Sustainable Development) ಎನ್ನುತ್ತಿದಾರಲ್ಲ, ಅದೇ, ಬೇರೆ ಏನೂ ಅಲ್ಲ.

ಆದರೆ ಇಂದು ನಾವು ಸಾಗುತ್ತಿರುವುದು ಕುಮಾರಪ್ಪ ತೋರಿಸಿದ ಧಾರಕ ಆರ್ಥಿಕತೆಗೆ ವಿರುದ್ಧವಾದ ಹಾದಿ. ಶ್ರೀಮಂತವೂ ಮುಂದುವರಿದವೂ ಆದ ದೇಶಗಳು ಇನ್ನಷ್ಟು ಮತ್ತಷ್ಟು ಭೌತಿಕ ಅಭಿವೃದ್ಧಿ ಹೊಂದಲು ಬಯಸುತ್ತವೆ. ಜಗತ್ತಿನ ಸಂಪತ್ತು ಜನರ ನಡುವೆ, ದೇಶಗಳ ನಡುವೆ ನ್ಯಾಯಯುತವಾಗಿ ಹಂಚಿಕೆ ಆಗಿಲ್ಲ. ಕೆಲವು ದೇಶಗಳು ಭೋಗದಲ್ಲಿ ಮುಳುಗಿವೆ. ಕೆಲವೆಡೆ ದಾರಿದ್ರ್ಯ. ಭೂಮಿ ನೀರು ಖನಿಜಗಳು ಗಾಳಿ ಹವಾ ಎಲ್ಲಾ ಸಂಪನ್ಮೂಲಗಳನ್ನು ಶೋಷಿಸಿ, ಬಡವರನ್ನು ಸಂಕಟಕ್ಕೆ ತಳ್ಳುವುದು ಶ್ರೀಮಂತರಿಗೆ ಸಾಧ್ಯ. ಆದರೆ ಭೂಗರ್ಭದ ಇಂಧನ, ಲೋಹಗಳು ಮುಂತಾದ ಸಂಪನ್ಮೂಲಗಳು ಮಿತಪ್ರಮಾಣದಲ್ಲಿವೆ, ಬೇಗ ತೀರಿಹೋಗುತ್ತವೆ. ಇದನ್ನು ನಾವು ಮರೆಯುವಂತಿಲ್ಲ, ಅವುಗಳನ್ನು ಎಷ್ಟೆಷ್ಟು ಬಳಸುತ್ತೇವೆಯೋ ಅಷ್ಟಷ್ಟು ಅವು ಬರಿದಾಗುತ್ತವೆ. ಅವು ಇಲ್ಲದೆ ನಾವು ಎಲ್ಲರೂ ನರಳಬೇಕಾಗುತ್ತದೆ. ಭೂಗರ್ಭ ಇಂಧನಗಳು ಮತ್ತು ಖನಿಜಗಳ ಮೇಲೆ ಆಧಾರಿತವಾದ ಅರ್ಥವ್ಯವಸ್ಥೆಯನ್ನು ಕುಮಾರಪ್ಪ ಬಕೆಟ್ ಆರ್ಥಿಕತೆ ಎಂದರು, ಬಕೆಟ್‌ನಲ್ಲಿರುವ (ಅಥವಾ ಪಾತ್ರೆ) ನೀರನ್ನು ಹಾಲನ್ನೂ ಬಳಸುತ್ತ ಹೋದಂತೆ, ಪಾತ್ರೆ ಬರಿದಾಗುತ್ತದೆ. ಅದಕ್ಕೆ ಬದಲಾಗಿ, ಸೂರ್ಯಶಕ್ತಿ, ವಾಯುಶಕ್ತಿ, ಜಲಶಕ್ತಿ ಮುಂತಾದವನ್ನು ಬಳಸಿದರೆ, ಅವು ಎಂದಿಗೂ ಬರಿದಾಗುವುದಿಲ್ಲ. ಇದನ್ನು 'ನದಿ ಆರ್ಥಿಕತೆ' ಎಂದರು, ತಾವು ಬೋಧಿಸಿದಂತೆ ತಾವೇ ನಡೆದರು. ಅವರದೇ ಗುಡಿಸಲಿನಲ್ಲಿ ಸಂಸ್ಥೆಯಲ್ಲಿ ಸೀಮೆಎಣ್ಣೆ ದೀಪ ಇರುತ್ತಿರಲಿಲ್ಲ. 'ಮಗನ ದೀಪ' ಎಂಬ ಎಣ್ಣೆ ದೀಪಗಳನ್ನು ಬಳಸಲಾಗುತ್ತಿತ್ತು.

ಕುಮಾರಪ್ಪ ಸಲಹೆ ಮಾಡಿದ್ದು "ಶಾಶ್ವತ ಅರ್ಥಶಾಸ್ತ್ರ" ವನ್ನು. ಅವರು ಗಾಂಧೀಜಿಯ ಅಹಿಂಸಾ ತತ್ವಕ್ಕೆ ಬುದ್ಧಿ ಜೀವಿಗಳು ಅರ್ಥ ಮಾಡಿಕೊಳ್ಳುವಂತೆ ಆರ್ಥಿಕ ಚೌಕಟ್ಟನ್ನು ಒದಗಿಸಿದರು. ಶಾಂತಿಯ ಅರ್ಥಶಾಸ್ತ್ರ ಅಥವಾ ಶಾಶ್ವತ ಅರ್ಥಶಾಸ್ತ್ರ ಎಂದರಲ್ಲ, ಅದು ನಿಂತಿರುವುದು ಎರಡು ಮೂಲಭೂತ ಉದ್ದೇಶಗಳ ಮೇಲೆ - ಶೋಷಣೆ ಇಲ್ಲದಿರುವಿಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಧಾರಕತೆ.

ವಿಜ್ಞಾನ ಎಂದರೆ ಏನು ?

ಕುಮಾರಪ್ಪ ವಿಜ್ಞಾನ ತಂತ್ರಜ್ಞಾನಕ್ಕೆ ಎಂದೂ ವಿರೋಧಿ ಅಲ್ಲ, ಏನಿದ್ದರೂ ವಿಜ್ಞಾನ ಇಡೀ ಸಮಾಜದ ಒಳಿತಿಗಾಗಿ ಬಳಕೆಯಾಗಬೇಕು ಎಂದರು. ವಿಜ್ಞಾನದ ಉಪಯೋಗ ಕುರಿತು ಬರೆದರು, "ವಿಜ್ಞಾನ ಮಾನವನ ಸೃಷ್ಟಿ ಅಲ್ಲ. ಪ್ರಕೃತಿ ನಿರ್ದಿಷ್ಟ ರೀತಿಯಲ್ಲಿ. ಬದಲು ಮಾಡಲಾಗದ ನಿಯಮಗಳ ಪ್ರಕಾರ ಕೆಲಸ ಮಾಡುತ್ತದೆ. ಮನುಷ್ಯ ಈ ನಿಯಮಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಒಂದು ಜ್ಞಾನಪದ್ಧತಿಯಾಗಿ ಜೋಡಿಸಿದಾಗ, ಅದನ್ನು ವಿಜ್ಞಾನ ಎನ್ನುತ್ತೇವೆ. ಆದ್ದರಿಂದ ಯಾವುದೇ ಕ್ರಿಯೆಯನ್ನು ವೈಜ್ಞಾನಿಕ ಎನ್ನಬೇಕಾದರೆ, ಅದು ಸರ್ವರೀತಿಯಲ್ಲೂ ಪ್ರಕೃತಿಗೆ ಹೊಂದಿಕೊಂಡಿರಬೇಕು. ಎಲ್ಲಿ ಪ್ರಕೃತಿಯಿಂದ ಭಿನ್ನವಾಗುವೆವೊ, ಅಷ್ಟರ ಮಟ್ಟಿಗೆ ನಾವು ಅವೈಜ್ಞಾನಿಕರಾಗುತ್ತೇವೆ, ಆ ಭಿನ್ನತೆ ಕೊನೆಗೆ ನಮ್ಮ ವಿನಾಶಕ್ಕೆ ಕೊಂಡೊಯ್ಯುತ್ತದೆ." ಮತ್ತೆಯೂ ಹೇಳಿದರು, "ನಮ್ಮ ನೈಸರ್ಗಿಕ ಸಂಪನ್ಮೂಲಗಳು ನಮ್ಮ ಪಿತ್ರಾರ್ಜಿತ ಆಸ್ತಿ. ನಾವು ಆದಷ್ಟು ಮಟ್ಟಿಗೆ ನಮ್ಮ ಸಂಪನ್ಮೂಲಗಳಲ್ಲೆ ಬದುಕಬೇಕು. ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗಳಿಗಾಗಿ ಉಳಿಸಿ ಇಡಬೇಕು". ಗಾಂಧೀಜಿ ಕೂಡ ಹೇಳಿದರು, "ಭೂಮಿತಾಯಿ ಮಾನವನ ಅಗತ್ಯಗಳನ್ನೆಲ್ಲ ಪೂರೈಸಬಲ್ಲಳು, ಆದರೆ ದುರಾಸೆಯನ್ನಲ್ಲ". ಮತ್ತೆಯೂ ಹೇಳಿದರು, "ನಮ್ಮ ನಾಗರಿಕತೆ, ನಮ್ಮ ಸಂಸ್ಕೃತಿ, ನಮ್ಮ ಸ್ವರಾಜ್ಯ ಎಲ್ಲವೂ ನಮ್ಮ ಅಗತ್ಯಗಳನ್ನು ಹೆಚ್ಚಿಸಿಕೊಳ್ಳುವುದರ ಮೇಲೆ, ಭೋಗವಿಲಾಸದ ಮೇಲೆ ಅವಲಂಬಿಸಿಲ್ಲ. ನಮ್ಮ ಅಗತ್ಯಗಳನ್ನು ಮಿತಿಗೊಳಿಸುವುದರ ಮೇಲೆ, ತ್ಯಾಗದ ಮೇಲೆ ನಿಂತಿದೆ".

ಇನ್ನಾದರೂ ನಾವು ಗಾಂಧೀಜಿ ಮತ್ತು ಕುಮಾರಪ್ಪ ಪ್ರತಿಪಾದಿಸಿದ ತತ್ವಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಅನುಸರಿಸಲು ಯತ್ನಿಸಬೇಕು, ಇಲ್ಲವಾದರೆ, ಬ್ರಿಟನ್ನಿನ ಗ್ರೀನ್ ಪಾರ್ಟಿಯ ಸಾರಾ ಪಾರ್ಕಿನ್ ಹೇಳುವಂತೆ, ನಮಗೇ ನಷ್ಟ, ಇಡೀ ಜಗತ್ತಿಗೇ ನಷ್ಟ, ಅವರು ಹೇಳುತ್ತಾರೆ, "ನಮ್ಮ ಮರವಡಿಕೆ, ನಮ್ಮ ಮೌನ, ನಮ್ಮ ಉತ್ಸಾಹ ಹೀನತೆಗಳೇ ನಮ್ಮ ನಿರ್ನಾಮವನ್ನೇ ಸೂಕ್ಷ್ಮವಾಗಿ ರೂಪಿಸುವ ಏಕೈಕ ವಿಧಾನವಾದೀತು. ಎಂಥ ತುಚ್ಛ ಚರಮಗೀತೆ ಆದೀತು ! ವಿನಾಶ ಬರುತ್ತಿರುವುದನ್ನು ನೋಡುತ್ತೇವೆ. ಆದರೆ ಅದನ್ನು ತಡೆಯುವ ಸಂಕಲ್ಪ ಇರುವುದಿಲ್ಲ !"

ಪ್ರಕೃತಿ ಸೃಷ್ಟಿಸಿರುವುದು ಮನುಷ್ಯನನ್ನು ಮಾತ್ರ ಅಲ್ಲ, ಪ್ರಾಣಿ, ಪಕ್ಷಿ ಇತ್ಯಾದಿ ಇನ್ನೂ ಎಷ್ಟೊ ಸೃಷ್ಟಿಗಳಿವೆ. ಅವುಗಳ ಬಗ್ಗೆಯೂ ಸಮಾನ ಪರಿಗಣನೆ ತೋರಬೇಕು. ನಾವು ಬಾಳಿ, ಯಾವ ಮೂಲಗಳಿಂದ ಧಾರಣೆಯನ್ನು ಪಡೆದುಕೊಳ್ಳುವೆವೊ, ಆ ನೆಲ, ಜಲ, ಸೂರ್ಯ, ಗಾಳಿಗಳ ಬಗ್ಗೆಯೂ ಪರಿಗಣನೆ ತೋರಬೇಕಾಗುತ್ತದೆ, ಅವುಗಳನ್ನು ಆರಯ್ಯುಬೇಕಾಗುತ್ತದೆ. ಈ ನಮ್ಮ ಕರ್ತವ್ಯದಲ್ಲಿ ನಾವು ಸೋತಲ್ಲಿ, ಪ್ರಕೃತಿ ಹಿಂಸಾರೂಪದಲ್ಲಿ ಎದಿರೇಟು ಹೊಡೆಯುತ್ತದೆ. ಪರಿಣಾಮ ನೋವು, ರೋಗ, ಸಾವು. ನಮ್ಮ ಸಹಜೀವಿಗಳಿಗೆ ಹಾನಿ ಆದಷ್ಟು ಕಡಿಮೆ ಆಗುವಂತೆ, ಮತ್ತು ಪ್ರಕೃತಿಗೆ ಕನಿಷ್ಠ ತೊಂದರೆ ಆಗುವಂತೆ, ನಾವು ಪ್ರಕೃತಿಯಿಂದ ಆದಷ್ಟು ಹೆಚ್ಚಿನ ಲಾಭ ಪಡೆಯುವುದಕ್ಕಾಗಿ, ನಾವು ಈ ಎಲ್ಲಾ ಅಂಶಗಳನ್ನು ಗಣನೆಗೆ ತಂದುಕೊಂಡು, ನಮ್ಮ ದಾರಿಯನ್ನು

ಆರಿಸಿಕೊಳ್ಳಬೇಕು, ಅಂದರೆ, ನಮ್ಮದೇ ಸರ್ವನಾಶವನ್ನು ನಿವಾರಿಸಬೇಕಾದರೆ, ನಾವು ಮಾನವಜೀವಿಗಳು ಪ್ರಕೃತಿಯೊಂದಿಗೆ ಸಂಪೂರ್ಣ ಸಹಯೋಗದಿಂದ ಸಹಕಾರದಿಂದ ಬದುಕಬೇಕು, ಕೆಲಸಮಾಡಬೇಕು.

ಗಾಂಧೀಜಿ, ಕುಮಾರಪ್ಪ ಬೋಧಿಸಿದ್ದು ಶಾಶ್ವತ ಅರ್ಥಶಾಸ್ತ್ರವನ್ನು. ಆದರೆ ನಾವು ಅನುಸರಿಸುತ್ತಿರುವುದು ವಿನಾಶದ ಅರ್ಥಶಾಸ್ತ್ರವನ್ನು. ಭೂಗರ್ಭದ ಇಂಧನಗಳ ಬಳಕೆ ದಿನೇ,ದಿನೇ, ಹೆಚ್ಚುತ್ತಿದೆ. ಇದರಿಂದ ಭೂಗರ್ಭ ಇಂಧನಗಳು ಮತ್ತಿತರ ಪರಿಮಿತ ಪ್ರಮಾಣದ ಸಂಪನ್ಮೂಲಗಳೂ ಬರಿದಾಗುವುದು ಮಾತ್ರವಲ್ಲ, ಆದರಿಂದ ಇಂಗಾಲದ ಡೈಆಕ್ಸೈಡ್ ಮತ್ತಿತರ ಮಿಥೇನ್ ಅನಿಲಗಳ ಉತ್ಪಾದನೆಯೂ ಹೆಚ್ಚುತ್ತದೆ. ಇಂಗಾಲದ ಡೈ-ಆಕ್ಸೈಡ್ ಬಿಡುಗಡೆಯಾಗುವುದು ಹೆಚ್ಚಿದಂತೆ ವಾತಾವರಣದ ತಾಪಮಾನವೂ ಏರುತ್ತದೆ. ಇದನ್ನು ಜಾಗತಿಕ ಉಷ್ಣೀಕರಣ (Global Warming) ಎನ್ನುತ್ತಾರೆ. ವಿಶ್ವಸಂಸ್ಥೆಯ ಹವಾಮಾನ ತಜ್ಞರ ತಂಡದ ಅಧ್ಯಯನದ ಪ್ರಕಾರ, ಭೂಮಿಯ ತಾಪಮಾನ ನಿರೀಕ್ಷೆಗೂ ಮೀರಿ ಹೆಚ್ಚುತ್ತದೆ. ಇದರ ಪರಿಣಾಮಗಳು ಭೀಕರ. ಹಸಿರು ಪದರದ ಮಂಜು ಹಾಳೆಯ ಕುಸಿತ, ಸಮುದ್ರದ ಅಲೆಗಳಲ್ಲಿ ಏರುಪೇರು ಮುಂತಾಗಿ. ವಿಜ್ಞಾನಿಗಳು ಅಂದಾಜು ಮಾಡುತ್ತಾರೆ, ಇಂಗಾಲದ ಡೈ-ಆಕ್ಸೈಡ್ ಪ್ರಮಾಣದ ಹೆಚ್ಚಳದಿಂದಾಗಿ, 2010ನೆಯ ಇಸವಿ ವೇಳೆಗೆ ವಾತಾವರಣದ ತಾಪ 2 ರಿಂದ 4.5 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಏರಬಹುದು. ಸಮುದ್ರದ ಮಟ್ಟವೂ ಏರಬಹುದು. ಬ್ರಿಟಿಷ್ ಅಂಟಾರ್ಕ್ಟಿಕ್ ಸಮೀಕ್ಷೆಯ ಮುಖ್ಯಸ್ಥ ಮಿಕ್ರಿಸ್ ರ‍್ಯಾಪ್ಲೆ ಎಂಬುವರು ಎಚ್ಚರಿಸುತ್ತಾರೆ, ಪಶ್ಚಿಮ ಅಂಟಾರ್ಕ್ಟಿಕಾ ಮಂಜಿನ ಹಾಳೆ ಶಿಥಿಲಗೊಳ್ಳಲು ಆರಂಭಿಸಬಹುದು, ಅದರಿಂದಾಗಿ ಜಗತ್ತಿನಲ್ಲೆಲ್ಲ ಸಮುದ್ರದ ಮಟ್ಟ ಐದು ಮೀಟರ್‌ನಷ್ಟು ಹೆಚ್ಚಬಹುದು ಎಂದು, ಸಮುದ್ರದ ಮಟ್ಟ 5 ಮೀಟರ್ ಏರಿದರೆ ಏನೇನು ಆದೀತೋ ಊಹೆಗೆ ಬಿಟ್ಟದ್ದು. ಬಹುಪಾಲು ಜನ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾರೆ. ಇದು ಕುಮಾರಪ್ಪ ತೋರಿಸಿದ ದಾರಿಯಲ್ಲಿ ನಡೆಯದುದರ ಫಲ.

ಜಗತ್ತು ಈ ತಪ್ಪನ್ನು ಅರಿತುಕೊಳ್ಳತೊಡಗಿದೆ. ಭೂಗರ್ಭ ಇಂಧನಗಳ ಬಳಕೆಯನ್ನುಕಡಿಮೆ ಮಾಡಲಾರಂಭಿಸಿದೆ. ಆದರಿಂದ ಇಂಗಾಲದ ಡೈಆಕ್ಸೈಡ್ ಬಿಡುಗಡೆಯನ್ನು ನಿಯಂತ್ರಿಸಬಹುದು. ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂರ್ಯಶಕ್ತಿಯ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತಿವೆ. ಅದೇ ರೀತಿ ವಾಯುಶಕ್ತಿ ಉತ್ಪಾದನೆಗೂ ಪ್ರೋತ್ಸಾಹ ದೊರೆಕುತ್ತಿದೆ. ಇತ್ತೀಚೆಗೆ ಪೋರ್ಚುಗಲ್ ದೇಶ, ಯೂರೋಪಿನಲ್ಲಿಯೇ ಒಂದು ಅತ್ಯಂತ ಭಾರಿ ವಾಯುಶಕ್ತಿ ಯೋಜನೆಯನ್ನು ಆರಂಭಿಸಿದೆ. ಇದು 7,50,000ಕ್ಕೂ ಹೆಚ್ಚು ಮನೆಗಳಿಗೆ ಸಾಕಷ್ಟು ವಿದ್ಯುತ್ತನ್ನು ಒದಗಿಸುತ್ತದೆ. ಜಗತ್ತಿನಲ್ಲೆ ಅತಿ ದೊಡ್ಡದಾದ ಸೂರ್ಯಶಕ್ತಿ ಸ್ಥಾವರವನ್ನೂ ಕಟ್ಟಲು ಪೋರ್ಚುಗಲ್ ಒಪ್ಪಿಗೆ ನೀಡಿದೆ. ಡೆನ್‌ಮಾರ್ಕ್ ಮತ್ತು ಸ್ಪೇನ್ ಸಹ ಇದೇ ದಿಸೆಯಲ್ಲಿ ನಡೆಯುತ್ತಿವೆ. ಭೂಗರ್ಭ ಇಂಧನಗಳ ಬಳಕೆಯನ್ನು ತಗ್ಗಿಸುವ ಹಾಗೂ ಇಂಗಾಲದ ಡೈಆಕ್ಸೈಡ್ ಬಿಡುಗಡೆಯನ್ನು ಕಡಿಮೆ ಮಾಡುವ ಜಾಗತಿಕ ಪ್ರಯತ್ನ 'ಕ್ಯೋಟೊ ಒಪ್ಪಂದ' ಎಂಬುದರ ಮೂಲಕ ನಡೆಯಲಿದೆ.

ಈ ಒಪ್ಪಂದ 1997ರಲ್ಲಿ ರೂಪಿತವಾಯಿತು. 120ಕ್ಕೂ ಹೆಚ್ಚು ದೇಶಗಳು ಇದಕ್ಕೆ ಸಹಿ ಹಾಕಿವೆ. ಈ ಒಪ್ಪಂದದ ಗುರಿ, ಇಂಗಾಲದ ಡೈಆಕ್ಸೈಡ್ ಬಿಡುಗಡೆ ಮತ್ತಿತರ ಗ್ರೀನ್ ಹೌಸ್ ಅನಿಲಗಳ ಬಿಡುಗಡೆ ಪ್ರಮಾಣ 1990ರಲ್ಲಿ ಏನಿತ್ತೊ, ಅದನ್ನು 2012 ವೇಳೆಗೆ ಸರಾಸರಿ ಶೇ. 52%ರಷ್ಟು ತಗ್ಗಿಸುವುದು. ಆದರೆ ಕಳವಳದ ವಿಷಯವೆಂದರೆ, ಜಗತ್ತಿನ ಜನಸಂಖ್ಯೆಯಲ್ಲಿ ಶೇ. 4ರಷ್ಟನ್ನು ಪಡೆದಿದ್ದು ಜಗತ್ತಿನ ಇಂಗಾಲದ ಡೈಆಕ್ಸೈಡ್ ಪ್ರಮಾಣದಲ್ಲಿ ಶೇ. 25ರಷ್ಟನ್ನು ಬಿಡುಗಡೆ ಮಾಡುತ್ತಿರುವ ಅಮೆರಿಕಾ ಸಂಯುಕ್ತ ಸಂಸ್ಥಾನ ಈ ಒಪ್ಪಂದಕ್ಕೆ ಸಹಿ ಮಾಡಲು ನಿರಾಕರಿಸಿರುವುದು. ಒಪ್ಪಂದದಿಂದ ತನ್ನ ಅರ್ಥವ್ಯವಸ್ಥೆಗೆ ಹಾನಿ ಎಂಬುದು ಅದರ ವಾದ. ಒಪ್ಪಂದ ಫೆಬ್ರವರಿ 2005 ರಿಂದ ಜಾರಿಗೆ ಬಂದಿದೆ.

ಕುಮಾರಪ್ಪನವರ ಸಮೀಕ್ಷಾ ವರದಿ ಕುರಿತು ಗಾಂಧೀಜಿಯ ಅಭಿಪ್ರಾಯ

ಕುಮಾರಪ್ಪನವರು ಮಧ್ಯಪ್ರದೇಶದ ಆರುನೂರು ಹಳ್ಳಿಗಳಲ್ಲಿ ವಿವರವಾದ ಸಮೀಕ್ಷೆ ನಡೆಸಿ ಒಂದು ವರದಿಯನ್ನು ಪ್ರಕಟಿಸಿದರು, "ಸಮಗ್ರ ಗ್ರಾಮಾಭಿವೃದ್ಧಿ ಯೋಜನೆ". ಅದಕ್ಕೆ ಅವರು ಸ್ಥಳೀಯ ಶಿಕ್ಷಕರು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳ ನೆರವನ್ನು ಬಳಸಿಕೊಂಡರು. ಕುಮಾರಪ್ಪನವರ ನೇತೃತ್ವದ ಸಮೀಕ್ಷಾ ತಂಡ ದಿನಕ್ಕೊಂದರಂತೆ ಹಳ್ಳಿಗಳಲ್ಲಿ ತಂಗುತ್ತಿತ್ತು. ನಿಜಕ್ಕೂ ಅವರು ಹಳ್ಳಿಗರಂತೆಯೆ ಇರುತ್ತಿದ್ದರು. ಹಳ್ಳಿಗರೊಂದಿಗೆ ಸರಳ ಊಟ ಅವರಿಗೂ. ಹಳ್ಳಿಗರ ನಿತ್ಯಜೀವನ, ಗ್ರಾಮ ಕೈಗಾರಿಕೆಗೆ ಇದ್ದ ಅವಕಾಶ, ಹಾಲಿ ಇದ್ದ ಕೈಗಾರಿಕೆಗಳ ಸುಧಾರಣೆ, ಸರ್ಕಾರ ನೀಡಬೇಕಾದ ರಕ್ಷಣೆ, ಹಳ್ಳಿಗರ ತರಬೇತಿ, ಹಳ್ಳಿಗಳು ಕೃಷಿಯನ್ನು ಆಧಾರವಾಗಿ ಇಟ್ಟುಕೊಂಡು ಸ್ವಾವಲಂಬಿ ಆಗುವುದು ಹೇಗೆ, ಹಳ್ಳಿಗರ ಮೂಲಭೂತ ಅಗತ್ಯಗಳ ಪೂರೈಕೆ ಹೇಗೆ-ಇದೆಲ್ಲದರ ಬಗ್ಗೆ ತಂಡ ಮಾಹಿತಿಯನ್ನು ಸಂಗ್ರಹಿಸಿತು. ಸಮೀಕ್ಷಾ ವರದಿಯಲ್ಲಿ ಈ ಎಲ್ಲಾ ಪ್ರಶ್ನೆಗಳಿಗೂ ಪೂರ್ಣವಾಗಿ ಉತ್ತರವಿತ್ತು.

ಈ ವರದಿ 1939ರ ಮೇ ಯಿಂದ ಜುಲೈವರೆಗೆ 'ಹರಿಜನ' ಪತ್ರಿಕೆಯ ಆರು ಸಂಚಿಕೆಗಳಲ್ಲಿ ಪ್ರಕಟವಾಯಿತು. ಗಾಂಧೀಜಿ ಬರೆದರು, "ಇದೊಂದು ಸ್ವೋಪಜ್ಞ ವರದಿ. ಈ ಸಮೀಕ್ಷೆಗೆ ತಗುಲಿದ ಒಟ್ಟು ವೆಚ್ಚ ಕೇವಲ 3000ರೂ. ಅಂದರೆ ಒಂದು ಹಳ್ಳಿಗೆ ಐದೇ ರೂಪಾಯಿ. ಇದು ಅಂದಾಜು ವೆಚ್ಚದ ಹತ್ತರಲ್ಲಿ ಒಂದು ಪಾಲು ಮಾತ್ರ. ಅಷ್ಟು ಚೆನ್ನಾಗಿ ನಿಭಾಯಿಸಿದ್ದಾರೆ ಕುಮಾರಪ್ಪ ಈ ಸಮೀಕ್ಷೆಯಲ್ಲಿ ಇದ್ದವರೆಲ್ಲರೂ ದೇಶದ ಬಡತನದ ಪರಿಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು, ಪ್ರಯಾಣ ವೆಚ್ಚ ಪಡೆಯಲೂ ಬೇಡ ಎಂದರು. ಹಳ್ಳಿಯ ಜನ ಏನು ಆಹಾರವಿತ್ತರೊ ಅದರಲ್ಲೆ ತೃಪ್ತರಾದರು, ಈ ಸಮೀಕ್ಷಾ ವರದಿ ಕೇವಲ ಉಹಾತ್ಮಕವಲ್ಲ, ಪೂರ್ವಯೋಜಿತವೂ ಅಲ್ಲ. ಆರ್ಥಿಕ ಸಿದ್ಧಾಂತದ ಅಧ್ಯಯನಕ್ಕಾಗಿ ತಯಾರಿಸಿದ್ದು ಅಲ್ಲ. ಇದು ರೋಗನಿದಾನದ ಸಮೀಕ್ಷೆ ಎಂದು ಕುಮಾರಪ್ಪ ವಿವರಿಸಿರುವುದು ಪೂರಾ ಸರಿಯಾದುದು. ವಿನಾಶದ ಹೊಸ್ತಿಲಿನಲ್ಲಿರುವ ಬಡಜನರನ್ನು ಉಳಿಸಲೆಂದೇ ಈ ಸಮೀಕ್ಷೆಯನ್ನು ನಡೆಸಿದ್ದು ಎನ್ನುವುದೇ ಸರಿ, ವಿವರವಾದ ಅಂಕಿಅಂಶ ಇಲ್ಲದೆ ಹಳ್ಳಿಗರ ಬಡತನವನ್ನು ಸಾಬೀತುಮಾಡುವುದು ಕಷ್ಟ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದರು, ಆಗ ಕುಮಾರಪ್ಪ ಆ ಅರ್ಥಶಾಸ್ತ್ರಜ್ಞರನ್ನು ನೇರವಾಗಿ ಹಳ್ಳಿಗಳಿಗೆ ಕರೆದೊಯ್ದು, ಮುರುಕಲು

ಗುಡಿಸಲು, ಬಿದ್ದ ಮನೆಗಳು, ಕೆಲಸವಿಲ್ಲದೆ ತಲೆಯ ಮೇಲೆ ಕೈಇಟ್ಟು ಕುಳಿತ ಜನ, ರೈತರ ಹಸಿದ ಕುಟುಂಬಗಳನ್ನೆಲ್ಲ ತೋರಿಸಿದರು, ಇದೆಲ್ಲವನ್ನೂ ನೋಡಿದ ಮೇಲೆ ಅರ್ಥಶಾಸ್ತ್ರಜ್ಞರಿಗೆ ಹಳ್ಳಿಗಳ ಬಡತನ ಮಂದಟ್ಟಾಯಿತು, ಈ ಎರಡು ಸಂಪುಟಗಳ ವರದಿಯಲ್ಲಿರುವುದನ್ನು ಯಾವ ಸರ್ಕಾರವೂ ನಿರ್ಲಕ್ಷಿಸುವಂತಿಲ್ಲ, ಸಮೀಕ್ಷಾ ವರದಿಯಲ್ಲಿ ಮಾಡಿರುವ ಶಿಫಾರಸುಗಳನ್ನು ಅಖಿಲ ಭಾರತ ಚರಖಾ ಸಂಘ ಹಾಗೂ ಗ್ರಾಮೋದ್ಯೋಗ ಸಂಘದ ನೆರವಿನಿಂದ ಕೂಡಲೇ ಆಚರಣೆಗೆ ತರಬೇಕು". ಗಾಂಧೀಜಿ ಮತ್ತೊಮ್ಮೆ ಬರೆದರು, "ಹಳ್ಳಿಗನ ಸರಾಸರಿ ವಾರ್ಷಿಕ ಆದಾಯ ಕೇವಲ 12 ರೂ. ಎನ್ನುತ್ತದೆ ವರದಿ. ಪುಸ್ತಕಗಳಲ್ಲಿ ಕೊಟ್ಟಿರುವ ಅಂಕಿಅಂಶಗಳ ಆಧಾರದ ಮೇಲೆ ಸರ್ಕಾರಿ ಅಧಿಕಾರಿಗಳು ಲೆಕ್ಕ ಮಾಡಿರುವುದು ಸರಾಸರಿ 65 ರಿಂದ 80 ರೂ. ಇದು ಸರಿಯಲ್ಲ, ಶ್ರೀಮಂತರು ಹಾಗೂ ಹೆಚ್ಚು ಸಂಬಳದ ಸರ್ಕಾರಿ ಅಧಿಕಾರಿಗಳ ಸಂಪಾದನೆಯನ್ನೂ ಸೇರಿಸಿಕೊಂಡು ಸರಾಸರಿ ಸಂಪಾದನೆಯನ್ನು ಲೆಕ್ಕಮಾಡುವುದು ಸರಿಯಲ್ಲ. ಕುಮಾರಪ್ಪನವರು ಸಾಕ್ಷಾತ್ತಾಗಿ ಹಳ್ಳಿಗರ ಸ್ಥಿತಿಗತಿಯನ್ನು ಅಧ್ಯಯನಮಾಡಿಯೇ ನಿಜವಾದ ಅಂಕಿಗಳನ್ನು ಲೆಕ್ಕಮಾಡಿದ್ದಾರೆ".

ಯೋಜನೆ ಮತ್ತು ಅನುಷ್ಠಾನ ಎರಡೂ ಇರುವುದು ಪಾಶ್ಚಿಮಾತ್ಯ ಶಿಕ್ಷಣ ಪಡೆದ ಬುದ್ಧಿಜೀವಿಗಳ ಕೈಯಲ್ಲಿ. ಅಂದಮೇಲೆ ಸರ್ಕಾರ ಗಾಂಧೀಜಿ ತೋರಿಸಿದ ಸರ್ವೋದಯ ಪಥದಲ್ಲಿ ಸಾಗುವುದೆಂದು ನಿರೀಕ್ಷಿಸುವುದು ಕಠಿನ. ಇದು ಕುಮಾರಪ್ಪನವರಿಗೆ ಖಂಡಿತ ಎನಿಸಿತ್ತು. ಆದ್ದರಿಂದ ಶಿಕ್ಷಣ ವಿಧಾನದ ಸಂಪೂರ್ಣ ಬದಲಾವಣೆಯೂ ಅಗತ್ಯ. ಶಿಕ್ಷಣ ಪರಿಶ್ರಮ ಮತ್ತು ಕೆಲಸ ಕೇಂದ್ರಿತವಾಗಿರಬೇಕು, ಅದೇ ಮೂಲ ಶಿಕ್ಷಣ.

ಆಗಿನ ಮೈಸೂರು ದಿವಾನರು ಸರ್ ಮಿರ್ಜಾ ಇಸ್ಮೇಲ್ ಕುಮಾರಪ್ಪನವರ "ಸಮಗ್ರ ಗ್ರಾಮಾಭಿವೃದ್ಧಿ ವರದಿ"ಯನ್ನು ಓದಿ ತುಂಬಾ ಪ್ರಭಾವಿತರಾದರು, "ನೀವು ಭಾರತೀಯ ಪರಿಸ್ಥಿತಿಯನ್ನು ತುಂಬ ಚೆನ್ನಾಗಿ ವಿಶ್ಲೇಷಿಸಿದ್ದೀರಿ, ಗ್ರಾಮ ಕೈಗಾರಿಕೆಗೆ ಹಾಗೂ ಜನರಿಗೆ ಉದ್ಯೋಗ ಮತ್ತು ಸಂಪಾದನೆ ಒದಗಿಸಲು ತುಂಬ ಸರಳವಾದ ವ್ಯಾವಹಾರಿಕವಾದ ಮಾರ್ಗವನ್ನು ತೋರಿಸಿಕೊಟ್ಟಿದ್ದೀರಿ" ಎಂದು ಕುಮಾರಪ್ಪನವರಿಗೆ ಬರೆದರು.

ಗ್ರಾಮೀಣ ಭಾರತಕ್ಕೆ ಬೇಕಾದುದು ಆರ್ಥಿಕ ವಿಕೇಂದ್ರಿಕರಣ

ಗ್ರಾಮ ಭಾರತವೇ ನಿಜವಾದ ಭಾರತ. ಏಕೆಂದರೆ ಭಾರತದ ಜನರಲ್ಲಿ ಶೇ. 70 ಮಂದಿ ಇರುವುದು ಗ್ರಾಮಗಳಲ್ಲೆ. ಆದ್ದರಿಂದ ಭಾರತಕ್ಕೆ ಸೂಕ್ತವಾದ ಅರ್ಥವ್ಯವಸ್ಥೆ ಎಂದರೆ ಗ್ರಾಮೀಣ ಭಾರತಕ್ಕೆ ಅನುಕೂಲವಾದುದೇ, ಗ್ರಾಮೀಣ ಜನರಿಗೆ ಸೂಕ್ತವಾದುದು ವಿಕೇಂದ್ರೀಕೃತ ಕೈಗಾರಿಕೆಗಳು. ಏಕೆಂದರೆ ಅವುಗಳಲ್ಲಿ ಸಂಪತ್ತಿನ ಹಂಚಿಕೆಯ ಸಹಜ ಪ್ರವೃತ್ತಿ ಇದೆ. ಸಂಪತ್ತಿನ ಬಹುಪಾಲು ಸೃಷ್ಟಿ ಆಗುವುದು ಗ್ರಾಮದಲ್ಲೆ. ಕೆಲವೇ ಜನರಲ್ಲಿ ಸಂಪತ್ತು ಶೇಖರವಾಗುವುದು ನಮ್ಮ ದೇಶಕ್ಕೆ ಸೂಕ್ತವಲ್ಲ, ಕೇಂದ್ರೀಕೃತ ಹಾಗೂ ಭಾರಿ ಕೈಗಾರಿಕೆಗಳಿಂದ ಸಂಪತ್ತು ಉದ್ಯಮಿಗಳಲ್ಲಿ ಅಥವಾ ಬಂಡವಾಳಗಾರರಲ್ಲಿ ಸಂಗ್ರಹವಾಗುತ್ತದೆ. ಭಾರಿ ಪ್ರಮಾಣದ ಜನಸಂಖ್ಯೆಯಲ್ಲಿ ಸಂಪತ್ತಿನ ವಿತರಣೆ ಕೈಗಾರಿಕೆಗಳ ವಿಕೇಂದ್ರೀಕರಣದಿಂದ ಮಾತ್ರ ಸಾಧ್ಯ.

ಉತ್ಪಾದನೆ ಮತ್ತು ವಿತರಣೆ ಒಂದೇ ನಾಣ್ಯದ ಎರಡು ಮುಖಗಳಾಗಬೇಕು. ಇದನ್ನು ಸಹಜವಾಗಿ ಸಾಧಿಸಬೇಕಾದರೆ, ಉತ್ಪಾದನಾ ವಿಧಾನದಲ್ಲಿಯೇ ವಿತರಣೆಯೂ ಒಳಗೊಂಡಿರುವಂತೆ ಉತ್ಪಾದನೆಯನ್ನು ಸಂಘಟಿಸಬೇಕಾಗುತ್ತದೆ. ಉತ್ಪನ್ನದ ವಿತರಣೆಗೆ ಇನ್ನೂ ಒಂದು ವಿಧಾನವಿದೆ, ಕೇಂದ್ರೀಕೃತವಾಗಿ ಉತ್ಪಾದಿಸಿದ ನಂತರ ಸರ್ಕಾರಿ ಪ್ರತಿನಿಧಿಗಳ ಮೂಲಕ ವಿತರಿಸುವುದು. ಇದು ರಷ್ಯಾ ಅನುಸರಿಸಿದ ವಿಧಾನ, ಇಲ್ಲಿ ಅಧಿಕಾರದ ಕೇಂದ್ರೀಕರಣವಿದೆ. ಅದು ಅಪಾಯಕಾರಿ. ಅಧಿಕಾರದ ಸಂಗ್ರಹಣೆ ಮತ್ತು ಸಂಪತ್ತಿನ ಸಂಗ್ರಹಣೆ ಎರಡೂ ಕೆಡುಕುಗಳೇ, ಅಮೆರಿಕಾ, ಇಂಗ್ಲೆಂಡ್ ಮತ್ತು ಹಲವಾರು ಯುರೋಪಿಯನ್ ದೇಶಗಳಲ್ಲಿ ಸಂಪತ್ತಿನ ಕೇಂದ್ರೀಕರಣವಿದೆ. ಭಾರತಕ್ಕೆ ಬೇಕಾಗಿರುವುದು. ವಿತರಣೆಯ ವಿಧಾನವೂ ಜೋಡಿಕೆಯಾದ ಉತ್ಪಾದನಾ ವಿಧಾನ. ದಿನಬಳಕೆ ವಸ್ತುಗಳ ಬಗ್ಗೆಯಂತೂ ಇದು ಹೆಚ್ಚು ಅಗತ್ಯ.

ಭಾರತ ದೊಡ್ಡ ದೇಶ, ಇದೊಂದು ಉಪಖಂಡ, ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯ ದೇಶಗಳಲ್ಲಿ ಒಂದು, ಹಿಂದೆಯೆ ಹೇಳಿದಂತೆ, ನಮ್ಮ ಬಹುಪಾಲು ಜನ ಇರುವುದು ಹಳ್ಳಿಗಾಡಿನಲ್ಲಿ, ಆದರೆ ಈ ಅಪಾರ ಜನಸ್ತೋಮ ಬಡತನ, ಅಜ್ಞಾನ, ಅಪೌಷ್ಟಿಕತೆ, ಕೊಳಕು, ಅನಾರೋಗ್ಯಗಳಲ್ಲಿ ಮುಳುಗಿದೆ. ಗಾಂಧೀಜಿಯ ಮಾತುಗಳಲ್ಲಿ, ಭಾರತದ ಜನಕೋಟಿಯ ಹಳ್ಳಿಮನೆಗಳಲ್ಲಿ ಬಾಳಿನ ಹಣತೆ ಇನ್ನೇನು ಆರುವುದರಲ್ಲಿದೆ.

ನಮ್ಮ ದೇಶದ ಶೇ. 30 ಜನ ಇರುವ ನಗರಗಳಲ್ಲೆ ಎಲ್ಲಾ ಅಭಿವೃದ್ಧಿ ಯತ್ನಗಳೂ ಕೇಂದ್ರೀಕೃತಗೊಂಡಿವೆ. ಬ್ರಿಟಿಷ್ ಪ್ರಭುತ್ವದಲ್ಲಿ ಇದು ವಿಶೇಷವಾಗಿ ಇತ್ತು. ಇದು ಗ್ರಾಮ ಅರ್ಥವ್ಯವಸ್ಥೆಯನ್ನು ಮುರಿದೇ ಹಾಕಿತ್ತು. ಗಾಂಧೀಜಿ ಇದನ್ನು ಕಂಡುಕೊಂಡರು. ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ರಚನಾತ್ಮಕ ಕಾರ್ಯಕ್ರಮಗಳನ್ನು ಆರಂಭಿಸಿದರು. ಹಳ್ಳಿ ಹೋದರೆ ಭಾರತವೇ ಹೋದಂತೆ ಮತ್ತು ಹಳ್ಳಿ ಇನ್ನೇನು ಹೋಗುತ್ತಿದೆ ಎನ್ನುವುದು ಅವರ ದೃಷ್ಟಿ. ಅದರ ಪರಿಣಾಮವೇ ಗ್ರಾಮಪುನರುತ್ಥಾನ ಚಳುವಳಿಯ ಆರಂಭ.

ಹಳ್ಳಿಗಳಲ್ಲಿ ಚರಖಾಗಳ ಬಳಕೆಯಿಂದ ಈ ಕಾರ್ಯಕ್ರಮ ಆರಂಭವಾಯಿತು. ಇದು ಸ್ವದೇಶಿ ಚಳುವಳಿಗೆ ಹೊಸ ಅರ್ಥವನ್ನು ಕೊಟ್ಟಿತು. ರಚನಾತ್ಮಕ ಕಾರ್ಯಕ್ರಮವನ್ನು ಬಹುದೂರ ಒಯ್ದಿತು.

ಅಖಿಲ ಭಾರತ ಗ್ರಾಮೋದ್ಯೋಗ ಸಂಘ

1934ರಲ್ಲಿ ಅಖಿಲ ಭಾರತ ಕಾಂಗ್ರೆಸ್‌ನ 48ನೆಯ ಅಧಿವೇಶನ ಮುಂಬೈನಲ್ಲಿ ನಡೆಯಿತು. ಆಗ, ಕಾಂಗ್ರೆಸ್ ಚಟುವಟಿಕೆಯ ಅಂಗವಾಗಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘವನ್ನು ರಚಿಸಬೇಕೆಂದು ನಿರ್ಣಯವಾಯಿತು. ಗಾಂಧೀಜಿಯ ಮಾರ್ಗದರ್ಶನದಲ್ಲಿ, ಜೆ.ಸಿ. ಕುಮಾರಪ್ಪನವರು ಈ ಸಂಘವನ್ನು ರೂಪಿಸಬೇಕೆಂದು ಅಧಿಕಾರ ನೀಡಲಾಯಿತು. 'ಹರಿಜನ' ವಾರಪತ್ರಿಕೆಯಲ್ಲಿ ಗಾಂಧೀಜಿ ಗ್ರಾಮೋದ್ಯೋಗ ಸಂಘದ ಕಾರ್ಯಕ್ರಮವನ್ನು ವಿವರಿಸಿದರು. ಅವರ ಮಾರ್ಗದರ್ಶನದಲ್ಲಿ ಕುಮಾರಪ್ಪ ಕಾರ್ಯಾರಂಭ ಮಾಡಿದರು. ವರ್ಧಾದ ಮಗನವಾಡಿಯಲ್ಲಿ ಜಮನಾಲಾಲ ಬಜಾಜರು ದಾನವಿತ್ತ ಜಮೀನಿನಲ್ಲಿ ಸಂಘ ಆರಂಭವಾಯಿತು. ಸಂಘದ ಕಾರ್ಯಕ್ರಮಗಳನ್ನು ಯೋಜಿಸಿ ನಡೆಸುವುದು ಕುಮಾರಪ್ಪನವರ ಕೆಲಸ. ಸಂಘದ ಮೊದಲನೆಯ ಕಾರ್ಯದರ್ಶಿಯಾಗಿ ಅನಂತರ

ಅಧ್ಯಕ್ಷರಾಗಿ ಅವರು, ನಶಿಸಿ ಹೋಗುತ್ತಿದ್ದ ಗ್ರಾಮೋದ್ಯೋಗಗಳಿಗೆ ನವಚೈತನ್ಯ ನೀಡಿದರು. ಗಾಂಧೀಜಿಯ ಆರ್ಥಿಕ ತತ್ವಗಳಿಗೆ, ವೈಜ್ಞಾನಿಕ ತಳಹದಿಯನ್ನು ಒದಗಿಸಿದರು.

ಕುಮಾರಪ್ಪ ಸಂಘದ ಚಟುವಟಿಕೆಗಳನ್ನು ಐದು ಭಾಗಗಳಾಗಿ ವಿಂಗಡಿಸಿದರು. ಸಂಶೋಧನೆ, ಉತ್ಪಾದನೆ, ತರಬೇತಿ, ಸಂಘಟನೆ ಹಾಗೂ ಪ್ರಚಾರ, ಒಂದು ಪ್ರಯೋಗ ಶಾಲೆ ಹಾಗೂ ಮಗನ ಸಂಗ್ರಹಾಲಯ ಎಂಬ ಒಂದು ವಸ್ತು ಸಂಗ್ರಹಾಲಯಗಳನ್ನು ತೆರೆಯಲಾಯಿತು. ಆಗ ಕೈಗೆತ್ತಿಕೊಂಡ ಗ್ರಾಮೋದ್ಯೋಗಗಳೆಂದರೆ, ಆಹಾರ ಸಂಸ್ಕರಣೆ, ಎಣ್ಣೆಗಾಣ, ಜೇನುಸಾಕಣೆ, ಸಾಬೂನು, ಬಣ್ಣಗಳು, ಕೈಕಾಗದ, ಗ್ರಾಮ ಕುಂಬಾರಿಕೆ, ಮಗನ ದೀಪ ಮತ್ತು ತಾಳೆರಸದಿಂದ ಬೆಲ್ಲ ತಯಾರಿಕೆ. ಗ್ರಾಮೋದ್ಯೋಗ ತರಬೇತಿ ಕೇಂದ್ರವೂ ಆರಂಭವಾಯಿತು. 1950, ಗ್ರಾಮೋದ್ಯೋಗ ನಯಿತಾಲೀಂ ಎಂಬ ಅಭ್ಯಾಸ ಕ್ರಮವನ್ನು ಆರಂಭಿಸಲಾಯಿತು. ಪ್ರಸ್ತುತ ಲೇಖಕ ಮತ್ತು ಶ್ರೀ ಎನ್. ಪ್ರಭಾಕರ ಮತ್ತು ಶ್ರೀ ಟಿ.ಜಿ. ಸತ್ಯನಾರಾಯಣ ವೊದಲಾದ ಇತರರು ಈ ಅಭ್ಯಾಸ ತರಗತಿಗಳಲ್ಲಿದ್ದರು.

ಗುರುವಿನಂತೆಯೆ ಕುಮಾರಪ್ಪನವರ ಬದುಕು ತುಂಬ ಸರಳ, 'ದರಿದ್ರನಾರಾಯಣ'ನೊಂದಿಗೆ ಒಂದಾಗಿ ಹೋಗಿದ್ದರು, ಆ ಜನ್ಮ ಬ್ರಹ್ಮಚಾರಿ ಆಗಿದ್ದರು. ಸಗಣಿ ಸಾರಿಸಿದ ಬಿದಿರು ದೆಬ್ಬೆಗಳಿಂದಲೇ ಅವರ ಮನೆ ಕಟ್ಟಿತ್ತು. ಒಮ್ಮೆ ಮುಂದೆ ಅಮೆರಿಕದಲ್ಲಿ ಬ್ರಿಟಿಷ್ ರಾಯಭಾರಿ ಆದ ಲಾರ್ಡ್ ಲೋಥಿಯನ್, ಚರ್ಚೆಗಾಗಿ ಕುಮಾರಪ್ಪನವರಲ್ಲಿಗೆ ಬಂದಿದ್ದರು. ಗುಡಿಸಲಿನ ಒಳಕ್ಕೆ ಹೋಗಲು ಅವರು ನೆಲಕ್ಕೆ ಬಾಗಬೇಕಾಯಿತು, ಒಳಗೆ ಗುಡಿಸಲಿನ ಮಧ್ಯದಲ್ಲೂ ನೆಟ್ಟಗೆ ನಿಲ್ಲಲು ಆಗಲಿಲ್ಲ, ಆ ಅವಸ್ಥೆಯಲ್ಲಿ ಅವರೆಂದರು, "ಎಲ್ಲರೂ ನನ್ನನ್ನು ಶ್ರೀಮಂತ ಎನ್ನುತ್ತಾರೆ. ನಾನೇನೊ ಕಟ್ಟಾ ಶಾಂತಿವಾದಿ, ಆದರೆ ನಾನಿರುವುದು ಭ್ರಮಾಲೋಕದಲ್ಲಿ ಎಂದು ನೀವು ತೋರಿಕೊಟ್ಟದೀರಿ". ಕುಮಾರಪ್ಪ ಇದ್ದುದು ಈ ಸರಳ ಗುಡಿಸಲಿನಲ್ಲಿ. ಅವರ ಊಟ ವಿದ್ಯಾಲಯದ ವಿದ್ಯಾರ್ಥಿ ನಿಲಯದಲ್ಲಿ.

ಅವರು ಕೊನೆಯವರೆಗೂ ತೊಡುತ್ತಿದ್ದುದು 'ಧೋತಿಜಾಮ'. ಅವರೇ ರೂಪಿಸಿದ್ದು, ಸರಳತೆ, ಮಿತಬಳಕೆಯ ಕಲ್ಪನೆಗೆ ಸಂಕೇತ. ಪೈಜಾಮದ ಹಾಗೆಯೇ. ಅದಕ್ಕೆ ಎರಡು ಮೀಟರ್ ಬಟ್ಟೆ ಸಾಕು. ಆದರೆ ನೋಡುವುದಕ್ಕೆ ನಾಲ್ಕು ಮೀಟರಿನ ಪಂಚೆಯ ಹಾಗೆ ಆರಾಮವಾಗಿ ಇರುತ್ತಿತ್ತು.

ತಮ್ಮ ಜೀವಮಾನದಲ್ಲಿ, ಅವರು ಹೆಚ್ಚು ಕಡಿಮೆ ಹೋಗಿಯೆ ಬಿಟ್ಟಿದ್ದ ಎಷ್ಟೊ ಗ್ರಾಮೋದ್ಯೋಗಗಳಿಗೆ ನವಜೀವನವಿತ್ತರು. ಅವುಗಳ ಆರ್ಥಿಕ ಸಕ್ಷಮತೆಯನ್ನು ಸಾಬೀತುಮಾಡಲು, ಹಲವು ಹೊಸ ನಮೂನೆಗಳನ್ನು ರೂಪಿಸಿದರು, ಉತ್ಪಾದಕತೆಯನ್ನು ಉತ್ತಮಗೊಳಿಸಲು ಮಧ್ಯಮ ನಮೂನೆಯ ತಂತ್ರಜ್ಞತೆಯನ್ನು (Technology) ರೂಢಿಗೆ ತಂದರು. ದೇಶದ ಎಲ್ಲಾ ಕಡೆಗಳ ಸಾವಿರಾರು ಯುವಜನರು ಈ ಕೈಗಾರಿಕೆಗಳಲ್ಲಿ ತರಬೇತಿ ಪಡೆದರು. ಗ್ರಾಮ ಕೈಗಾರಿಕೆಗಳ ಪ್ರಚಾರ ಅಭಿವೃದ್ಧಿಗಳ ಬಗ್ಗೆ ರಾಜ್ಯ ಸರ್ಕಾರಗಳಿಗೂ ರಚನಾತ್ಮಕ ಸಂಸ್ಥೆಗಳಿಗೂ ಸಲಹೆ ನೀಡಲು ಅವರು ದೇಶದಾದ್ಯಂತ ಪ್ರವಾಸ ಮಾಡಿದರು.

ಗ್ರಾಮ ಕೈಗಾರಿಕೆ ಯಾವುದು ?

ಗ್ರಾಮೋದ್ಯೋಗಗಳಿಗೆ ಕುಮಾರಪ್ಪ ನೀಡಿದ ವಿತರಣೆ ಹೀಗಿತ್ತು -

1) ಹಳ್ಳಿಗಳಲ್ಲಿ ಹಾಗೂ ಹಳ್ಳಿಗಳಿಗಾಗಿ ಬೇಕಾದ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳು.

2) ಸ್ಥಳೀಯ ಕಚ್ಚಾಪದಾರ್ಥಗಳನ್ನು ಬಳಸಿಕೊಳ್ಳುವುವು ಹಾಗೂ ಹಳ್ಳಿಗರಿಗೆ ಸುಲಭವಾಗಿ ಎಟುಕುವಂತಹ ಸರಳ ವಿಧಾನಗಳನ್ನು ಬಳಸಿಕೊಳ್ಳುವುವು.

3) ಹಳ್ಳಿಗರ ಹಣಕಾಸಿನ ಸಾಮರ್ಥ್ಯಕ್ಕೆ ಸಿಗಬಹುದಾದಂಥ ಸಲಕರಣೆಗಳನ್ನು ಉಪಕರಣಗಳನ್ನು ಮಾತ್ರ ಬಳಸುವುವು.

4) ಹಳ್ಳಿಗಳಲ್ಲಿ ಸುಲಭವಾಗಿ ದೊರೆಕುವ ಮಾನವ ಅಥವಾ ಪ್ರಾಣಿ ಬಲವನ್ನು ಮಾತ್ರ ಬಳಸುವುವು.

5) ಸ್ಥಳೀಯ ಹಾಗೂ ಸುತ್ತಮುತ್ತಲ ಜನತೆಯ ಅಗತ್ಯಗಳನ್ನು ಪೂರೈಸುವುವು.

6) ದೇಹಶ್ರಮವನ್ನು ದೂರಮಾಡದಂಥವು.

7) ಹಳ್ಳಿಯ ಪ್ರಮುಖ ಕಾರ್ಯವಾದ ಕೃಷಿಗೆ ಹೊಂದಿಕೊಂಡ ಕೈಗಾರಿಕೆಗಳು.

ಗ್ರಾಮ ಕೈಗಾರಿಕೆಗಳ ಅನುಕೂಲಗಳು

ಮೇಲಿನ ಚೆಕ್ಕುಬಂದಿಗಳಿಗೆ ಒಳಪಟ್ಟ ವಿಕೇಂದ್ರೀಕೃತ ಕೈಗಾರಿಕೆಯಲ್ಲಿ ಕುಶಲಕರ್ಮಿಯೆ ಉತ್ಪಾದನಾ ಉಪಕರಣಗಳ ಒಡೆಯನಾಗಿರುತ್ತಾನೆ, ಆತ ಸ್ವಯಂಉದ್ಯೋಗಿಯೆ ವಿನಾ ಕೂಲಿಯಾಳಲ್ಲ, ಒಡೆಯ-ಆಳು ಸಂಬಂಧಕ್ಕೆ ಎಡೆಯೆ ಇರುವುದಿಲ್ಲ, ಅಂದರೆ ಶೋಷಣೆಗೆ ಅವಕಾಶವಿಲ್ಲ. ಕುಶಲಕರ್ಮಿಗೆ ತನ್ನ ಕೌಶಲ್ಯವನ್ನು ವ್ಯಕ್ತಿತ್ವವನ್ನು ಬೆಳಸಿಕೊಳ್ಳಲು ಪೂರಾ ಅವಕಾಶವಿರುತ್ತದೆ. ಆತನ ಉತ್ಪಾದನೆಯ ಪ್ರಮಾಣ ಕಡಿಮೆ. ಆದ್ದರಿಂದ ಆತ ತನ್ನ ಗ್ರಾಹಕರೊಂದಿಗೆ ವೈಯಕ್ತಿಕ ಸಂಬಂಧ ಕುದುರಿಸಿ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಯಾವುದೇ ವಿಶಾಲವಾದ ಮಾರುಕಟ್ಟೆ ವ್ಯವಸ್ಥೆಯಾಗಲಿ, ಅದರ ಜೊತೆಗೆ ಬರುವ ದಳ್ಳಾಳಿ, ಕಲಬೆರಕೆ ಇತ್ಯಾದಿ ಪಿಡುಗಾಗಲಿ ಇಲ್ಲಿ ಇರುವುದಿಲ್ಲ.

ಕೆಲಸಗಾರರ ವಲಸೆಗೆ ತಡೆ

ಬಹುಪಾಲು ಗ್ರಾಮ ಕೈಗಾರಿಕೆಗಳು ಕೃಷಿಗೆ ಸಂಬಂಧಿಸಿದವು. ಬಳಸುವ ಕಚ್ಚಾಪದಾರ್ಥಗಳು ಕೃಷಿ ಉತ್ಪನ್ನಗಳು, ಕುಶಲಕರ್ಮಿ ಬಹುಮಟ್ಟಿಗೆ ರೈತನೇ. ಈ ಕೈಗಾರಿಕೆಗಳು ಆತನ ಕೃಷಿ ಸಂಪಾದನೆಗೆ ಪೂರಕ. ಇದು ಆತ ಹೊಟ್ಟೆಪಾಡಿಗಾಗಿ ಪೇಟೆಗೆ ಹೋಗುವುದನ್ನು ತಡೆಯುತ್ತದೆ. ಆದರೆ ಕೈಗಾರಿಕಾ ಕ್ರಾಂತಿ ಮತ್ತು ವಸಾಹತು ಪ್ರಭುತ್ವಗಳು ಗ್ರಾಮ ಕೈಗಾರಿಕೆಗಳಿಗೆ ಭಾರಿ ಹಾನಿ ಮಾಡಿವೆ. ಅವುಗಳಿಂದಲೇ ಗ್ರಾಮ ಕೃಷಿಕರು, ಕುಶಲಕರ್ಮಿಗಳು ಸುತ್ತಮುತ್ತಲ ಊರು ನಗರಗಳಿಗೆ ವಲಸೆ ಹೋಗುವಿಕೆ ಆರಂಭವಾದದ್ದು. ಗ್ರಾಮ ಸಮುದಾಯದಲ್ಲಿ ಗೌರವಾನ್ವಿತ ಸದಸ್ಯನಾಗಿದ್ದ ಹಳ್ಳಿಯ ಕುಶಲಕರ್ಮಿ ಕೂಲಿಗಾಗಿ ದುಡಿಯುವ ಆಳಾದ, ಆ ಕಾಂಕ್ರಿಟು ಕಾಡಿನಲ್ಲಿ ತನ್ನತನವನ್ನು

ಕಳೆದುಕೊಂಡ. ಸಣ್ಣ ಗ್ರಾಮಸಮುದಾಯದಲ್ಲಿ ದೊಡ್ಡಮನುಷ್ಯನಾಗಿದ್ದಾತ, ದೊಡ್ಡ ನಗರದಲ್ಲಿ ಸಣ್ಣ ವ್ಯಕ್ತಿಯಾದ, ಇದು ಅಪೇಕ್ಷಣೀಯ ಪರಿವರ್ತನೆಯೇನೂ ಅಲ್ಲ, ಇಂಥ ಸಂದರ್ಭಗಳನ್ನು ತಪ್ಪಿಸುವ ಸಾಮರ್ಥ್ಯ ಗ್ರಾಮ ಕೈಗಾರಿಕೆಗಳಿಗೆ ಇದೆ. ಗ್ರಾಮ ಕೈಗಾರಿಕೆಯನ್ನು ತನ್ನ ಗುಡಿಸಲಿನಲ್ಲೆ ಮಾಡಬಹುದು, ತನ್ನ ಕೌಶಲ್ಯ ತನ್ನ ಸಂಪನ್ಮೂಲದಿಂದಲೇ ನಡೆಸಬಹುದು, ಅದೇ ನಿಜವಾದ ಸ್ವದೇಶಿ. 'ದೂರದ ಉತ್ಪನ್ನಗಳನ್ನು ಸೇವೆಗಳನ್ನು ಹೊರತುಪಡಿಸಿ, ನಮ್ಮ ಹತ್ತಿರದಲ್ಲೆ ಸಿಗುವುದನ್ನು ಬಳಸಿಕೊಳ್ಳುವ ಸಂಯಮಭಾವನೆಯೆ ಸ್ವದೇಶಿ' ಎಂದು ವರ್ಣಿಸಲಾಗಿದೆ. ಅದೇ ನಿಜವಾದ 'ಗ್ರಾಮಸ್ವರಾಜ್ಯ'.

ಗ್ರಾಮಕೈಗಾರಿಕೆಗಳು ನಮ್ಮ ನಾಡಿನ ಆರ್ಥಿಕ ಆರೋಗ್ಯಕ್ಕೆ ಅಷ್ಟೊಂದು ಅಗತ್ಯ ಎನ್ನುವುದಾದರೆ ಅವು ಆರ್ಥಿಕವಾಗಿ ನಿಲ್ಲಬಲ್ಲ ಘಟಕಗಳಾಗಿ ಇರಬಲ್ಲವೆ, ಇಂದಿನ ಮಟ್ಟದ ತಂತ್ರಜ್ಞಾನವುಳ್ಳ ಮುಂದುವರಿದ ಭಾರಿ ಕೈಗಾರಿಕೆಗಳ ಪೈಪೋಟಿಯನ್ನು ತಡೆದುಕೊಳ್ಳಬಲ್ಲವೇ ಎಂಬುದನ್ನು ನಾವು ಪರಿಶೀಲಿಸಬೇಕು. ಭಾರಿ ಕೈಗಾರಿಕೆಗಳ ಆಕ್ರಮಣವನ್ನು ಗ್ರಾಮಕೈಗಾರಿಕೆಗಳು ತಾಳಿಕೊಳ್ಳಲಾರವು ಎಂದು ಕಳೆದ ಕೆಲವು ದಶಕಗಳ ನಮ್ಮ ಆರ್ಥಿಕ ಇತಿಹಾಸ ತೋರಿಸುತ್ತದೆ. ಇದಕ್ಕೆ ಕಾರಣ ಅವುಗಳ ಕೆಳಮಟ್ಟದ ತಾಂತ್ರಿಕತೆ, ಆದ್ದರಿಂದ ಅವು ಉಳಿಯಬೇಕಾದರೆ ತಾಂತ್ರಿಕ ಬೆಂಬಲ ಅಗತ್ಯ.

ವಿಜ್ಞಾನ-ತಂತ್ರಜ್ಞಾನ ಪ್ರತಿಯೊಬ್ಬ ಮಾನವನ ಹಕ್ಕು, ಆದರೆ ಗ್ರಾಮ ಕೈಗಾರಿಕೆಗಳ ಕುಶಲಕರ್ಮಿಗಳು ತಂತ್ರಜ್ಞಾನದ ಫಲದಿಂದ ವಂಚಿತರು. ಕುಮಾರಪ್ಪನವರ ಪ್ರಕಾರ, ವಿಜ್ಞಾನ ದುರುಪಯೋಗವಾಗುತ್ತಿದೆ, ಅದರ ಉಪಯೋಗವನ್ನು ಜನಸಮೂಹಕ್ಕೆ ನಿರಾಕರಿಸಲಾಗುತ್ತಿದೆ. ವಿಜ್ಞಾನ ಚಿನ್ನದ ಚಮಚದಿಂದ ಸವಿಯಬಹುದಾದ ಭಕ್ಷ್ಯವಾಗಿದೆ, ವಿಜ್ಞಾನ-ತಂತ್ರಜ್ಞಾನಗಳ ಲಾಭ ಅನುಭವಿಸುವ ಭಾರಿ ಕೈಗಾರಿಕೆಗಳೇ ಒಂದು ರೀತಿಯಲ್ಲಿ ಅವೈಜ್ಞಾನಿಕವಾದವು, ಏಕೆಂದರೆ, ಅವು ಮಾನವರಿಗೆ ಒಳಿತಾದುದನ್ನು ಪೋಲು ಮಾಡುತ್ತವೆ. ಆದ್ದರಿಂದಲೇ ಅವನ್ನು "ಆಹಾರ ನಾಶದಲ್ಲಿ ತಜ್ಞರು" ಎಂದು ಕುಮಾರಪ್ಪ ಹೇಳಿದ್ದು, ನಮಗೆ ಒಂದು ಹುಚ್ಚು ಹಿಡಿದಂತೆ ತೋರುತ್ತದೆ. ಬಿಳಿಯ ಅಕ್ಕಿ, ಬಿಳಿಯ ಗೋಧಿ, ವನಸ್ಪತಿ ಎಣ್ಣೆ ಇತ್ಯಾದಿಗಳನ್ನು ಉತ್ಪಾದಿಸುವ ಗಿರಣಿಗಳನ್ನು ಉಪಯೋಗಿಸಿ, ನಿಸರ್ಗ ಕೊಡಮಾಡುವ ಪೋಷಕತೆಯನ್ನು ಹಾಳುಮಾಡಲೇಬೇಕೆಂಬ ಹುಚ್ಚು, ವಿಜ್ಞಾನದ ವಿವೇಕ ರಹಿತ ಬಳಕೆ ಎಂದರೆ ಇದೇ, ಇದು ದೇಶದಲ್ಲಿ ನಿರುದ್ಯೋಗಕ್ಕೆ ದಾರಿ. "ಇದನ್ನೆಲ್ಲ ನೋಡಿದರೆ, ನಾವು ವೈಜ್ಞಾನಿಕ ಹಗ್ಗಗಳಿಂದ ನೇಣುಹಾಕಿಕೊಳ್ಳುವೆವೊ ಎನಿಸುತ್ತದೆ" ಎಂದು ಕುಮಾರಪ್ಪ ಹೇಳಿದರು.

ಭೂಮಿ ಶೃಂಗಸಭೆ

ಅಭಿವೃದ್ಧಿ ಎಂದು ಯಾವುದನ್ನು ಹೇಳುತ್ತೇವೆಯೋ, ಅದರಿಂದ ಭೂಮಿಗೆ ಆಗುವ ಅಪಾಯವನ್ನು ನಿವಾರಿಸಬೇಕು ಎನ್ನುವುದೇ ಭೂಮಿ ಶೃಂಗ ಸಭೆಯ ಚರ್ಚಾವಿಷಯವಾಗಿತ್ತು. ಬಹುಎಚ್ಚರಿಕೆಯ ಯೋಜನೆ ಸಿದ್ಧತೆಗಳ ನಂತರ ನಡೆದ ಈ ಶೃಂಗಸಭೆಯಲ್ಲಿ ಆದುದು ಜಗತ್ತಿನ ರಾಷ್ಟ್ರಗಳು ಎರಡು ಗುಂಪುಗಳಾಗಿ ವಿಭಜನೆ, ಉತ್ತರದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು, ದಕ್ಷಿಣದ ಅಭಿವೃದ್ಧಿ ಹೊಂದುತ್ತಿರುವ

ರಾಷ್ಟ್ರಗಳು. ಉತ್ತರದ ರಾಷ್ಟ್ರಸಮೂಹ ಜಗತ್ತಿನ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಪ್ರಮಾಣಕ್ಕೆ ಮೀರಿದ ಭಾಗವನ್ನು ತಿಂದುಹಾಕುತ್ತವೆ ಮತ್ತು ವಿಶ್ವಮಾಲಿನ್ಯದಲ್ಲಿ ಬಹುಪಾಲು ಅವುಗಳದೇ. ಮನುಕುಲದ ಹಿತದೃಷ್ಟಿಯಿಂದ ಈ ಎರಡೂ ಗುಂಪುಗಳು ಒಂದು ಒಪ್ಪಂದಕ್ಕೆ ಬರುವುದೆಂಬ ನಿರೀಕ್ಷೆ ಇತ್ತು. ಎಷ್ಟು ಆಸೆ ಇತ್ತೆಂದರೆ, ನಾರ್ವೆಯ ಪ್ರಧಾನಮಂತ್ರಿ ಅದನ್ನು "ರಾಷ್ಟ್ರಗಳ ಧಾರಕ ಅಭಿವೃದ್ಧಿಯ (Sustainable Development) ತೃತೀಯ ಕ್ರಾಂತಿ" ಎಂದು ಕರೆದರು, ಆದರೆ ಆ ಶೃಂಗಸಭೆ ಏನನ್ನೂ ಸಾಧಿಸಲಾಗಲಿಲ್ಲ. ಏಕೆಂದರೆ, ಮಾಲಿನ್ಯವನ್ನು ತಡೆಯಲು ಬೇಕಾದ ಹಣಕಾಸಿನ ಸಂಪನ್ಮೂಲಗಳನ್ನು ಒದಗಿಸಲು ಉತ್ತರದ ಅಭಿವೃದ್ಧಿ ಹೊಂದಿದ ಬಹುಪಾಲು ರಾಷ್ಟ್ರಗಳು ಯಾವ ವಚನವನ್ನು ಕೊಡಲು ಒಪ್ಪಲಿಲ್ಲ. ಹೀಗಾಗಿ "ತೃತೀಯ ಕ್ರಾಂತಿ" ಎಂದದ್ದು ವಿಶ್ವಸಂಸ್ಥೆಯ 'ಪರಿಸರ ಹಾಗೂ ಅಭಿವೃದ್ಧಿ' ಸಮ್ಮೇಳನದ ಮಹಾಕಾರ್ಯದರ್ಶಿ, ಮಾರಿಸ್ ಸ್ಟ್ರಾಂಗ್ ಹೇಳಿದಂತೆ 'ವಚನವಿಲ್ಲದ ಒಪ್ಪಂದ' ಆಯಿತು.

ಈ ಸಂದರ್ಭದಲ್ಲಿ ದಶಕಗಳ ಹಿಂದೆಯೆ ಕುಮಾರಪ್ಪ ಕೊಟ್ಟಿದ್ದ ಎಚ್ಚರಿಕೆಯನ್ನು ನೆನೆಸಿಕೊಳ್ಳಲೇಬೇಕು, ಅವರ ಮಾತನ್ನು ನಾವು ಅನುಸರಿಸಿದ್ದರೆ, ಈ ಪರಿಸ್ಥಿತಿಯನ್ನು ತಪ್ಪಿಸಬಹುದಿತ್ತು. "ಪರಿಸರ ಸ್ನೇಹಿ" ಸಮಾಜವನ್ನು ಸ್ಥಾಪಿಸಬೇಕು ಎಂಬ ಬಗ್ಗೆ ಇಂದು ವಿಜ್ಞಾನಿಗಳು, ರಾಜನೀತಿಜ್ಞರು ಬೊಬ್ಬೆ ಹಾಕುತ್ತಿದಾರೆ. ಸಮೀಪಿಸುತ್ತಿರುವ ಸರ್ವನಾಶದ ಬಗ್ಗೆ ಜಗತ್ತಿನ ಅರಿವು ಹೆಚ್ಚುತ್ತಿದೆ. ಆದರೆ ಅದನ್ನು ನಿವಾರಿಸಲಾರದ ಅಸಹಾಯಕ ಸ್ಥಿತಿಯಲ್ಲಿದೆ. ಶಾಂತಿಯ ಆರ್ಥಿಕತೆ ಹಾಗೂ ಧಾರಕ ಸಮಾಜ ಎರಡು ಮೂಲಭೂತ ಅಂಶಗಳ ಮೇಲೆ ನಿಂತಿವೆ ಎಂಬುದು ಕುಮಾರಪ್ಪನವರಿಗೆ ದೃಢವಾಗಿ ಮಂದಟ್ಟಾಗಿತ್ತು. ಒಂದು ಮಾನವರನ್ನು ಶೋಷಿಸದಿರುವುದು, ಎರಡು ನೈಸರ್ಗಿಕ ಸಂಪನ್ಮೂಲಗಳ ಉಚಿತ ಬಳಕೆ. ಮಾನವನ ಅಥವಾ ಪ್ರಕೃತಿಯ ಶೋಷಣೆ ದ್ವೇಷ, ಹಿಂಸೆ ಮತ್ತು ಯುದ್ಧಗಳ ಫಲ ಕೊಡುವ ವಿಷವೃಕ್ಷ.

ಕುಮಾರಪ್ಪ ಶ್ರೇಷ್ಠ ಯೋಜಕರು, ಕಡುಬಡವರ ಸುಧಾರಣೆಯೇ ಯೋಜನೆಯ ಗುರಿಯಾಗಬೇಕು ಎಂಬುದು ಅವರ ದೃಢ ಅಭಿಪ್ರಾಯ. ಕುಮಾರಪ್ಪನವರು ಪ್ರತಿಪಾದಿಸಿದ ಪರಿಕಲ್ಪನೆಗಳಿಗೆ ನಮ್ಮ ಯೋಜಕರು ಕಿವಿಗೊಡದೆ ಇದ್ದರೆ ನಮ್ಮ ಜನಕೋಟಿಗೆ ಭವಿಷ್ಯ ಶೂನ್ಯ. ನಮ್ಮ ಇಂದಿನ ಯೋಜನೆ ಏನಿದ್ದರೂ ಕೊಳ್ಳುಬಾಕ ಸಂಸ್ಕೃತಿಯನ್ನು ಕೊಬ್ಬಿಸುತ್ತಿದೆ. ಇದನ್ನು ತಡೆಗಟ್ಟಬೇಕು, ಪ್ರತಿಯೊಬ್ಬ ಮನುಷ್ಯನ ಸ್ವಾತಂತ್ರ್ಯ ಮತ್ತು ಕಲ್ಯಾಣವೇ ಯೋಜಕರ ಮತ್ತು ಪ್ರಭುತ್ವದ ಪ್ರಪ್ರಥಮ ಕಾಳಜಿ ಆಗಬೇಕು, ಸ್ವಾತಂತ್ರ್ಯಕ್ಕೆ ಮೊದಲು, "ಗ್ರಾಮ ಕೈಗಾರಿಕೆ"ಯೇ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಧೋರಣೆ ಆಗಿತ್ತು, ಸ್ವಾತಂತ್ರ್ಯಾನಂತರ, ನಮ್ಮ ಯೋಜಕರು ಇದನ್ನು "ಶೀಘ್ರ ಕೈಗಾರಿಕೆ" ಎಂದು ಬದಲು ಮಾಡಿದರು.

"ನಾವು ಯಾವಾಗಲೂ ಅತ್ಯಂತ ಯಶಸ್ವೀ ಜೀವಜಾತಿ ಆಗಿದ್ದೇವೆ. ಈಗ ನಾವು ಹತೋಟಿ ತಪ್ಪಿದ ಜೀವಜಾತಿ. ನಮ್ಮ ಯಶಸ್ಸೇ ನಮ್ಮನ್ನು ಅಪಾಯದ ಭವಿಷ್ಯಕ್ಕೆ ಕೊಂಡೊಯ್ಯುತ್ತಿದೆ". ಎಂದು ವಿಶ್ವಸಂಸ್ಥೆಯ ಪರಿಸರ ಮತ್ತು ಅಭಿವೃದ್ಧಿ ಸಮ್ಮೆಳನದ ಮಹಾ ಕಾರ್ಯದರ್ಶಿ ಮಾರಿಸ್ ಸ್ಟ್ರಾಂಗ್ ಅವರು ಭೂಮಿ ಶೃಂಗಸಭೆಗೆ ತಮ್ಮ ವರದಿಯಲ್ಲಿ ಹೇಳಿದ್ದು ಉಚಿತವೇ ಆಗಿದೆ, ಇದಕ್ಕೆ ಆಧಾರ ಪ್ರಾಯಶಃ ವಿಶ್ವವೀಕ್ಷಣ ಸಂಸ್ಥೆ (World Watch Institute)ಯ ವರದಿ. ಆ ವರದಿ ಹೇಳಿತ್ತು. "ಅತಿ ಜನಸಂಖ್ಯೆಯ

ರಾಷ್ಟ್ರಗಳಲ್ಲಿ ರಕ್ಷಕ ಓಜೋನ್ ಪದರ ವಿಜ್ಞಾನಿಗಳು ಯೋಚಿಸಿದ್ದಕ್ಕಿಂತ ಎರಡರಷ್ಟು ವೇಗದಲ್ಲಿ ತೆಳುವಾಗುತ್ತಿದೆ. ಪ್ರತಿದಿನವೂ ಕನಿಷ್ಟ ಪಕ್ಷ 140 ಸಸ್ಯ ಮತ್ತು ಪ್ರಾಣಿ ಸಂಕುಲಗಳು ವಿನಾಶಕ್ಕೆ ಗುರಿಯಾಗುತ್ತಿವೆ".

ಈ ಅಪಾಯಕಾರಿ ಪರಿಸ್ಥಿತಿಗೆ ಪರಿಹಾರವೆಂದರೆ ಜೆ.ಸಿ. ಕುಮಾರಪ್ಪ ತೋರಿದ ಹಾದಿಯಲ್ಲಿ ನಡೆಯುವುದು. "ಧಾರಕ (Sustainable) ಆರ್ಥಿಕತೆ ಹಾಗೂ ಶಾಶ್ವತ ಅರ್ಥಶಾಸ್ತ್ರ"ಗಳ ಹಾದಿ, ಬೇರೆ ದಾರಿಯೆ ಕಾಣಿಸುತ್ತಿಲ್ಲ.

ಭಾರತದ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಿಸಿದೆ, ಆದರೆ ಅದೇ ಪ್ರಮಾಣದಲ್ಲಿ ಬಡತನ ಕುಗ್ಗಿಲ್ಲ ಎನ್ನುತ್ತದೆ ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆಯ ಇತ್ತೀಚಿನ ವರದಿ. 103 ಅಭಿವೃದ್ಧಿ ಶೀಲ ದೇಶಗಳ ಪಟ್ಟಿಯಲ್ಲಿ ಭಾರತ 58ನೆಯ ಸ್ಥಾನದಲ್ಲಿದೆ. ಭಾರತ ಸಾಧಿಸಿರುವುದು ಉದ್ಯೋಗರಹಿತ ಬೆಳವಣಿಗೆಯಷ್ಟೆ ಎಂದು ಇದು ತೋರಿಸುತ್ತದೆ. ಇದು ಭಾರತ ಅನುಸರಿಸಿದ ಯಂತ್ರಪ್ರಧಾನ ಹಾಗೂ ಮಾರುಕಟ್ಟೆ ಆರ್ಥಿಕತೆಯ ಫಲ, ಅಲ್ಲದೆ, ಅಲ್ಪ ಅಭಿವೃದ್ಧಿಯ ಹಾಗೂ ಅಭಿವೃದ್ಧಿ ಶೀಲ ರಾಷ್ಟ್ರಗಳ ಬಗ್ಗೆ ಅನ್ಯಾಯಕರ ಧೋರಣೆ ತಳೆದಿರುವ ವಿಶ್ವವ್ಯಾಪಾರ ಸಂಸ್ಥೆಯ (WTO) ಜೊತೆಗಿನ ಒಪ್ಪಂದದ ಫಲ ಕೂಡ. ಇದರ ಪರಿಣಾಮವೆಂದರೆ, ಪೂರಕ ಕಸಬು ಇಲ್ಲದೆ ಕೃಷಿಕರು, ರೈತರು ನಿರುದ್ಯೋಗಿಗಳಾದುದು, ತಿನ್ನಲು ಅನ್ನ ಸಿಗದೆ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ಕಾರಣಕ್ಕಾಗಿಯೇ, ಶೇ. 80ರಷ್ಟು ಬಡವರು ಇದ್ದು ಹಾಗೂ ಶೇ. 70ರಷ್ಟು ರೈತರೇ ಇದ್ದು, ಈ ಧೋರಣೆಯ ಬಿಸಿಗೆ ಪಕ್ಕಾಗಿರುವ ದೇಶಗಳಲ್ಲಿ ಚಳುವಳಿ, ಕ್ಷೋಭೆ ಉಂಟಾಗುತ್ತಿದೆ. ಅವು ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಪ್ರಬಲವಾಗಿರುವ ಅಮೆರಿಕಾ ಮತ್ತು ಯೂರೋಪು ದೇಶಗಳಾದ ಉತ್ತರ ವಲಯ ದೇಶಗಳ ವಿರುದ್ಧ ಚಳುವಳಿ ನಡೆಸುತ್ತಿವೆ.

ಮೇಲೆ ಹೇಳಿದ ಪರಿಸ್ಥಿತಿ ನಿಚ್ಚಳವಾಗಿ ತೋರಿಸುತ್ತದೆ, ನಮ್ಮ ಯೋಜಕರು, ನಮ್ಮ ಸರ್ಕಾರಗಳು ಕುಮಾರಪ್ಪ ತೋರಿಸಿದ ಹಾದಿಯನ್ನು ನಿರ್ಲಕ್ಷಿಸಿವೆ ಎಂದು. ಅಭಿವೃದ್ಧಿ ಹೊಂದಿದ ಭಾರತ ನಗರಗಳ ರಾಷ್ಟ್ರವಾಗಿರುವುದಿಲ್ಲ, ಪುರೋಭಿವೃದ್ಧಿ ಹೊಂದಿದ ಗ್ರಾಮಗಳ ಜಾಲವಾಗಿರುತ್ತದೆ ಎಂದೂ ಹೇಳಿದ್ದರು. ನಗರಗಳ ಜನರಿಗೆ ಸಿಗುವ ಸೌಕರ್ಯಗಳೆಲ್ಲವನ್ನು ಹಳ್ಳಿಗರಿಗೂ ಅವರವರ ಹಳ್ಳಿಗಳಲ್ಲೆ ಒದಗಿಸಬೇಕು. ಹಳ್ಳಿಗರು ನಗರಗಳಿಗೆ ವಲಸೆ ಬರುವುದನ್ನು ತಪ್ಪಿಸಲು ಅದೊಂದೇ ದಾರಿ ಎಂದಿದ್ದರು. ಸೌಕರ್ಯಗಳನ್ನು ಒದಗಿಸುವುದು ಎಂದರೆ ಪೂರಕ ವರಮಾನ ಒದಗಿಸುವುದು, ಅದು ಖಾದಿ-ಗ್ರಾಮೋದ್ಯೋಗಗಳಿಂದ ಮಾತ್ರ ಸಾಧ್ಯ. ನಗರೀಕರಣ ಪರಿಹಾರವಲ್ಲ. ನಮ್ಮ ಯೋಜಕರು ಗಾಂಧೀಜಿಯ ಬೋಧನೆಯನ್ನು ನೆನೆಸಿಕೊಂಡು ಅನುಸರಿಸಿದಾಗಲೇ ಪರಿಹಾರ ಸಾಧ್ಯ. ಗಾಂಧೀಜಿ ಹೇಳಿದ್ದರು. "ನೀವು ನೋಡಿರಬಹುದಾದ ಕಡುಬಡವನ, ನಿಸ್ಸಹಾಯಕನ ಮುಖವನ್ನು ನೆನೆಸಿಕೊಂಡು, ನಿಮ್ಮನ್ನೇ ಕೇಳಿಕೊಳ್ಳಿ, ನೀವು ಮಾಡಲು ಹೊರಟಿರುವುದು ಆತನಿಗೆ ಏನಾದರೂ ಉಪಯುಕ್ತವಾದಿತೇ ಎಂದು. ಆದರಿಂದ ಅವನಿಗೆ ಏನಾದರೂ ಲಾಭ ದೊರಕೀತೆ ? ಅದು ಆತನಿಗೆ ತನ್ನ ಬಾಳಿನ ಮೇಲೆ ತನ್ನ ಭವಿಷ್ಯದ ಮೇಲೆ ಏನಾದರೂ ಹತೋಟಿಯನ್ನು ಮತ್ತೆ ಕೊಟ್ಟಿತೇ ? ಅಂದರೆ ನಿಮ್ಮ ಕಾರ್ಯ, ನಮ್ಮ

ದೇಶದ ಆ ಹಸಿದವನನ್ನು ಹಾಗೂ ಆಧ್ಯಾತ್ಮಿಕವಾಗಿ ವಂಚಿತರಾದ ಜನಕೋಟಿಯನ್ನು ಸ್ವರಾಜ್ಯಕ್ಕೆ, ಸ್ವಯಮಾಧಿಕಾರಕ್ಕೆ ಒಯ್ಯಬಲ್ಲದೇ ? ಎಂದು ಕೇಳಿಕೊಳ್ಳಿ".

ಗಾಂಧೀಜಿ ಆಶಿಸಿದ್ದನ್ನು ಸಾಧಿಸಬೇಕಾದರೆ ನಾವು "ಸಾಮಾಜಿಕ-ಆರ್ಥಿಕ ಅಹಿಂಸಾತ್ಮಕ ಕ್ರಾಂತಿಯನ್ನು" ಆರಂಭಿಸಬೇಕು, ಇದು ಖಾದಿಗ್ರಾಮೋದ್ಯೋಗದ ಮೂಲಕವೇ ಸಾಧ್ಯ. ಏಕೆಂದರೆ ಖಾದಿ ಸತ್ಯ ಅಹಿಂಸೆಯ ವಸ್ತ್ರ

ಪ್ರಜಾಪ್ರಭುತ್ವ - ಕುಮಾರಪ್ಪನವರ ಅಭಿಪ್ರಾಯದಲ್ಲಿ

ಜನತೆ ತಮ್ಮ ಪ್ರತಿನಿಧಿಗಳೆಂದು ಆರಿಸಿದ ವ್ಯಕ್ತಿಗಳಿಂದ ಆಡಳಿತ ನಿಯಂತ್ರಿತವಾಗಿ ನಡೆಯುವುದೇ ಪ್ರಜಾಪ್ರಭುತ್ವ. ಆದ್ದರಿಂದ ಜನತೆಯ ಪರವಾಗಿ ಆಡಳಿತ ನಡೆಸುವವರ ಕರ್ತವ್ಯವೆಂದರೆ ಜನತೆಯ ಯೋಗಕ್ಷೇಮವೇ ಅವರ ಪರಮ ಗುರಿ ಆಗಿರುವುದು.

ಆ ಪ್ರತಿನಿಧಿಗಳ ಗುಣಗಳು ಹೇಗಿರಬೇಕು, ಮಾನಸಿಕ ದೃಷ್ಟಿ ಹೇಗಿರಬೇಕು ? ಕುಮಾರಪ್ಪ ಹೇಳುತ್ತಾರೆ, "ಸರ್ಕಾರ ಯಶಸ್ವಿಯಾಗಬೇಕಾದರೆ, ಬಹುಪಾಲು ಜನರ ಯೋಗಕ್ಷೇಮವನ್ನು ಸಾಧಿಸಬೇಕಾದರೆ, ದೂರದೃಷ್ಟಿಯ ಜನ ಆಡಳಿತ ಪ್ರಮುಖರಾಗಬೇಕು. ಅಲ್ಪದೃಷ್ಟಿಯ ಜನ ಸರ್ಕಾರದ ಪ್ರಮುಖರಾದರೆ, ಅದು ಸಮಾಜಕ್ಕೆ ಅಪಾಯಕಾರಿ. ತಮ್ಮ ಅಲ್ಪದೃಷ್ಟಿಯ ಧೋರಣೆಗಳಿಂದಾಗಿ, ಅವರು ಯುದ್ಧಗಳನ್ನು ನಡೆಸುತ್ತಾರೆ."

ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳ ಉದಾಹರಣೆಯನ್ನು ಪ್ರಸ್ತಾಪಿಸಿ, ಅಲ್ಲೆಲ್ಲಾ ಬಂಡವಾಳಷಾಹಿಯ ಸರ್ವಾಧಿಕಾರತ್ವ ಇದೆ ಎನ್ನುತ್ತಾರೆ. ಆ ಜನ ಕೇಂದ್ರೀಕೃತ ಉತ್ಪಾದನಾ ವಿಧಾನಗಳನ್ನು ಅನುಸರಿಸುತ್ತಾರೆ. ಆದರಿಂದ ಕೇಂದ್ರೀಕೃತ ನಿಯಂತ್ರಣ ಹಾಗೂ ಸೈನಿಕ ಕಟ್ಟಳೆ ಇರುತ್ತದೆ. ಅದು ಅಂತಿಮವಾಗಿ ಸರ್ವಾಧಿಕಾರಕ್ಕೆ ದಾರಿ. ಅರ್ಥವ್ಯವಸ್ಥೆಯಲ್ಲಿ ಸರ್ವಾಧಿಕಾರ, ರಾಜಕಾರಣದಲ್ಲಿ ಪ್ರಜಾಪ್ರಭುತ್ವ ಏಕಕಾಲಕ್ಕೆ ಇರಲು ಸಾಧ್ಯವಿಲ್ಲ. ಅಂತಹ ಪ್ರಜಾಪ್ರಭುತ್ವ ಕೇವಲ ಮುಸುಕಷ್ಟೆ, ಆರ್ಥಿಕತೆಯಲ್ಲಿ ಪ್ರಜಾಪ್ರಭುತ್ವ ಏನಿದ್ದರೂ ವೈಯಕ್ತಿಕ ಮಟ್ಟದಲ್ಲಿ ಗ್ರಾಮಗಳಲ್ಲಿ ವಿಕೇಂದ್ರೀಕೃತ ಉತ್ಪಾದನೆಯನ್ನೆ ಆಧರಿಸಿರಬೇಕು.

ಕೆಲವು ಸಾಮಾನ್ಯ ಸೌಕರ್ಯಗಳಿರುತ್ತವೆ, ನೀರಾವರಿ, ರಸ್ತೆ, ಇತ್ಯಾದಿ ದೊಡ್ಡ ಯೋಜನೆಗಳು. ಅವುಗಳನ್ನು ಒಬ್ಬೊಬ್ಬ ವ್ಯಕ್ತಿಯೇ ಹೊಂದುವುದು, ನಿಭಾಯಿಸುವುದು ಅಸಾಧ್ಯ. ಅವುಗಳನ್ನು ಚುನಾಯಿತ ಪ್ರತಿನಿಧಿಗಳ ತಂಡ ನಿಭಾಯಿಸಬೇಕು. ಅಂತಹ ವ್ಯಕ್ತಿಗಳು ದೂರದೃಷ್ಟಿಯವರಾಗಿರಬೇಕು. ಅಂದರೆ ಶಾಸಕರು, ಸಂಸದರು, ಮಂತ್ರಿಗಳು ಗರುಡದೃಷ್ಟಿಯವರಾಗಬೇಕು. ಅವರು ಹಣ ಎಷ್ಟು ಬರುತ್ತದೆ ಎಂಬ ಮಾತಾಡಿದರೆ, ಅಂತಹವರು ಜವಾಬ್ದಾರಿ ಸ್ಥಾನಗಳಲ್ಲಿ ಇರಲು ಅರ್ಹರಲ್ಲ, "ಈ ಕೆಲಸ ಜನರ ಉದ್ದೇಶಗಳನ್ನು ಪೂರೈಸುವುದೇ ?" ಎಂದು ಕೇಳಬೇಕು. ಏಕೆಂದರೆ ಸರ್ಕಾರ ಹಣ ಮಾಡಲು ಇರುವ ವ್ಯಾಪಾರಿ ಸಂಸ್ಥೆಯಲ್ಲ, ಅದು ಇರುವುದು ಜನರ ಸೇವೆಗಾಗಿ. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ, ಪ್ರತಿಯೊಬ್ಬ ಪ್ರಜೆಯೂ

ಪ್ರಜಾಪ್ರಭುತ್ವದ ಆಡಳಿತದಲ್ಲಿ ತಾನು ಮಾಡಬೇಕಾದ ಕೆಲಸವೇನು ಎಂಬ ಬಗ್ಗೆ ಜಾಗೃತನಾಗಿರಬೇಕು, ಎರಡನೆಯದಾಗಿ, ಆಡಳಿತ ಸೂತ್ರ ಹಿಡಿಯುವ ಈ ಜನಪ್ರತಿನಿಧಿಗಳಲ್ಲಿ ಸ್ವಾರ್ಥದ ವಾಸನೆಯೂ ಇರಬಾರದು. ಇಲ್ಲವಾದರೆ, ಅವರು ಸ್ವಾರ್ಥದ ದುರುದ್ದೇಶದಿಂದ ಜನರನ್ನು ಶೋಷಿಸಿಯಾರು, ಮಂತ್ರಿಗಳು, ಜನಪ್ರತಿನಿಧಿಗಳು ಮಹಲುಗಳಲ್ಲಿ ವಾಸಿಸಬಾರದು, ಅವರು ಪ್ರತಿನಿಧಿಸುವುದು ಗುಡಿಸಲು ವಾಸಿಗಳನ್ನು, ಹಾಗಿದ್ದರೆ ಮಾತ್ರ ನಿಜವಾದ ಅರ್ಥದಲ್ಲಿ ಸ್ವರಾಜ್ಯ ತಲುಪಲು ಸಾಧ್ಯ, ಬಡತನ ತುಂಬಿರುವ ನಮ್ಮ ದೇಶದಲ್ಲಿ, ತಮ್ಮನ್ನು ಆಯ್ಕೆ ಮಾಡಿರುವ ಎಲ್ಲಾ ಜನಕ್ಕೂ ಅನ್ನ, ವಸತಿ ಮುಂತಾದ ಮೂಲಭೂತ ಅಗತ್ಯಗಳನ್ನು ಒದಗಿಸುವುದೇ ಪ್ರತಿಯೊಬ್ಬ ಜನಪ್ರತಿನಿಧಿಯ ಗುರಿಯಾಗಿರಬೇಕು.

ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷದ ಪಾತ್ರ

ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷ ಇರಲೇಬೇಕು. ಜವಾಬ್ದಾರಿಯುತವಾದ ಪ್ರತಿಪಕ್ಷ, ಜನತೆಗೆ ಹೊಣೆಗಾರನಾದ ಪ್ರತಿಪಕ್ಷ ಇರಬೇಕು. ಸರ್ಕಾರ ಜನತೆಯ ಯೋಗಕ್ಷೇಮವನ್ನೇ ಗುರಿಯಾಗಿ ಇಟ್ಟುಕೊಂಡು ಸರಿಯಾದ ದಿಸೆಯಲ್ಲಿ ಸಾಗುತ್ತಿದೆಯೆ ಎಂದು ನೋಡಿಕೊಳ್ಳಬೇಕು ಪ್ರತಿಪಕ್ಷ. ಪ್ರತಿಪಕ್ಷವನ್ನು ನದಿಯ ಬಂಡೆಯ ದಡಕ್ಕೆ ಹೋಲಿಸುತ್ತಾರೆ ಕುಮಾರಪ್ಪ, ದಡಗಳು ನದಿಯ ನೀರು ಸರಿಯಾದ ದಿಕ್ಕಿನಲ್ಲಿ ಹರಿಯುವಂತೆ ನೋಡಿಕೊಳ್ಳುತ್ತವೆ. ಜನತೆಯ ಇಚ್ಛಾನುಸಾರ, ಇಂದು ಪ್ರತಿಪಕ್ಷದಲ್ಲಿರುವವರು ನಾಳೆ ಆಡಳಿತ ಸ್ಥಾನಗಳಿಗೆ ಬರಬಹುದು. ಮತದಾರರರಿಗೆ ಲಂಚಕೊಟ್ಟು ಇದು ನಡೆಯಬಾರದು. ವೈಯಕ್ತಿಕ ಮಹದಾಶೆ ಇರಕೂಡದು, ಮಂತ್ರಿಗಳನ್ನು ಬದಲಾಯಿಸುವುದೇ ಮತದಾರರ ಗುರಿ ಆಗಬಾರದು, ಮತದಾರರು ಮಂತ್ರಿಗಳಿಗೆ ಮಾದರಿ ಆಗಬೇಕು. ಜನಸಾಮಾನ್ಯನನ್ನು ಮಾದರಿ ವ್ಯಕ್ತಿಯಾಗಿ ಮಾಡುವ ಹೊಣೆ ರಚನಾತ್ಮಕ ಕೆಲಸಗಾರರ ಮೇಲೆ ಇದೆ. ಗಾಂಧೀಜಿ ಮತ್ತು ಕುಮಾರಪ್ಪನವರನ್ನು ಅನುಸರಿಸುವ ರಚನಾತ್ಮಕ ಕಾರ್ಯಕರ್ತರಾದ ನಾವು ಭಾರಿ ಹೊಣೆಯನ್ನು ವಹಿಸಿಕೊಳ್ಳಬೇಕಾಗಿದೆ. ಆಗ ಮಾತ್ರ ಅಹಿಂಸಾತ್ಮಕ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಲು ನೆರವಾಗಬಹುದು. ಇದಕ್ಕೆ ಅಖಿಲ ಭಾರತ ಸರ್ವಸೇವಾ ಸಂಘ, ಗಾಂಧೀ ಸ್ಮಾರಕ ನಿಧಿ, ಜೆ.ಸಿ. ಕುಮಾರಪ್ಪ ಸ್ಮಾರಕ ಟ್ರಸ್ಟ್ ಮೊದಲಾದ ಸುಸಂಘಟಿತ ರಚನಾತ್ಮಕ ಕಾರ್ಯಕರ್ತರ ಸಂಸ್ಥೆಗಳು ಅವಶ್ಯ. ಅಂಥ ಸಂಸ್ಥೆಗಳಲ್ಲಿ ನಿರತರಾದ ಕಾರ್ಯಕರ್ತರು ತ್ಯಾಗಶೀಲರಾಗಿರಬೇಕು. ಜನಸೇವೆಯೊಂದೇ ಅವರ ಗುರಿಯಾಗಬೇಕು.

ಈ ಬಗೆಯ ಪ್ರಜಾಪ್ರಭುತ್ವ ಚೌಕಟ್ಟಿನಲ್ಲಿ, ರಚನಾತ್ಮಕ ಕಾರ್ಯಕರ್ತರ ಸಂಸ್ಥೆಗಳು ಶೋಷಣೆ ವಿರುದ್ಧ ಜನರಿಗೆ ರಕ್ಷಣೆ ಕೊಡುವ ಭದ್ರಕೋಟೆಗಳಾಗುತ್ತವೆ. ಈ ಆಧಾರದ ಮೇಲೆ ನಡೆಯುವ ಯಾವುದೇ ಪ್ರಭುತ್ವ ಜನತೆಯ ಯೋಗಕ್ಷೇಮಕ್ಕೆ ಒತ್ತುಕೊಡುವುದು ಖಂಡಿತ. ಅವು ಗ್ರಾಮ ಪಂಚಾಯಿತಿಗಳ ಮೂಲಕ ಕಾರ್ಯನಿರ್ವಹಿಸುತ್ತವೆ.

ಕುಮಾರಪ್ಪನವರ ಪ್ರಕಾರ, "ಪ್ರಜಾಪ್ರಭುತ್ವದಲ್ಲಿ ದಾರಿ ಸರಳ, ಮಾನವ ಸರ್ವಜ್ಞನೂ ಅಲ್ಲ, ಸರ್ವಶಕ್ತನೂ ಅಲ್ಲ, ಒಳ್ಳೆಯ ಹೋರಾಟಗಾರ ಒಳ್ಳೆಯ ಆಡಳಿತಗಾರ ಏನೂ ಅಲ್ಲ, ಅಥವಾ ಸಮರ್ಥ ರಾಜಕಾರಣಿ ಪ್ರಬಲ ಸಮಾಜರಚನಕಾರನೂ ಅಲ್ಲ,

ಗ್ರೇಟ್ ಬ್ರಿಟನ್‌ನಲ್ಲಿ ಯುದ್ಧ ಕಾಲದ ಪ್ರಧಾನಿ ಚರ್ಚಿಲ್‌ರನ್ನು ಅವರ ಅಗತ್ಯ ಮುಗಿದೊಡನೇ, ಕಿಂಚಿತ್ತೂ ಮರುಗದೆ, ಮನೆಗೆ ಕಳಿಸಲಾಯಿತು. ನಾಯಕರ ಬಗ್ಗೆ ಜನರಿಗೂ ಕರ್ತವ್ಯವಿದೆ. ನಾಯಕರನ್ನು ತಪ್ಪು ಸ್ಥಾನಗಳಲ್ಲಿ ಇರಿಸಬಾರದು. ಆ ಹೊಣೆ ಜನತೆಯದು, ಇಂದಿನ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವಾದರೆ, ಅದಕ್ಕೆ ಬಹುಮಟ್ಟಿಗೆ ತಪ್ಪಿತಸ್ಥರು, ಪ್ರಜಾಪ್ರಭುತ್ವದಲ್ಲಿ ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸದಿರುವ ಪ್ರಜೆಗಳು.

ಸರ್ಕಾರದಲ್ಲಿ ನಾಯಕರಿಗೆ ಅಥವಾ ಮಂತ್ರಿಗಳಿಗೆ ವಹಿಸಬೇಕಾದ ಕರ್ತವ್ಯಗಳ ಬಗ್ಗೆಯೂ ಕುಮಾರಪ್ಪ ವಿಶದಗೊಳಿಸುತ್ತಾರೆ. ವಿದೇಶಾಂಗ ವ್ಯವಹಾರ ಖಾತೆ ಮತ್ತು ಹಣಕಾಸಿನ ಖಾತೆಗಳ ಪಾತ್ರ ಮುಖ್ಯವಾದುದು, ಇದು ಪಾಶ್ಚಿಮಾತ್ಯ ಪದ್ಧತಿ, ಆದರೆ ಭಾರತದಂಥ ಕೃಷಿ ಪ್ರಧಾನ ದೇಶದಲ್ಲಿ, ಕೃಷಿ ಮತ್ತು ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ. ಅವು ಮುಖ್ಯ ಇಲಾಖೆಗಳಾಗುತ್ತವೆ. ಇದನ್ನು ಈಗ ಸಡ್ಡೆ ಮಾಡುತ್ತಿಲ್ಲ. ಗ್ರಾಮ ಜನಕೋಟಿಯ ಹಿತಕ್ಕೆ ಬಾಧಕವಾಗಿ, ರಾಯಭಾರಿಗಳ ನೇಮಕಾತಿ ಅವರ ಕಛೇರಿಗಳ ಅಂದಚೆಂದ ಇವೇ ಮುಖ್ಯವಾಗುತ್ತಿವೆ. ಜನಕೋಟಿಗೆ ಹೊಟ್ಟೆ ತುಂಬಿಸುವ ಸಮಸ್ಯೆಗೆ ಗಮನ ಹರಿಸುವುದೇ ಮುಖ್ಯ. ಕುಮಾರಪ್ಪನವರ ಪ್ರಕಾರ, ಕೃಷಿ ಮತ್ತು ಕೈಗಾರಿಕೆಗಳ ಖಾತೆಗಳನ್ನು, ಜನತಾಕ್ಷೇಮದ ಬಗ್ಗೆ ನಿಜವಾದ ಉತ್ಸಾಹವುಳ್ಳ ಪ್ರಮುಖ ಪ್ರಬಲ ವ್ಯಕ್ತಿಗೆ ವಹಿಸಬೇಕು, ಉಳಿದ ಎಲ್ಲಾ ಖಾತೆಗಳು ಆಮೇಲೆ. ಜನರ ಆಶೋತ್ತರಗಳನ್ನು ಸಾಧಿಸಿ, ತಮ್ಮ ಅವಶ್ಯ ಅಗತ್ಯಗಳನ್ನು ಪೂರೈಸಬಲ್ಲಂಥವರನ್ನೆ ಮಂತ್ರಿ ಮಂಡಲಕ್ಕೆ ಆರಿಸುವಂತೆ ನೋಡಿಕೊಳ್ಳಬೇಕಾದುದು ಸಾರ್ವಜನಿಕರ ಕರ್ತವ್ಯ. ಜನಸ್ತೋಮ ಬಡತನದಿಂದ ಮುಕ್ತರಾಗದೆ, ಪೂರ್ಣಸ್ವರಾಜ್ಯ ಗಳಿಸಿದ್ದೇವೆ ಎಂದು ನಾವು ಹೇಳುವಂತಿಲ್ಲ, ಪ್ರಜಾಪ್ರಭುತ್ವ ರಾಷ್ಟ್ರವಾಗಿದೇವೆ ಎಂದು ಹೇಳಿಕೊಳ್ಳುವಂತಿಲ್ಲ. ಹಳ್ಳಿಯ ಜನರ ಆರ್ಥಿಕ ಬಿಡುಗಡೆಯೆ ಪೂರ್ಣ ಸ್ವರಾಜ್ಯದತ್ತ ಮೊದಲ ಹೆಜ್ಜೆ, ಅದನ್ನು ಸಾಧಿಸಿದ ನಂತರವೇ ಶಾಂತಿ, ಸಮೃದ್ಧಿ ಸಾಧ್ಯ.

ಕುಮಾರಪ್ಪ ಬರೆಯುತ್ತಾರೆ, "ಗಾಂಧೀಜಿಯನ್ನು ಸ್ವಾತಂತ್ರ್ಯಪಿತ ಎಂದು ಹೊಗಳುತ್ತಾರೆ, ನಮ್ಮ ಸುತ್ತ ನಾವು ಕಾಣುವ ಸ್ವಾತಂತ್ರ್ಯ ಎಂಥದು ? ಒಬ್ಬರನ್ನು ಇನ್ನೊಬ್ಬ ಕೊಲ್ಲಲು ಸ್ವಾತಂತ್ರ್ಯ. ಕೋಮು ಗಲಭೆಗಳು ತಾಂಡವ ಆಡುವ ಛಿದ್ರ ದೇಶವನ್ನು ಅಹಿಂಸಾ ಮೂರ್ತಿಯ ಮಗು ಎನ್ನುವುದು ಧರ್ಮದ್ರೋಹ. ನಮ್ಮ ನಾಡಿನ ಯಾವುದೇ ಸರ್ಕಾರವೂ ದೇಶಕ್ಕೆ ಗಾಂಧೀಜಿಯ ಆದರ್ಶಗಳನ್ನು ಒಪ್ಪಿಕೊಂಡಿಲ್ಲ. ಜನಕೋಟಿಯ ಅಭ್ಯುದಯದ ಗಾಂಧೀ ಆದರ್ಶವನ್ನು ಇಡೀ ದೇಶ ಹೃತ್ಪೂರ್ವಕವಾಗಿ ಅಳವಡಿಸಿಕೊಂಡಾಗ ಮಾತ್ರ ರಾಷ್ಟ್ರಪಿತ ಪಟ್ಟವನ್ನು ಅವರಿಗೆ ಅರ್ಪಿಸುವುದು ಉಚಿತವಾದೀತು." ಅಂತಿಮವಾಗಿ, ಜನಕೋಟಿಯ ಹಿತಸಾಧಿಸುವ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರಗಳು ನಡೆಸುವಂತೆ ನಾವು ಯಶಸ್ವಿಯಾಗಿ ಮಾಡಬಲ್ಲೆವಾದರೆ, ಆಗ ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ ಎಂದು ಹೇಳಿಕೊಳ್ಳಬಹುದು.

ಅಮೆರಿಕದ ಸಂಸತ್ತಿನ ಅಂತಾರಾಷ್ಟ್ರೀಯ ಸಂಬಂಧಗಳ ಸಮಿತಿಯ ಅಧ್ಯಕ್ಷರಾದ ಮಿ. ಹೆನ್ರಿ ಹೈಡ್ ಬರೆಯುತ್ತಾರೆ, "ಜಗತ್ತಿನ ಬಗ್ಗೆ ನಮ್ಮ ಸಿದ್ಧಾಂತಗಳು ವಿಫಲವಾಗದಂತೆ ಮಾಡುವಂಥ ಪ್ರಚಂಡ ಜವಾಬ್ದಾರಿ ನಮ್ಮ ಮೇಲಿದೆ. ಆದರೆ ಸುಲಭಗ್ರಾಹ್ಯವೇ ಆದ ಎಚ್ಚರಿಕೆಯ ಚಿಹ್ನೆಗಳಿಗೆ ನಾವು ಕುರುಡಾಗಿ, ನಾವು ದೀರ್ಘಕಾಲೀನ ಪರಿಣಾಮಗಳನ್ನು ನಿರ್ಲಕ್ಷಿಸಬಹುದು. ಆ ಪರಿಣಾಮಗಳು ನಮ್ಮ ಕಾರ್ಯದಿಂದಲೇ ಆಗಬಹುದು, ನಾವು ನಮ್ಮ ಗುರಿ ಮತ್ತು ದಾರಿಗಳ ಬಗ್ಗೆ ಮರುಚಿಂತನೆ ಮಾಡುವಂತಾಗಬೇಕು. ನಮ್ಮ ಗೆಳೆಯರನ್ನು ಹಿತೈಷಿಗಳನ್ನು ದೂರಮಾಡಿ ಗೊಂದಲಕ್ಕೆ ವೈರಿಗಳಿಗೆ ಆಸ್ಪದ ಕೊಟ್ಟೇವು." ಹೀಗೆ ಹೇಳಿದಾಗ ಮಿ|| ಹೈಡ್ ಅವರ ಗಮನದಲ್ಲಿ ಜಾರ್ಜ್ ಬುಷ್ ಮತ್ತು ಅವರ ಡೆಮೊಕ್ರಾಟಿಕ್ ಎನ್ನಿಸಿಕೊಂಡ ಆಡಳಿತದ ಇರಾಕ್-ಏಷ್ಯಾ ಧೋರಣೆ ಇತ್ತು. ಮಿ|| ಹೈಡ್ ಅವರ ಗಮನದಲ್ಲಿ ಇದ್ದುದು, ಇರಾಕ್ ಮತ್ತು ಏಷ್ಯಾ ಕುರಿತಂತೆ ಜಾರ್ಜ್‌ಡಬ್ಲ್ಯೂ ಬುಷ್‌ರ ಹಾಗೂ ಡೆಮೇಕ್ರಾಟಿಕ್ ಆಡಳಿತ ಎನ್ನಲಾದುದರ ಧೋರಣೆಗಳು.

1952ರಲ್ಲಿ ಭಾರತ ಸಚಿವ ಸಂಪುಟದ ಸದಸ್ಯರಾಗಿದ್ದ ಶ್ರೀ ಹರೇಕೃಷ್ಣ ಮೆಹತಾಬರು ಆಗಿನ ಪ್ರಧಾನಿ ಜವಹರಲಾಲ್ ನೆಹರೂ ಅವರಿಗೆ ಒಂದು ಟಿಪ್ಪಣಿಯನ್ನು ಕಳಿಸಿ, ಅದರಲ್ಲಿ ಸರ್ಕಾರದ ಪ್ರಮುಖ ಧೋರಣೆಗಳನ್ನು ಕಾರ್ಯಗಳನ್ನು ಯಶಸ್ವಿಯಾಗಿ ಜಾರಿಗೆ ತರಲು ಮುಖ್ಯ ಪ್ರತಿಪಕ್ಷಗಳೊಂದಿಗೆ ಸಂಪರ್ಕ ಇರಿಸಿಕೊಳ್ಳುವುದು ಅಗತ್ಯವಾದೀತು ಎಂದು ಸೂಚಿಸಿದ್ದರು. ಜವಹರಲಾಲರು ಈ ಸಲಹೆಯನ್ನು ಸರಿಯಾದ ರೀತಿಯಲ್ಲಿ ಸ್ವೀಕರಿಸಿದರು. ಕಾಲಕಾಲಕ್ಕೆ ಪ್ರಮುಖ ಪ್ರತಿಪಕ್ಷಗಳ ನಾಯಕರನ್ನು ಕರೆದು ನಿಕಟಸಂಪರ್ಕ ವಿಚಾರವಿನಿಮಯಗಳನ್ನು ಆರಂಭಿಸಿದರು. ಕಿಸಾನ್ ಮಜ್ದೂರ್ ಪ್ರಜಾಪಕ್ಷ ಒಂದು ಮುಖ್ಯ ಪ್ರತಿಪಕ್ಷ, ಅದರ ನಾಯಕ ಜೆ.ಬಿ. ಕೃಪಲಾನಿಯವರು ಒಂದು ವರ್ಷದ ಹಿಂದೆ ತಾನೇ ಕಾಂಗ್ರೆಸ್ಸನ್ನು ಬಿಟ್ಟಿದ್ದರು. 1952ರಲ್ಲಿ ಚುನಾವಣೆಗೆ ನಿಂತರು. ಆಗ, ಜವಹರಲಾಲರು, "ವಿಶಾಲ ದೃಷ್ಟಿಯುನ್ನು ತಳೆದರೆ, ಕೃಪಲಾನಿಯುನ್ನು ವಿರೋಧಿಸದಿರುವುದೇ ಒಳ್ಳೆಯದು. ಇದರಿಂದ ನಮ್ಮ ದೃಷ್ಟಿ ವೈಶಾಲ್ಯದ ಬಗ್ಗೆ ಸದಭಿಪ್ರಾಯ ಮೂಡಿ ನಮ್ಮ ಶಕ್ತಿ ವರ್ಧಿಸುತ್ತದೆ" ಎಂದು ತಿಳಿಯ ಹೇಳಿದ್ದರು, ಇದರಿಂದ ಕೃಪಲಾನಿಯವರಿಗೆ ಅನುಕೂಲವಾಯಿತು, ಅಷ್ಟೇ ಅಲ್ಲ ಕಾಂಗ್ರೆಸ್ ಪಕ್ಷಕ್ಕೂ ಸರ್ಕಾರಕ್ಕೂ ಒಳ್ಳೆಯದಾಯಿತು, ಪ್ರಧಾನಮಂತ್ರಿಗಳೂ ಅವರ ಸಚಿವ ಸಂಪುಟದವರೂ ಮುಂದೆ ಹೆಜ್ಜೆ ಇಟ್ಟು ಪ್ರತಿಪಕ್ಷಗಳೊಂದಿಗೆ ನಿಕಟ ಸಂಪರ್ಕವನ್ನು ಬಾಂಧವ್ಯವನ್ನು ಕುದುರಿಸಬೇಕು, ಸರ್ಕಾರ ಸಲೀಸಾಗಿ ನಡೆಯಲು ಇದು ಸಹಾಯಕ. ಇದರಿಂದ ಜನಸೇವೆಯ ಗುರಿ ಸುಲಭವಾಗಿ ಸಾಧಿತವಾಗುತ್ತದೆ. ಹಾಗೆಂದರೆ, ಪ್ರತಿಪಕ್ಷ ಏನೂ ಮಾಡದೆ ಸುಮ್ಮನಿರಬೇಕು ಎಂದಲ್ಲ. ಜನರ ಹಿತಸಾಧನೆ ಆಗುವ ರೀತಿಯಲ್ಲಿ ಕೆಲಸ ಮಾಡಬೇಕು.

ಧಾರ್ಮಿಕ ಬೋಧೆಗಳ ಆಚರಣೆ ಹೇಗೆ ?

ನಾವು ಬಲ್ಲಂತೆ ಜೆ.ಸಿ. ಕುಮಾರಪ್ಪ ಹುಟ್ಟಿನಿಂದ ಕ್ರೈಸ್ತರು, ಅವರ ಎಳೆತನದಲ್ಲಿಯೆ ಅವರ ತಾಯಿ ತಮ್ಮದೇ ಜೀವನ ಮಾದರಿಯಿಂದ ಅವರಿಗೆ ಕ್ರೈಸ್ತಮತವನ್ನು ತಿಳಿಸಿಕೊಟ್ಟರು, ಅವರು ಬರೆಯುತ್ತಾರೆ, "ತನ್ನ ಶ್ರದ್ಧಾಭಕ್ತಿ, ನೆರೆಹೊರೆಯವರ ಬಗ್ಗೆ

ಸಹಾನುಭೂತಿ ಪ್ರೀತಿ, ಇವುಗಳನ್ನು ಆಕೆ ತನ್ನ ನಮ್ರ ಸೇವೆಯ ಮೂಲಕವೇ ವ್ಯಕ್ತಪಡಿಸುತ್ತಿದ್ದರು, ಕಷ್ಟದಲ್ಲಿರುವವರಿಗೆ ಕೈಲಾದಷ್ಟು ಸಹಾಯಮಾಡುತ್ತಿದ್ದರು. ತತ್ವಬೋಧೆಯ ಅನೇಕ ಉದ್ಗ್ರಂಥಗಳು ಮನಸ್ಸಿನ ಮೇಲೆ ಮಾಡಬಹುದಾದುದಕ್ಕಿಂತ ಮಿಗಿಲಾದ ಪ್ರಭಾವವನ್ನು ಆಕೆಯ ಬದುಕು ಕಾರ್ಯಗಳೇ ಬೀರಿದವು. ಆಕೆ ಮತಧರ್ಮವನ್ನು ಕಲಿಸುತ್ತಿದ್ದ ವಿಧಾನ ಸರಳ ಹಾಗೂ ವಿಶಿಷ್ಟ. ಆಕೆ ಬಡವರಿಗೆ ಸಹಾಯಮಾಡಲೆಂದು ನಿಧಿ ಶೇಖರಿಸುತ್ತಿದ್ದರು, ಕಾಣಿಕೆ ಸಂಗ್ರಹಿಸುತ್ತಿದ್ದರು. ಚೀನಾ ಕ್ಷಾಮಪೀಡಿತರಿಗಾಗಿ ತನ್ನ ಮಗನಿಂದಲೇ 50 ರೂ. ವಸೂಲು ಮಾಡಿದ್ದೂ ಅದರಲ್ಲಿ ಸೇರಿತ್ತು, ಇದು ಅವರಿಗೆ ಮನೆಯಲ್ಲಿ ಸಿಕ್ಕ ತರಬೇತಿ.

ಇದರಿಂದ ಕುಮಾರಪ್ಪ ಬೆಳೆಸಿಕೊಂಡ ಪರಿಕಲ್ಪನೆ, ದೇವರ ಬಗ್ಗೆ ಪ್ರೀತಿಯನ್ನು, ಅಗತ್ಯವಿದ್ದವರ ಸೇವೆಯಲ್ಲಿ ಬದುಕಿ ವ್ಯಕ್ತಪಡಿಸಬೇಕು ಎಂದು, ಏಸುಸ್ವಾಮಿಯ ಜೀವನೋದ್ದೇಶವೆಂದರೆ, ಬಾಳಿನ ಬಾಹ್ಯ ನಿಯಂತ್ರಣದಿಂದ ನಾವೇ ನಮ್ಮ ಅಂತರಾತ್ಮ ವಿಧಿಸುವ ಶಿಸ್ತಿಗೆ ಒಳಗಾಗುವುದರ ಮೇಲೆ ಒತ್ತುಕೊಡುವುದು. ಇದರಿಂದ ಭೋಗಲೋಲುಪತೆಗೆ ಬದಲಾಗಿ, ಆಸೆಗಳ ಮೇಲೆ ನಿಯಂತ್ರಣ ನಮಗೆ ಲಭಿಸುತ್ತದೆ. ಏಸುವಿಗೆ ನಿಷ್ಠರು ಎಂದು ಹೇಳಿಕೊಳ್ಳುವ ಪಾಶ್ಚಿಮಾತ್ಯ ಜನರು ಆಸೆಗಳನ್ನು ಹೆಚ್ಚಿಸಿಕೊಂಡು ಅವುಗಳನ್ನು ತೃಪ್ತಿಗೊಳಿಸಿಕೊಳ್ಳುವುದರಲ್ಲೆ ನಿರತರಾಗಿರುತ್ತಾರೆ. ಅದು ಏಸುವಿನ ಬೋಧನೆಗೆ ವಿರೋಧವಾದುದು ಎಂದು ಅವರಿಗೆ ಬೇಸರ, ಏಸು ಹೇಳಿದ್ದು "ನಿಮ್ಮಲ್ಲಿ ಇರುವುದನ್ನೆಲ್ಲ ಕೊಟ್ಟು ಬಿಡಿ, ಬಡವರಿಗೆ ಹಂಚಿಬಿಡಿ". ಶ್ರೀಮಂತರಿಗೆ ಮಾತ್ರವಲ್ಲ, ಇಲ್ಲದವರಿಗೆ ಕೊಡಲು ಏನಾದರೂ ಇರುವ ಪ್ರತಿಯೊಬ್ಬನಿಗೂ ಈ ಮಾತು ಅನ್ವಯ. ಇವೆಲ್ಲ ಉನ್ನತ ಆದರ್ಶಗಳು, ವ್ಯವಹಾರಸಾಧ್ಯವಲ್ಲ ಎಂದು ಅಸಡ್ಡೆ ಮಾಡಬಹುದು. ಆದರೆ ಏಸುಸ್ವಾಮಿಯೆ ತನ್ನ ಜೀವನದಲ್ಲಿಯೇ ಮೇಲುಪಂಕ್ತಿ ಹಾಕಿಕೊಟ್ಟ. ಪುರೋಹಿತನ ಆಳೊಬ್ಬ ಅವನನ್ನು ಬಂಧಿಸಲು ಬಂದ, ಆದರೆ ಏಸು ಏನೂ ವಿರೋಧ ತೋರದೆ, ಆ ಆಳಿನ ಕಿವಿಯ ಗಾಯಕ್ಕೆ ಚಿಕಿತ್ಸೆ ಮಾಡಿದ. ಆಳು ಏಸುವನ್ನು ಹೊಡೆದ. ಏಸು ಏನು ವಿರೋಧಿಸದೆ ಆ ಆಳಿಗೆ ಒಳಿತಾಗಲಿ ಎಂದು ಪ್ರಾರ್ಥಿಸಿದ. ಏಸುವನ್ನು ಶಿಲುಬೆಗೆ ಏರಿಸಿದಾಗ ಕೂಡ, ಆತ ಅವರನ್ನು ಕ್ಷಮಿಸಿ ಎಂದು ಮೊರೆಯಿಟ್ಟ. ಏಸುವಿನ ಶಿಷ್ಯರು ನಾವು "ದೇವರೇ ನಾನು ಪಾಪಿ, ನನ್ನ ಮೇಲೆ ದಯತೋರು" ಎಂದು ಬೇಡುತ್ತೇವೆ.

ನಮ್ಮ ವಿಚಾರ ಏನೇ ಇರಲಿ, ನಾವು ಎಷ್ಟೇ ಒಳಿತನ್ನು ಆಲೋಚಿಸಲಿ, ಅದಾವುದೂ ನಮ್ಮ ಆಧ್ಯಾತ್ಮಿಕತೆಯ ಸೀಮೆ ಆಗುವುದಿಲ್ಲ, ಏಸುವನ್ನು ನಂಬುವವರು ಏಸುವಿಗೆ ಆದ ದರ್ಶನವೇ ಅಖೈರು ಎಂದು ಭಾವಿಸಿದರೆ, ಅದು ಆ ಸ್ವಾಮಿಗೆ ಅನ್ಯಾಯಮಾಡಿದಂತೆ. ಇನ್ನೂ ಸತ್ಯಶೋಧನೆಗೆ ಅವಕಾಶ ಇದ್ದೇ ಇದೆ. ಏಸು ಅವತರಿಸಿದಾಗ, ಯಹೂದಿಗಳು ಅಜ್ಞಾನಿಗಳಾಗಿದ್ದರು, ಅಲ್ಪಬುದ್ಧಿಯವರಾಗಿದ್ದರು. ನಾಜಿಗಳು ಯಹೂದಿಗಳಿಗಿಂತ ತಾವು ಮೇಲು ಎಂಬ ಭಾವನೆ ಹೊಂದಿದ್ದಂತೆ, ಆ ಯಹೂದಿಗಳೂ ಹೊಂದಿದ್ದರು. ಅಲ್ಲದೆ ಅವರಿಗೆ ಹಿಂಸೆಯ ಪರಂಪರೆ ಬೇರೆ ಇತ್ತು, ಏಸುವಿನ ಅನುಯಾಯಿಗಳು ಬಹುಪಾಲು ಬೆಸ್ತರು. ಅವರಿಗೆ ಸತ್ಯಸಾಕ್ಷಾತ್ಕಾರವಾದಾಗ, ಮಹತ್ತರ ವಿಷಯಗಳು ಕಾಣಿಸಿಕೊಳ್ಳುವುವು ಎಂದು ಏಸು ಅವರಿಂದ ಬೀಳ್ಕೊಳ್ಳುವಾಗ ಹೇಳಿದ.

ಹಾಗಾಗಿ ಏಸು ತೋರಿದ ಹಾದಿಯಲ್ಲಿ ನಡೆಯುವುದು ಆ ಜನರ ಕರ್ತವ್ಯವೇ ಆಯಿತು, ದುರದೃಷ್ಟಕರವೆಂದರೆ, ಚರ್ಚುಗಳು ತಾವು ಹೇಳಿದ್ದೇ ಆಖೈರು, ಎಲ್ಲರ ಜೀವನ ವಿಧಾನವನ್ನು ನಿರ್ಧರಿಸುವ ಅಧಿಕಾರ ತಮ್ಮದೇ ಎಂದುಕೊಳ್ಳುತ್ತವೆ. ಇದರ ಪರಿಣಾಮ ಏಸುವಿನಿಂದ ದೂರ ದೂರ ಸರಿದದ್ದು ಎನ್ನುತ್ತಾರೆ ಕುಮಾರಪ್ಪ. ಏಸುವಿಗೆ ವಿರುದ್ಧವಾಗಿ ನಡೆದುಕೊಳ್ಳುವುದಕ್ಕೆ ಯೂರೋಪಿನ ರಣರಂಗಗಳೇ ಸಾಕ್ಷಿ. ವಿಧವೆಯರ ವಿರುದ್ಧ ಕೈಎತ್ತುವುದು, ನೆರೆಹೊರೆಯವರೊಡನೆ ಜಗಳ, ಯುದ್ಧ ಎಲ್ಲವೂ ಏಸುವಿನ ಬೋಧೆಗಳಿಗೆ ತದ್ವಿರುದ್ಧ.

ಅನ್ಯಧರ್ಮಗಳ ಬಗ್ಗೆ ಹಾಗೂ ಅವುಗಳ ಅನುಯಾಯಿಗಳ ಬಗ್ಗೆ ಏಸು ಯಾವತ್ತೂ ಅಸಹನೆಯನ್ನು ಬೋಧಿಸಲಿಲ್ಲ. ವಾಸ್ತವವಾಗಿ ಅತ್ಯುತ್ಸಾಹಿ ಯಹೂದಿಗಳು ಅಲ್ಪ ದೃಷ್ಟಿಯವರು. ಅವರ ಬಗ್ಗೆ ಆತನಿಗೆ ತುಂಬ ಅಸಂತೋಷ. ಆತ ಯಹೂದಿಗಳಿಗೆ, ಫಾರಸಿಗಳಿಗೆ ಹೇಳಿದ. "ನೀವು ಒಬ್ಬನನ್ನು ಮತಾಂತರಗೊಳಿಸಲು ಸಮುದ್ರ ಭೂಮಿಗಳನ್ನೆಲ್ಲ ಒಂದು ಮಾಡುತ್ತೀರಿ. ಆತ ಮತಾಂತರಗೊಂಡಮೇಲೆ ಆತ ನಿಮಗಿಂತ ಎರಡುಪಟ್ಟು ನಾರಕಿಯಾಗುತ್ತಾನೆ." ಏಸು ಎಂದೂ ಪ್ರತ್ಯೇಕತೆಯನ್ನು ಬೋಧಿಸಲಿಲ್ಲ. "ನಾನು ಹೇಳುತ್ತೇನೆ. ಜನ ಪೂರ್ವದಿಂದ ಬರುತ್ತಾರೆ. ಪಶ್ಚಿಮದಿಂದ ಬರುತ್ತಾರೆ. ಸ್ವರ್ಗದಲ್ಲಿ ಅಬ್ರಹಾಂ, ಐಸಾಕ್ ಮತ್ತು ಜೇಕಬ್‌ರ ಜೊತೆಯಲ್ಲಿ ಕುಳಿತುಕೊಳ್ಳುತ್ತಾರೆ. ಆದರೆ ರಾಜ್ಯದ ಮಕ್ಕಳನ್ನು ಹೊರಗೆ ಕಳಿಸಲಾಗುವುದು." ಎಂದ. ಏಸು ಸ್ವಾಮಿ ಯಹೂದಿಯಲ್ಲ ದವರಿಗೆ, ಆ ಕಾಲದಲ್ಲಿ ಹರಿಜನರಂತಿದ್ದವರಿಗೆ ಆದರದ ಸ್ಥಾನವಿತ್ತು.

ಕುಮಾರಪ್ಪ ಹುಟ್ಟಿನಿಂದ ಕ್ರೈಸ್ತರು, ಆದರೆ ತಮ್ಮ ವಿಶ್ಲೇಷಣೆಯಲ್ಲಿ ರಾಗ,ದ್ವೇಷ ರಹಿತರಾಗಿದ್ದರು. "ಕ್ರಿಸ್ತಧರ್ಮ ತಾನೇ ಶ್ರೇಷ್ಠ ಎಂದು ಹೇಳಿಕೊಳ್ಳುವಂತಾಗಿದೆ. ಸುಖಲೋಲುಪವಾಗಿದೆ. ಸ್ವಾರ್ಥಿ ಆಗಿದೆ, ವ್ಯಕ್ತಿಪ್ರಧಾನ ಮತವಾಗಿದೆ. ಸ್ವಾರ್ಥಸಾಧಕವಾಗಿದೆ. ಆದರೆ ಏಸುವಿನ ಧರ್ಮ ಬೆಳೆಯಬೇಕಾದರೆ, ಭಾರತದಲ್ಲಿ ಹಿಂದೂಧರ್ಮ ಬೆಳೆದಿರುವ ಹಾಗೆ, ಸಾಮೂಹಿಕ ಸಮಾಜ ವ್ಯವಸ್ಥೆಯ ಹಿನ್ನಲೆ ಪಡೆದುಕೊಳ್ಳಬೇಕಾಗಿದೆ. ಉದಾಹರಣೆಗೆ ಜಂಟಿ ಕುಟುಂಬ ವ್ಯವಸ್ಥೆಯನ್ನೇ ನೋಡಿ, ಅದರಲ್ಲಿ ಅರ್ಹರು-ಅನರ್ಹರು, ಬಲ್ಲಿದರು-ಬಡವರು, ಸಮರ್ಥರು-ಅಸಮರ್ಥರು ಎಲ್ಲರೂ ಒಟ್ಟಿಗೆ ಜೀವಿಸುತ್ತಾರೆ. ಒಂದೇ ಸಂಪತ್ತನ್ನು ಹಂಚಿಕೊಳ್ಳುತ್ತಾರೆ. ಆ ವ್ಯವಸ್ಥೆಯಲ್ಲಿ ಕೊರತೆಗಳು ಇಲ್ಲದೆ ಇಲ್ಲ. ಆದರೆ ಅದು ನಿಸ್ಸಂದೇಹವಾಗಿಯೂ, ತನ್ನಂತೆ ಪರರನ್ನು ಬಗೆಯುವ ಪ್ರಯತ್ನ. ಮತ್ತು ಮುಸಲ್ಮಾನರಲ್ಲಿ, ಕರಿಯವ, ಬಿಳಿಯವ ಕಂದು ಬಣ್ಣದವ, ರಾಜ ರೈತ ರಂಕ ಇತ್ಯಾದಿ ಏನೂ ಇಲ್ಲ. ಎಲ್ಲರೂ ಪ್ರಜಾಪ್ರಭುತ್ವ ಪಾಲಿಸುತ್ತಾರೆ. ಕ್ರೈಸ್ತ ಧರ್ಮದ ಮೇಲು ಕೀಳುಗಳನ್ನು ಇದು ನಾಚಿಸುತ್ತದೆ. ಭಾರತದಲ್ಲಿ ಇದೇನೂ ಆಶ್ಚರ್ಯವಲ್ಲ. ಏಸು ಹೇಳಿದ ಬಡತನಕ್ಕೆ (ಸರಳತೆ) ಇಲ್ಲಿ ಆದರವಿದೆ, ಆ ರೀತಿಯಲ್ಲಿ ಚರ್ಚುಗಳು ನಡೆಯಲಾರವು, ಇದೆಲ್ಲವೂ ಚರ್ಚುಗಳು ಏಸುವಿನಿಂದ ಎಷ್ಟು ದೂರಕ್ಕೆ ಸರಿದಿವೆ ಎಂಬುದಕ್ಕೆ ದಿಕ್ಸೂಚಿ. ಭಾರತೀಯ ಸಂಸ್ಕೃತಿಯಲ್ಲಿ ಏಸುವಿನ ಪರಿಶುದ್ಧ ಧರ್ಮಪ್ರಸಾರಕ್ಕೆ ಅವಕಾಶವಿದೆ. ಆದರೆ ಆಧುನಿಕ ಕ್ರೈಸ್ತ ಮತಕ್ಕಲ್ಲ." ಕುಮಾರಪ್ಪನವರ ಈ ಮಾತು ಅವರ ರಾಗದ್ವೇಷ ರಹಿತ ವಿಶ್ಲೇಷಣೆಗೆ ಸಾಕ್ಷಿ.

ಜನತೆ ಮತ್ತು ರಾಷ್ಟ್ರಗಳ ನಡುವೆ ಒಗ್ಗಟ್ಟು ಮೂಡಿಸಲು ಪಶ್ಚಿಮದಲ್ಲಿ ನಾಲ್ಕು ಸಂಘಟನೆಗಳು ಕೆಲಸ ಮಾಡುತ್ತಿವೆ ಎನ್ನುತ್ತಾರೆ ಕುಮಾರಪ್ಪ.

ಅವುಗಳೆಂದರೆ : -

1. ಸ್ನೇಹ ಸಮಾಜ (Society of Friends)
2. ಶಾಂತಿ ಪ್ರತಿಜ್ಞೆಯ ಸಂಘ (Peace Pledge Union)
3. ಅಂತಾರಾಷ್ಟ್ರೀಯ ಯುದ್ಧ ವಿರೋಧಿಗಳು (War Resisters International)
4. ಸಾಮರಸ್ಯದ ಸ್ನೇಹಕೂಟ (Fellowship of Reconciliation)

ಯಾವ ಮತಧರ್ಮವೂ ಮೇಲರಿಮೆ ಹೊಂದಿರಬಾರದು. ಅದಕ್ಕೆ ಬದಲಾಗಿ, ಸಾಮರಸ್ಯ ಮತ್ತು ಸಹನೆಗಳಿಗೆ ಅವಕಾಶ ಮತ್ತು ಸ್ಥಳ ಇರಬೇಕು. ಎಲ್ಲರ ಸರ್ವಶ್ರೇಷ್ಠ ಹಿತದೃಷ್ಟಿ ನಮ್ಮಲ್ಲಿ ಇದ್ದರೆ, ನಾವು ಹಿಂದಕ್ಕೆ ಹೆಜ್ಜೆ ಇಡಲು ಕಾಲ ಮಿಂಚಿಲ್ಲ ಎಂದು ಪ್ರತಿಪಾದಿಸುತ್ತಾರೆ. ಅಂತಿಮವಾಗಿ, ಅವರು ಹೇಳುತ್ತಾರೆ. ಮಾನವರಲ್ಲಿ ಸದ್ಭಾವನೆ ಬೆಳೆಸಬೇಕಾದರೆ, ನಾವು ಭೇದಗಳನ್ನು ಕಡಿಮೆ ಮಾಡಿಕೊಂಡು ಅಭಿಪ್ರಾಯ ಸಾಮರಸ್ಯವನ್ನು ಹೆಚ್ಚಿಸಿಕೊಳ್ಳಬೇಕು.

ಆಧುನಿಕ ಚರ್ಚುಗಳು ಹಾಗೂ ಬಿಷಪ್‌ರು ಸಾಗುತ್ತಿರುವ ದಿಸೆಯ ಬಗ್ಗೆ ಬರೆಯುತ್ತ, ಕುಮಾರಪ್ಪ ಅದನ್ನು "ನವಪರ್ವತ ಸಂದೇಶ" ಎಂದರು. ಏಸು ಸ್ವಾಮಿ ಸರಳ ವ್ಯಕ್ತಿ. ಪ್ರಪಂಚದ ವ್ಯವಹಾರಗಳನ್ನು ಅರಿಯದವ. ನಮ್ಮ ವೈರಿಗಳನ್ನು ಪ್ರೀತಿಸಿ, ನಮ್ಮನ್ನು ದ್ವೇಷಿಸಿ ಗಾಸಿ ಮಾಡುವವರಿಗೂ ಒಳ್ಳೆಯದನ್ನು ಮಾಡಿ ಎಂದು ಬೋಧಿಸಿದ. ಬಲ ಕೆನ್ನೆಗೆ ಹೊಡೆದರೆ ಎಡಕೆನ್ನೆಯನ್ನು ತೋರಿಸು ಎಂದ. "ಆ ಕಾಲದಲ್ಲಿ ಏಸುಸ್ವಾಮಿಗೆ, ಯಾರ್ಕ್‌ನ ಆರ್ಚ್ ಬಿಷಪ್ ಡಾ॥ ಸಿರಿಲ್ ಗಾರ್ಬೆಟ ಅವರ ಪದತಲದಲ್ಲಿ ಕುಳಿತು ಆಧುನಿಕ ರಾಜಕೀಯ ಕೌಶಲವನ್ನು ಕಲಿಯುವ ಅವಕಾಶ ಇರಲಿಲ್ಲ" ಎಂದು ಕುಮಾರಪ್ಪ ಹೇಳುತ್ತಾರೆ. ಆರ್ಚ್ ಬಿಷಪ್ ಕುರಿತ ತಮ್ಮ ಟೀಕೆಗೆ ಸಮರ್ಥನೆಯಾಗಿ, ಅವರು ಯಾರ್ಕ್ ದೀಕ್ಷಾಂತ ಸಮಾರೋಹದಲ್ಲಿ ಆರ್ಚ್ ಬಿಷಪ್ ಹೇಳಿದ ಮಾತನ್ನು ಉದಾಹರಿಸುತ್ತಾರೆ.

"ಶಸ್ತ್ರ ಹಿಡಿದ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ರಾಜ್ಯವೂ ಶಸ್ತ್ರ ಹಿಡಿಯಬೇಕು. ದೌರ್ಬಲ್ಯ ಮತ್ತು ಸಾಧುತನ ಆಕ್ರಮಣಕಾರನಿಗೆ ಪ್ರೋತ್ಸಾಹಕ. ಪ್ರತಿಭಟನೆ ಮತ್ತು ವಾದ ಆತನ ತಿರಸ್ಕಾರವನ್ನು ಕೆರಳಿಸುತ್ತದೆ. ಅವುಗಳ ಹಿನ್ನಲೆಯಲ್ಲಿ ಶಸ್ತ್ರ ಸನ್ನದ್ಧರಾಗಿ ಜನ ಕಾದಲು, ಕಷ್ಟ ಅನುಭವಿಸಲು, ಜೀವ ತೆರಲು ಸಿದ್ಧರಾಗಿ ಇರಬೇಕಾಗುತ್ತದೆ. ಹಾಗಲ್ಲದೆ ತಮ್ಮ ದೇಶದ ಕೊಲೆಗೆ ಪ್ರಜೆಗಳನ್ನು ದಾಸ್ಯರಾಗಿಸುವುದಕ್ಕೆ ತಣ್ಣಗೆ ತಲೆಬಾಗುವುದಲ್ಲ. ಆಕ್ರಮಣದ ವಿರುದ್ಧ ಎಲ್ಲ ಅಗತ್ಯ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಪ್ರಭುತ್ವಕ್ಕೆ ಬೆಂಬಲ ನೀಡುವಾಗ, ಯಾವುದೇ ರಾಷ್ಟ್ರದ ಬಗ್ಗೆ ದ್ವೇಷ ಇಲ್ಲದೆ ಮಾಡೋಣ." ಆರ್ಚ್ ಬಿಷಪ್‌ರ ಕೊನೆಯ ವಾಕ್ಯ ಎಡಕೆನ್ನೆ ತೋರಿಸು ತತ್ವಕ್ಕೂ ಅಣು ಬಾಂಬ್ ತತ್ವಕ್ಕೂ ತಳಕು ಹಾಕುವ ಐನಾತಿ ತಂತ್ರ. ಇಂಥ ನಾಯಕರಿಂದ ನಮ್ಮನ್ನು ದೇವರು ಕಾಪಾಡಲಿ ಎಂದು ಕುಮಾರಪ್ಪ ಟೀಕಿಸುತ್ತಾರೆ.

ಗಾಂಧೀಜಿ ಯುದ್ಧಕ್ಕೆ ಬದಲಾಗಿ ಪ್ರೀತಿಯ ಸಂದೇಶವನ್ನು ಮುಂದಿಟ್ಟರು. ಹಾಗೆ ಮಾಡಿದ್ದು ಸತ್ಯಾಗ್ರಹದ ವ್ಯಾವಹಾರಿಕ ರೀತಿಯಲ್ಲಿ. ಸತ್ಯಾಗ್ರಹವನ್ನು ವಿಶ್ವವ್ಯಾಪಕ ಪ್ರಮಾಣದಲ್ಲಿ ಅನ್ವಯಿಸಬೇಕಾದರೆ, ವಿವರಗಳನ್ನೆಲ್ಲ ಲಕ್ಷಿಸಬೇಕು. ಏನಾದರೂ ಅದು ಇಂದಿಗೆ ಅಗತ್ಯ. ಗಾಂಧೀಜಿಯ ಸತ್ಯಾಗ್ರಹ ಮತ್ತು ಅಹಿಂಸೆಯ ಪರಿಕಲ್ಪನೆಯನ್ನು ನಂಬುವವರಿಗೆ, ಹೆಚ್ಚಿನ ಮನವಿ ಅನಗತ್ಯ. ಕುಮಾರಪ್ಪನವರು ದೃಢವಾಗಿ ಹೇಳಿದರು. "ರಾಜಕೀಯದಲ್ಲಿ ಪ್ರವೇಶಿಸುವುದಿಲ್ಲ ಎಂಬ ಷರತ್ತಿನ ಮೇಲೆ, ಬ್ರಿಟಿಷ್ ಸರ್ಕಾರದೊಡನೆ ಒಪ್ಪಂದ ಮಾಡಿಕೊಂಡು ಇಲ್ಲಿಗೆ ಕೆಲವು ವಿದೇಶಿ ಮಿಷನರಿ (ಕ್ರೈಸ್ತ ಪ್ರಚಾರಕ) ಮಿತ್ರರು ಬಂದಿದ್ದಾರೆ. ನಾನು ಬಲ್ಲೆ. ಆದರೆ ಪ್ರವೇಶಿಸುವುದಿಲ್ಲ ಎಂಬುದಕ್ಕೆ ಅರ್ಥ ತಾವು ಮೂಲಭೂತ ಎಂದು ಭಾವಿಸಿರುವ ತತ್ವದ ಬಗ್ಗೆ ರಾಜೀ ಮಾಡಿಕೊಳ್ಳುವುದು ಎಂದಾದರೆ, ನಾನು ಬಿನ್ನವಿಸುತ್ತೇನೆ. ತಮ್ಮ ಜೀವ ತೆತ್ತಾದರೂ ಸರಿಯೆ, ಅಹಿಂಸಾ ವಿಧಾನಗಳನ್ನು ಅನುಸರಿಸಬೇಕಾದ ಅಗತ್ಯವನ್ನು ತಮ್ಮ ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವಂತೆ ಅವರು ಭಗವಂತನಲ್ಲಿ ಪ್ರಾರ್ಥಿಸುವುದು ಅವರ ಕರ್ತವ್ಯ. ಅವರ ಕೆಲಸ ರಾಷ್ಟ್ರೀಯ ಚಳುವಳಿಯ ದಿಕ್ಕಲ್ಲೆ ಈಜುವುದಕ್ಕಿಂತ, ಕಠಿಣ ಎಂಬುದನ್ನು ನಾನು ಬಲ್ಲೆ. ಆದರೆ, ಜನ ನಿಮ್ಮ ಉತ್ತಮ ಕಾರ್ಯವನ್ನು ನೋಡಿ ಸ್ವರ್ಗದಲ್ಲಿರುವ ನಿಮ್ಮ ಪಿತನನ್ನು ಹೊಗಳುವಂತೆ, ನಿಮ್ಮ ಬೆಳಕನ್ನು ಚೆಲ್ಲಲು ಮಹಾಕಾರ್ಯ ಮಹದವಕಾಶವನ್ನು ನೀಡುತ್ತದೆ ಎನ್ನುವುದು ಖಂಡಿತ." ಕುಮಾರಪ್ಪನವರು ಎಲ್ಲ ಕ್ರಿಶ್ಚಿಯನ್ ಕಾರ್ಯಕರ್ತರಿಗೂ, ಪ್ರಚಾರಕರಿಗೂ ತಮ್ಮ ವಿನಂತಿಯನ್ನು ಹೀಗೆ ಮುಗಿಸುತ್ತಾರೆ. "ಸರ್ಕಾರ ಕಾನೂನು ಮತ್ತು ಶಾಂತಿ ಪಾಲನೆಯ ಪ್ರಯತ್ನದಲ್ಲಿ ಮಾನವೀಯ ಮಾರ್ಗಗಳನ್ನು ಅನುಸರಿಸುವಂತೆ ಮನವೊಲಿಸಲು, ಪ್ರತಿಯೊಬ್ಬ ಕ್ರೈಸ್ತನೂ ಆತ ದೇಶೀಯನಾಗಲಿ, ವಿದೇಶೀಯನಾಗಲಿ, ಸಕಲ ಯತ್ನಗಳನ್ನು ಮಾಡುತ್ತಾನೆ ಎಂದು ನನಗೆ ಭರವಸೆಯಿದೆ" ಕುಮಾರಪ್ಪ ಹೇಳಿದ್ದು ಕ್ರೈಸ್ತರಿಗೆ ಮಾತ್ರವಲ್ಲ. ಇತರ ಧರ್ಮೀಯರಿಗೂ ಸಲ್ಲುತ್ತದೆ." ಬೈಬಲ್ ಹೇಳುವುದು ನಿಮಗೆ ನೆನಪಿಲ್ಲವೇ, ನೀವು ನೋಡಿರುವ ನಿಮ್ಮ ಸೋದರರನ್ನೇ ನೀವು ಪ್ರೀತಿಸಲಾಗದಿದ್ದರೆ, ನೀವು ನೋಡದೆ ಇರುವ ದೇವರನ್ನು ಹೇಗೆ ಪ್ರೀತಿಸಬಲ್ಲಿರಿ? ಮಾನವರಲ್ಲಿ ದೇವರನ್ನು ಕಾಣಲು ನೀವು ಆರಂಭ ಮಾಡಿದ ಕ್ಷಣದಿಂದಲೇ ನಿಮ್ಮನ್ನು ನಾನು ಧಾರ್ಮಿಕರು ಎಂದು ಹೇಳುತ್ತೇನೆ." ಸ್ವಾಮಿ ವಿವೇಕಾನಂದರು ವೇದಾಂತದ ಬಗ್ಗೆ ಮಾತನಾಡುತ್ತ ಹೇಳಿದ ಮಾತು ಇದು. ಇದೇ ಕುಮಾರಪ್ಪನವರ ನಿಲುವೂ ಸಹ. ರಾಜಕೀಯ, ಸಾಮಾಜಿಕ, ಧಾರ್ಮಿಕ, ಕೋಮುವಾರು ಹಾಗೂ ಆರ್ಥಿಕ ಯಾವುದೇ ಬಗೆಯ ಶೋಷಣೆ ಇಲ್ಲದಂಥ ಪ್ರತಿಂಯೊಬ್ಬನೂ ಭಿನ್ನ ಭಿನ್ನ ವಿಚಾರವಾದಿಂಯಾಗಿದ್ದರೂ ಭಿನ್ನ ಭಿನ್ನ ನಂಬಿಕೆಯವರಾಗಿದ್ದರೂ, ಎಲ್ಲರೂ ಪರಸ್ಪರ ಗೌರವ ಮತ್ತು ಕಾಳಜಿಗಳಿಂದ ಬದುಕುವಂಥ ಭಾರತದ ಕನಸು ಕುಮಾರಪ್ಪನವರದು. ಮಹಾತ್ಮ ಗಾಂಧಿಯವರ ಕೊಲೆ ಆದಾಗ, ಪೋಪ್ "ಗಾಂಧೀ ಕ್ರಿಶ್ಚಿಯನ್ ಮೌಲ್ಯಗಳ ಪ್ರತೀಕ" ಎಂದು ಶೋಕಪಟ್ಟರು.

ಆದರೆ ಗಾಂಧೀಜಿ, ಕುಮಾರಪ್ಪನವರ ನಂತರ ನಡೆಯುತ್ತಿರುವುದಾದರೂ ಏನು ? ಮನುಕುಲ ಅತ್ಯಂತ ಕ್ಷೋಭೆಯನ್ನು ಹಾದು ಹೋಗುತ್ತಿದೆ. ಎಲ್ಲೆಲ್ಲೂ ಕುಲ, ಪ್ರದೇಶ, ಜಾತಿಗಳ ನಡುವಣ ಘರ್ಷಣೆಗಳೇ. ಸ್ವಾರ್ಥ ಮತ್ತು ರಾಜಕೀಯ ಗುರಿ ಸಾಧಿಸಲು ಮತೀಯ ಭಾವನೆಗಳನ್ನು ಕೆರಳಿಸಲಾಗುತ್ತಿದೆ. ಜನರಿಗೆ ದಾರಿತಪ್ಪಿಸಿ, ಅವರು ತಮ್ಮತಮ್ಮಲ್ಲೆ ಕಾದಾಡುವಂತೆ ಶಾಸ್ತ್ರಗಳನ್ನು ಮತೀಯ ಬರೆಹಗಳನ್ನು ತಪ್ಪಾಗಿ

ಅರ್ಥೈಸಲಾಗುತ್ತಿದೆ. ಈ ಪರಿಸ್ಥಿತಿಯನ್ನು ನೋಡಿ ಗಾಂಧೀಜಿ ತುಂಬ ನೊಂದಿದ್ದರು. "ಮತಧರ್ಮದ ರಕ್ಷಣೆ ಗೂಂಡಾಗಳ ಕೈಗೆ ಹೋಗುವ ವಿಚಾರದ ವಿರುದ್ಧವೇ ನನ್ನ ಇಡೀ ಆತ್ಮ ಸಿಡಿದೇಳುತ್ತದೆ. ನಾಯಕರಿಗೆ ಬೇಕು. ಆದ್ದರಿಂದಲೇ ಗೂಂಡಾಗಳು ರಂಗಕ್ಕೆ ಬರುತ್ತಾರೆ." ಎಂದಿದ್ದರು. ಗಾಂಧೀ ಮತ್ತು ಕುಮಾರಪ್ಪ ಇಬ್ಬರದೂ ವಿಶ್ವಧರ್ಮ. ಮೋಕ್ಷಕ್ಕೆ ದಾರಿ ತೋರುವುದೇ ಧರ್ಮ. ನಿಜವಾದ ಧರ್ಮ ಹೋರಾಟದ ಕಣವಲ್ಲ. ಎಲ್ಲ ಧರ್ಮಗಳ ಸಂದೇಶವೂ ಅಹಿಂಸೆ ಮತ್ತು ವಿಶ್ವ ಭ್ರಾತೃತ್ವವೇ. ದೇವರು ಒಬ್ಬನೇ. ಅವನ ಬಳಿಸಾರಲು ದಾರಿಗಳು ಅನೇಕ. ಒಬ್ಬಾತ ತನ್ನ ಮುಕ್ತಿಗಾಗಿ ನಡೆಯುತ್ತಿರುವ ದಾರಿ ನಮ್ಮದೇ ದಾರಿಗೆ ಅಡ್ಡ ಬರದಿದ್ದರೆ, ನಾವೇಕೆ ಆತನ ದಾರಿಯ ಬಗ್ಗೆ ಕಸಿವಿಸಿಗೊಳ್ಳಬೇಕು ?

ಶ್ರೀ ರಾಮಕೃಷ್ಣ ಪರಮಹಂಸರು ಈ ಬಗ್ಗೆ ಹೇಳಿದ ಮಾತನ್ನು ಇಲ್ಲಿ ಉದಹರಿಸುವುದು ಸೂಕ್ತವಾದೀತು. "ಇತರರ ಹಾಗೆ ಅವರೂ ನೀರು ಸೇದಿಕೊಳ್ಳಲು ಬಾವಿಗೆ ಹೋಗುತ್ತಾರೆ. ಒಬ್ಬೊಬ್ಬನದು ಒಂದೊಂದು ಬಿಂದಿಗೆ ಅಥವಾ ಪಾತ್ರೆ. ಪಾತ್ರೆ ಇರುವಂತೆ ನೀರು. ಪಾತ್ರೆ ಬಗ್ಗೆ ಜಗಳವೇಕೆ ? ಎಲ್ಲದರ ನೀರೂ ಒಂದೇ."

ಪರಮ ಸತ್ಯ ದೇವರು. ಅವನಿಗೆ ಎಂಥ ಮತ ? ಆತ ಎಲ್ಲ ಮತಧರ್ಮಗಳನ್ನು ಮೀರಿದವನು. ಏರಬೇಕಾದ ಶಿಖರ ಆತ. ಏರಲು ನಾನಾಜನ ನಾನಾ ದಾರಿ ಹಿಡಿಯುತ್ತಾರೆ. ಸ್ವಲ್ಪ ದಿನಗಳ ಹಿಂದೆ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿತ್ತು. ಒಬ್ಬ ಪೂಜಾರಿ ದೇವಸ್ಥಾನದಲ್ಲಿ ಪೂಜೆ ಮಾಡಿದ ನಂತರ ಚರ್ಚಿಗೆ ಹೋಗಿ ಅಲ್ಲಿ ಪ್ರಾರ್ಥಿಸಿದನಂತೆ. ಹಾಗೆ ಮಾಡಿದ್ದು ಪಾಪ ಎಂದು ಭಾವಿಸಲಾಯಿತಂತೆ. ದೇವಸ್ಥಾನದ ಅಧಿಕಾರಸ್ಥರಿಗೆ ಸಿಟ್ಟು ಬಂದು, ಅವನನ್ನು ಕೆಲಸದಿಂದ ವಜಾ ಮಾಡಿದರಂತೆ.

ಭಗವದ್ಗೀತೆಯಲ್ಲಿ ಭಗವಾನ್ ಕೃಷ್ಣ ಹೇಳಿದ್ದಾನೆ. "ಭಿನ್ನ ಭಾವನೆಗಳೆಂಬ ಮುತ್ತುಗಳನ್ನು ಪೋಣಿಸಿದ ದಾರ ನಾನು" (ಸೂತ್ರೇ ಮಣಿಗಣಾ ಇವ). ಎಲ್ಲ ಮತಧರ್ಮಗಳಲ್ಲೂ ಆದಿ, ಅಂತ್ಯ ಒಂದೇ, ದೇವರನ್ನು ಅರಸುವುದೇ ಆದಿ, ಮೋಕ್ಷವೇ ಅಂತ್ಯ. ನಡುವೆ ಮಾತ್ರ ಹಾದಿಗಳಲ್ಲಿ ಭಿನ್ನತೆ. "ನಾವು ಬಂದಾಗ ಮತ್ತೆ ಸೇರೋಣ" ಎಂದರು ಲಿಯೋ ಟಾಲ್‌ಸ್ಟಾಯ್. ನಮ್ಮದೇ ರೀತಿಯಲ್ಲಿ ದಿವ್ಯದರ್ಶನಕ್ಕೆಳಸುವ ಹಕ್ಕು ಪ್ರತಿಯೊಬ್ಬನಿಗೂ ಇದೆ. ಕಟ್ಟಕಡೆಗೆ ನಾವೆಲ್ಲ ಹಂಚಿಕೊಳ್ಳಬೇಕಾದುದು ಅದೇ ಸತ್ಯವನ್ನು, ಶಾಶ್ವತವೂ ಅಖಂಡವೂ, ಸರ್ವಸಾಮಾನ್ಯವೂ ಆದ ಸತ್ಯವನ್ನು.

ರಾಮಕೃಷ್ಣ ಪರಮಹಂಸರ ಹಿಂದಿನವರು ಕೇಶವ ಚಂದ್ರ ಸೇನ್. ಒಂದು ಉಪನ್ಯಾಸದಲ್ಲಿ ಹೇಳಿದರು. "ಹಿಂದೆ ಇದ್ದ ಎಲ್ಲ ಧರ್ಮಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲವನ್ನು ಪೂಜಿಸುತ್ತೇನೆ. ಬೈಬಲ್, ವೇದ, ಕುರಾನ್ ಎಲ್ಲ ಪವಿತ್ರ ಗ್ರಂಥಗಳಲ್ಲೂ ನಿರ್ದಿಷ್ಟ ಪುಟಗಳಿವೆ. ಅಪರಿಮಿತ ಸಂಖ್ಯೆಯ ಪುಟಗಳು ಇನ್ನು ಬರಬೇಕಾಗಿದೆ."

ಗಾಂಧೀಜಿ ಮತ್ತು ಕುಮಾರಪ್ಪನವರ ಆಶ್ರಮಗಳಲ್ಲಿ ಪ್ರತಿನಿತ್ಯ ಸರ್ವಧರ್ಮ ಪ್ರಾರ್ಥನೆ ನಡೆಯುತ್ತಿತ್ತು. ಅದರಲ್ಲಿ ಗೀತೆ, ಕುರಾನ್, ಬೈಬಲ್ ಎಲ್ಲ ಇರುತ್ತಿತ್ತು.

ಕೊನೆಯಲ್ಲಿ, ಸ್ವಾಮಿ ವಿವೇಕಾನಂದರು ತಮ್ಮ ನಿರ್ಯಾಣದ ದಿವಸ ಹೇಳಿದ ಮಾತನ್ನು ನೆನಪಿಸಿಕೊಳ್ಳೋಣ. "ಭಾರತ ದೇವರ ಅನುಸಂಧಾನವನ್ನು ಬಿಡದೆ ನಡೆಸಿದರೆ, ಅಮರವಾಗುತ್ತದೆ. ಆದರೆ ರಾಜಕೀಯ ಮತ್ತು ಸಾಮಾಜಿಕ ಘರ್ಷಣೆಗೆ ಇಳಿದರೆ, ಅದು ಸಾಯುತ್ತದೆ."

ಪನ್ನೈ ಆಶ್ರಮ

ನಮ್ಮ ದೇಶ ನಿಜವಾಗಿಯೂ ಪ್ರಜಾತಂತ್ರ ರಾಷ್ಟ್ರವಾಗಬೇಕಾದರೆ, ತಮ್ಮ ತಮ್ಮ ಜನರ ಮೂಲಭೂತ ಅಗತ್ಯಗಳಲ್ಲಿ ಸ್ವಾವಲಂಬಿ ಆದ ಘಟಕಗಳ ಒಕ್ಕೂಟವಾಗಬೇಕು. ಪ್ರತಿಯೊಂದು ಹಳ್ಳಿಯೂ ಆಹಾರ, ಬಟ್ಟೆ, ವಸತಿ, ಶಿಕ್ಷಣ, ದೀಪ, ನೈರ್ಮಲ್ಯ, ಆರೋಗ್ಯ ಇತ್ಯಾದಿ ಅಗತ್ಯಗಳಲ್ಲಿ ಸ್ವಾವಲಂಬಿ ಆಗಬೇಕು. ತನ್ನ ಅಗತ್ಯಗಳಿಗೆ ಬೇಕಾದ ಯಾವ ಪದಾರ್ಥಗಳನ್ನು ಉತ್ಪಾದಿಸುವುದೋ ಅದನ್ನು ಹೊರಕ್ಕೆ ಕಳಿಸಬಾರದು. ಮೂಲಭೂತ ಅವಶ್ಯಕತೆಗಳಾದ ಉತ್ಪನ್ನಗಳಲ್ಲಿ ವ್ಯಾಪಾರ ಕೂಡದು. ವ್ಯಾಪಾರ ಏನಿದ್ದರೂ ಹೆಚ್ಚುವರಿ ಉತ್ಪನ್ನಗಳ ಬಗ್ಗೆ ಮಾತ್ರ. ಇದು 1951ರಲ್ಲಿ ಗ್ರಾಮೋದ್ಯೋಗ ಪತ್ರಿಕೆಯಲ್ಲಿ ಕುಮಾರಪ್ಪ ಬರೆದದ್ದು.

ಮೇಲೆ ಹೇಳಿದ ಗ್ರಾಮ ಯೋಜನೆಯ ಅನುಷ್ಠಾನದಲ್ಲಿ ಬರುವ ಅಡೆತಡೆಗಳನ್ನು ಅವರು ವಿಶ್ಲೇಷಿಸಿದರು. ನಮ್ಮ ದೇಶದಲ್ಲಿ ಎಲ್ಲ ಕಡೆ ಉತ್ಪಾದನೆ ಇದೆ. ಬಡತನವೂ ಇದೆ. ಎರಡನೆಯದಾಗಿ ಬಳಕೆ ಮತ್ತು ಸುಖ ಸೌಲಭ್ಯ ಶ್ರೀಮಂತರಿಗಷ್ಟೆ ಪರಿಮಿತ. ಅಲ್ಲದೆ ಹಳ್ಳಿಯ ಜನ ಉತ್ಪಾದಿಸುವ ಅತ್ಯವಶ್ಯಕ ವಸ್ತುಗಳಿಗೆ ಯಾವುದೇ ಬೆಲೆ ಗೊತ್ತು ಮಾಡಿದರೂ ಅದು ಭೋಗ ವಸ್ತುಗಳ ಬೆಲೆಗಿಂತ ಕಡಿಮೆಯೆ ಆಗಿರುತ್ತದೆ. ಅಂತಹ ರೀತಿ ಪ್ರಜಾತಂತ್ರಕ್ಕೆ, ಸಮಾಜಕ್ಕೆ ಸೂಕ್ತವಲ್ಲ.

ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿನ ಉತ್ಪಾದನೆಯನ್ನು ಹೇಗೆ ಯೋಜಿಸಬೇಕೆಂದರೆ, ಉತ್ಪನ್ನಗಳು ಬೇಕಾದುದನ್ನೆಲ್ಲ ಪೂರೈಸುವಂತೆ ಇರಬೇಕು. ಇದೂ ಅವರಿಗೆ ಖಂಡಿತವಾಗಿತ್ತು. ಯೋಜನೆ ಪ್ರತಿಯೊಂದು ಹಳ್ಳಿಗೂ ಅದರ ಸಂಪನ್ಮೂಲಕ್ಕೆ ತಕ್ಕಂತೆ ಇರಬೇಕು. ಅವರು ಅಂತಹ ಅಭಿವೃದ್ಧಿಯ ಒಂದು ಮಾದರಿ ಯೋಜನೆಯನ್ನು ತಯಾರಿಸಿದರು. ಅದನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲು ಬಯಸಿದರು. ಒಪ್ಪಿಗೆ ಮತ್ತು ಹಣಕಾಸಿಗಾಗಿ ಆ ಯೋಜನೆಯನ್ನು ಅಖಿಲ ಭಾರತ ಸರ್ವ ಸೇವಾ ಸಂಘಕ್ಕೆ ಸಲ್ಲಿಸಿದರು. -

ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ಒಂದು ಲಕ್ಷ ರೂಪಾಯಿ. ವಿವರ ಹೀಗಿದೆ -

200 ಎಕರೆ ಭೂಮಿ	ರೂ.	25,000-00
16 ಎತ್ತುಗಳು ಮತ್ತು 5 ಹಸುಗಳು	ರೂ.	10,000-00
ಬಾವಿ ತೋಡುವುದು	ರೂ.	7,500-00
ಅನಿರೀಕ್ಷಿತ ವೆಚ್ಚ	ರೂ.	25,00
ವಸತಿ, ಷೆಡ್ಡುಗಳು ಇತ್ಯಾದಿ	ರೂ.	25000-00
ಬಂಡವಾಳ ಇತ್ಯಾದಿ	ರೂ.	30,000-00
ಒಟ್ಟು	ರೂ.	1,00,000-00

(ಈಗ ರೂಪಾಯಿಯ ಬೆಲೆ ಸಾಕಷ್ಟು ಏರಿದೆ)

ವರ್ಧಾ-ನಾಗಪುರ ರಸ್ತೆಯಲ್ಲಿ ವರ್ಧಾದಿಂದ ಸುಮಾರು 20 ಮೈಲಿ ದೂರದಲ್ಲಿರುವ ಸೆಲ್ಡೋ ಎಂಬ ಹಳ್ಳಿಯನ್ನು ಈ ಕೇಂದ್ರಸ್ಥಾಪನೆಗಾಗಿ ಆಯ್ಕೆ ಮಾಡಲಾಯಿತು. ಅಲ್ಲಿನ ಜನಸಂಖ್ಯೆ 700. ಅದಕ್ಕೆ ಕುಮಾರಪ್ಪ ಪನ್ನೈ ಆಶ್ರಮ ಎಂದು ಹೆಸರಿಟ್ಟರು. ತಮಿಳು ಭಾಷೆಯಲ್ಲಿ ಪನ್ನೈ ಎಂದರೆ ಬೇಸಾಯ. ಕುಮಾರಪ್ಪನವರೇ ಬಾವಿ ಅಗೆಯುವುದನ್ನು ಆರಂಭಿಸಿ, ಪನ್ನೈ ಆಶ್ರಮವನ್ನು ಉದ್ಘಾಟಿಸಿದರು. ಅವರೂ, ಜೊತೆಗಾರರು ಹಳ್ಳಿಯಲ್ಲಿ ನೆಲೆಸಿ ಆಶ್ರಮದ ಕೆಲಸ ನಡೆಸುತ್ತಿದ್ದರು.

ಗಮನಾರ್ಹ ಘಟನೆ ಒಂದು ಉಂಟು. ಹಳ್ಳಿಯ ಕೆಲವರು ಗುಡಿಸಲುಗಳನ್ನು ಕಟ್ಟಲು ತಗಡು ಹಾಳೆಗಳನ್ನು ಕಾಣಿಕೆಯಿತ್ತರು. ಆದರೆ ಕುಮಾರಪ್ಪ ಅವನ್ನು ಒಪ್ಪಿಕೊಳ್ಳಲಿಲ್ಲ. ತಗಡು, ಖನಿಜೋತ್ಪನ್ನ, ಖನಿಜೋತ್ಪನ್ನಗಳನ್ನು ಪ್ರೋತ್ಸಾಹಿಸಬಾರದು ಎಂದರು. ಖನಿಜ ಇರುವುದು ಸೀಮಿತ ಪ್ರಮಾಣದಲ್ಲಿ. ಅದರ ಬಳಕೆ ಹಿಂಸೆಗೆ ಪ್ರೋತ್ಸಾಹಕ. ಲೋಹದ ತಗಡುಗಳಿಗೆ ಬದಲಾಗಿ, ಹಳ್ಳಿಯಲ್ಲೆ ತಯಾರಾದ ಹೆಂಚು ಇಟ್ಟಿಗೆಗಳನ್ನು ತಾವು ಬಳಸುವುದಾಗಿ ಹಳ್ಳಿಗರಿಗೆ ಹೇಳಿದರು. ಬಾವಿ ತೋಡುವುದು, ಮಾವಿನ ಗಿಡ ನೆಡುವುದು, ಕಾಲಕ್ರಮದಲ್ಲಿ ಹಳ್ಳಿಯವರಿಗೆ ಲಾಭಕರ ಎಂದು ಹೇಳಿದರು.

ಪನ್ನೈ ಆಶ್ರಮದಲ್ಲಿ ಒಟ್ಟು 184 ಎಕರೆ ಜಮೀನಿತ್ತು. ಆಶ್ರಮದಲ್ಲೇ ಇದ್ದು ದುಡಿಯುತ್ತಿದ್ದ ಜನರಿಗೆ ಸಮತೋಲನದ ಆಹಾರವನ್ನು ಒದಗಿಸಲು ಸೂಕ್ತವಾದ ರೀತಿಯಲ್ಲಿ ಜಮೀನಿನ ಕೃಷಿಯನ್ನು ಯೋಜಿಸಲಾಯಿತು. ಆದಷ್ಟು ಮಟ್ಟಿಗೆ ಮೂಲಭೂತ ಆಹಾರ ಅಗತ್ಯಗಳಾದ ಪಿಷ್ಟ, ಕೊಬ್ಬು, ಪ್ರೋಟೀನು, ತರಕಾರಿ ಮತ್ತು ಬಾಳೆಹಣ್ಣುಗಳನ್ನು ಅಗತ್ಯಪ್ರಮಾಣದಲ್ಲಿ ಬೆಳೆಯೋಣ, ಹೆಚ್ಚುವರಿ ಉಳಿದರೆ ನೆರೆಹೊರೆಯ ಹಳ್ಳಿಗಳಿಗೆ ಹಂಚೋಣ ಎಂದರು. ಕುಮಾರಪ್ಪ. ಗ್ರಾಮದ ಕಸದಿಂದ ಗೊಬ್ಬರ ತಯಾರಿಸಲು ಒಂದು ಎಕರೆ ಜಮೀನನ್ನು ಪ್ರತ್ಯೇಕವಾಗಿ ನಿಗದಿಮಾಡಲಾಯಿತು. ಸಮತೋಲನದ ಬೇಸಾಯ ಕುರಿತ ಸಲಹೆ ನೀಡಲು ನಾಗಪುರದ ಒಬ್ಬ ಜೀವ ರಸಾಯನ ಶಾಸ್ತ್ರಜ್ಞನ ಸೇವೆಯನ್ನು ಪಡೆದುಕೊಳ್ಳಲಾಯಿತು. ಅವಶ್ಯವಾದ ಹಾಲು ಉತ್ಪಾದನೆಗೆ ಗೋಪಾಲನೆ, ಬಟ್ಟೆ ಮತ್ತಿತರ ಅಗತ್ಯಗಳಿಗಾಗಿ ಮತ್ತು ವ್ಯಾಪಾರಕ್ಕೆ ಬದಲಾಗಿ ವಿನಿಮಯಕ್ಕಾಗಿ ಉತ್ಪಾದನೆ ಮಾಡಲು ಖಾದಿ ಗ್ರಾಮೋದ್ಯೋಗಗಳು ಇದ್ದವು.

ಉತ್ಪಾದನಾ ಕಾರ್ಯದಲ್ಲಿ ನಿರತರಾಗಿದ್ದ ಕಾರ್ಯಕರ್ತರ ಅಗತ್ಯಗಳನ್ನು ಪೂರ್ಣವಾಗಿ ಪೂರೈಸಲು ಎಚ್ಚರವಹಿಸಲಾಯಿತು. ಮೂಲ ಶಿಕ್ಷಣ, ಪಶುಪಾಲನೆ, ಆರೋಗ್ಯ ರಕ್ಷಣೆ, ಹಾಗೂ ಸಾಮುದಾಯಕ ಜೀವನ ಇವೂ ಯೋಜನೆಯಲ್ಲಿ ಇದ್ದವು. ಕೆಲಸಗಾರರ ಪ್ರತಿನಿಧಿಗಳ ಮೂಲಕ ಸಮುದಾಯದ ಪ್ರಜಾತಾಂತ್ರಿಕ ನಿರ್ವಹಣೆಯ ಯೋಜನೆಯೂ ಇತ್ತು. ಕುಮಾರಪ್ಪನವರು ಪನ್ನೈ ಆಶ್ರಮದಲ್ಲಿದ್ದಾಗ, ಆಗಿನ ಪ್ರಧಾನಿ ಜವಹರಲಾಲ ನೆಹರೂ ಅಲ್ಲಿಗೆ ಬಂದು ಸ್ವಲ್ಪ ಕಾಲ ಇದ್ದರು. ಅವರಿಗೆ ಕುಮಾರಪ್ಪ ಸ್ವದೇಶಿ ಆದರ ನೀಡಿದರು. ಕುಡಿಯಲು ಪಾನೀಯವಿತ್ತರು. ನೆಹರೂ ಅದನ್ನು ಸವಿಯುತ್ತಿದ್ದರು. ಲೋಟ, ತಟ್ಟೆ ಎಲ್ಲ ಸ್ಥಳೀಯ ಉತ್ಪನ್ನಗಳೇ ಎಂದು ಹೇಳಿದರು ಕುಮಾರಪ್ಪ. ಆ ಪಾನೀಯ ಅಲ್ಲೇ ಬೆಳೆದಿದ್ದ ಅರ್ಜುನ ವೃಕ್ಷದ ಎಲೆ ಮತ್ತು ತೊಗಟೆಯ ಕಷಾಯ, ಅದಕ್ಕೆ ಸೇರಿಸಿದ್ದ ಹಾಲು ಅಲ್ಲಿನದೇ ಗೋಶಾಲೆಯದು. ಸಿಹಿ ಅಲ್ಲಿನ ತಾಳೆಮರದ ನೀರಾ ರಸವನ್ನು ಕುದಿಸಿ ಮಾಡಿದ ಬೆಲ್ಲ. ಆ ಅವಧಿಯಲ್ಲಿ ಕುಮಾರಪ್ಪ

ರಷ್ಯಾ, ಚೀನಾ ಮತ್ತು ಜಪಾನ್‌ಗಳಿಗೆ ಭೇಟಿ ನೀಡಬೇಕಾಯಿತು. ಅವರು ವಾಪಸ್ಸು ಬಂದಾಗ, ಆ ದೇಶದ ಜನ ಹೇಗೆ ತಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಸಮಾಜವಾದದ ರೀತಿಯಲ್ಲಿ ನಿಭಾಯಿಸುತ್ತಿದ್ದುದನ್ನು ನೋಡಿ ತುಂಬ ಉತ್ಸಾಹಿತರಾಗಿದ್ದರು. ಅನಂತರದ ತಮ್ಮ ಭಾಷಣಗಳಲ್ಲಿ ಅವರು ಸಮಾಜವಾದ ಮತ್ತು ಸಾಮ್ಯವಾದದ ಸಿದ್ಧಾಂತಗಳನ್ನು ಟೀಕಿಸಿದರೂ, ಆ ದೇಶಗಳು ತಮ್ಮ ಸಂಪನ್ಮೂಲಗಳನ್ನು ನಿಭಾಯಿಸುತ್ತಿದ್ದ ರೀತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸ್ಥಳೀಯ ಸಮಾಜವಾದಿ ಮತ್ತು ಸಾಮ್ಯವಾದಿ ನಾಯಕರಲ್ಲಿ ಕೆಲವರು ಆ ದೇಶಗಳ ಬಗ್ಗೆ ಕುಮಾರಪ್ಪನವರ ಅಭಿಪ್ರಾಯವನ್ನು ಮೆಚ್ಚಿಕೊಂಡರು. ಆದರೆ ಸರ್ವ ಸೇವಾ ಸಂಘದ ಕೆಲವರು ಮೆಚ್ಚಲಿಲ್ಲ. ಅವರನ್ನು ಗಾಂಧೀ ಕಮ್ಯೂನಿಸ್ಟ್ ಎಂದು ಕರೆದರು. ತತ್ಪರಿಣಾಮವಾಗಿ, ಕುಮಾರಪ್ಪನವರ ಒಂದು ಲಕ್ಷ ರೂಪಾಯಿ ಸಹಾಯಧನ ಸೇರಿದ್ದ ಆಯವ್ಯಯ ಅಂದಾಜಿಗೆ ಆ ಟೀಕಾಕಾರರ ಬೆಂಬಲ ಸಿಗಲಿಲ್ಲ. ಈ ವಿರೋಧಕ್ಕೆ ಇನ್ನೊಂದು ಕಾರಣ, ಕುಮಾರಪ್ಪನವರು ಕೆಲಸಗಾರರಿಗೆ ನಗದು ವೇತನ ಕೊಡುತ್ತಿರಲಿಲ್ಲ. ಅವರ ಅಗತ್ಯಗಳ ಪೂರೈಕೆಯ ರೂಪದಲ್ಲಿ ಕೊಡುತ್ತಿದ್ದರು. ಇತರ ವೆಚ್ಚಗಳಿಗಾಗಿ ತಿಂಗಳಿಗೆ ಐದು ರೂಪಾಯಿ ಮಾತ್ರ ನಗದು ಕೊಡುತ್ತಿದ್ದರು. ಇದರಿಂದಾಗಿ ಕುಮಾರಪ್ಪನವರಿಗೆ ಸಾಕಷ್ಟು ಮಂದಿ ಕೆಲಸಗಾರರು ಸಿಗಲಿಲ್ಲ. ಮೂರನೆಯ ಅನಾನುಕೂಲವೆಂದರೆ, ಹಳ್ಳಿಯ ಸುತ್ತ ಬಂಡೆ ಕಾಡು ಇದ್ದವು. ಮಲೇರಿಯಾ ಆವರಿಸಿತ್ತು.

ಕೃಷ್ಣ ಚಂದ್ರ ದುಬೆ ಎಂಬ ಒಬ್ಬ ಕಾರ್ಯಕರ್ತ ಮಲೇರಿಯಾ ಬಂದು ಸತ್ತುಹೋದ. ಕುಮಾರಪ್ಪನವರಿಗೆ ಪಾರ್ಶ್ವವಾಯು ಆಯಿತು. ಆದರೂ ಪನ್ನೈ ಆಶ್ರಮದ ಕೆಲಸದಲ್ಲಿ ಆಸಕ್ತಿ ವಹಿಸುತ್ತಲೇ ಇದ್ದರು. ಮುಂದೆ ಅವರಿಗೆ ಹೃದಯಾಘಾತವಾಯಿತು. ವೈದ್ಯರು ಪೂರ್ಣ ವಿಶ್ರಾಂತಿಯನ್ನು ಸಲಹೆ ಮಾಡಿದರು. 1964ರಲ್ಲಿ ಅವರು ಸೇವಾಗ್ರಾಮದಲ್ಲಿದ್ದ ಹಿಂದೂಸ್ತಾನಿ ತಾಲಿಮಿ ಸಂಘಕ್ಕೆ ಪನ್ನೈ ಆಶ್ರಮದ ಉಸ್ತುವಾರಿಯನ್ನು ವಹಿಸಿಕೊಟ್ಟರು. ವಹಿಸಿಕೊಡುವ ಸಮಯದಲ್ಲಿ ಅವರು ಹೀಗೆ ಬರೆದರು. "ಈ ತೆರದ ಕೆಲಸವನ್ನು ಯುವಜನ ವಹಿಸಿಕೊಳ್ಳಬೇಕು. ಇದು ನನ್ನ ಮನದಾಳದ ಆಸೆ. ಇಂತಹ ಕಾರ್ಯದ ಮೂಲಕವಷ್ಟೆ ನಾವು ಅಹಿಂಸಾತ್ಮಕ ಸಮಾಜವನ್ನು ಸ್ಥಾಪಿಸುವುದು ಸಾಧ್ಯ. ಶೋಷಣೆಗೆ ಬದಲಾಗಿ ಶಾಂತಿ ಸಹಕಾರ ಸದ್ಭಾವನೆ ಇರುವ ಈ ಬಗೆಯ ಜೀವನಶೈಲಿಯನ್ನು ನಾವು ಅರಸಬೇಕು. ಹಿಂಸೆ ನಮ್ಮ ಸಮಸ್ಯೆಗಳನ್ನು ಎಂದಿಗೂ ಪರಿಹರಿಸಲಾರದು." ಅದೇ ಹೆಚ್ಚು ಕಡಿಮೆ ಪನ್ನೈ ಆಶ್ರಮದ ಕೊನೆ.

ಮಗನವಾಡಿಯಲ್ಲಿ ಗ್ರಾಮೋದ್ಯೋಗ ನಯಿತಾಲಿಂ ತರಬೇತಿ ಪಡೆಯುತ್ತಿದ್ದ ನಾವು ಕೆಲವರಿಗೆ, ತಂಡ-ತಂಡವಾಗಿ ಪನ್ನೈ ಆಶ್ರಮದಲ್ಲಿ ಕೆಲವು ದಿನ ಇರುವ ಭಾಗ್ಯ ದೊರಕಿತ್ತು.

ನಾವು ಕುಮಾರಪ್ಪ ತೋರಿದ ಹಾದಿಯಲ್ಲಿದ್ದೇವೆಯೇ ?

ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳು ಶ್ರೀಮಂತವಾಗಿವೆ. ಅಭಿವೃದ್ಧಿ ಹೊಂದಿದವಾಗಿವೆ. ನಾವೂ ಪಾಶ್ಚಿಮಾತ್ಯ ಆರ್ಥಿಕ ಅಭಿವೃದ್ಧಿ ಮಾದರಿಯನ್ನೇ ಅನುಕರಿಸಬೇಕು ಎನ್ನುವುದು ನಮ್ಮ ಯೋಜಕರು, ಸರ್ಕಾರ, ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಅನೇಕ ಜನರ ಅಭಿಮತ, ಆದರೆ ಅವರೆಲ್ಲ ಒಂದು ವಿಷಯವನ್ನು ಲಕ್ಷಿಸುವುದಿಲ್ಲ. ಏನೆಂದರೆ ಬ್ರಿಟನ್,

ಅಮೆರಿಕ, ಮುಂತಾದ ದೇಶಗಳು ಶ್ರೀಮಂತವಾದದ್ದು ಇತರ ವಸಾಹತುಗಳ ಶೋಷಣೆ ಮಾಡಿ. ಎರಡನೆಯ ವಿಶ್ವಯುದ್ಧ ಮುಗಿದ ಹಿಂದೆಯೇ ಭಾರತ ಸ್ವಾತಂತ್ರ್ಯ ಗಳಿಸಿತು. ಗ್ರಾಮೀಣ ಆರ್ಥಿಕತೆಯ ಆಧಾರವಿರುವ ಶೋಷಣಾ ರಹಿತ ಅರ್ಥವ್ಯವಸ್ಥೆಯನ್ನು ಭಾರತ ಅನುಸರಿಸಬೇಕು ಎಂಬುದು ಸ್ವಾತಂತ್ರ್ಯ ಹೋರಾಟದ ನೇತಾರ ಗಾಂಧೀಜಿಯ ಇಚ್ಛೆ. ಆದರೆ ಅಭಿವೃದ್ಧಿ ಕಾರ್ಯವನ್ನು ನಿಯಂತ್ರಿಸುತ್ತಿದ್ದ ನಮ್ಮ ನಾಯಕರು, ನಮ್ಮ ಯೋಜಕರು ಪಾಶ್ಚಿಮಾತ್ಯ ಮಾದರಿಗೆ ಮರುಳಾದರು. ಅವರು ಗಾಂಧೀಜಿ ಮತ್ತು ಕುಮಾರಪ್ಪ ತೋರಿದ ಹಾದಿಯನ್ನು ಹಿಡಿಯಲಿಲ್ಲ. ನಾವು ತಪ್ಪು ದಾರಿ ಹಿಡಿದುದರ ಫಲವನ್ನು ಅನುಭವಿಸುತ್ತಿದ್ದೇವೆ. ಶ್ರೀಮಂತರಿಂದ ಬಡವರ ಶೋಷಣೆ ನಡೆದಿದೆ. ಶ್ರೀಮಂತರ ಶ್ರೀಮಂತಿಕೆ ಹೆಚ್ಚುತ್ತಿದೆ. ಬಡವರ ಬಡತನ ಹೆಚ್ಚುತ್ತಿದೆ.

ನಮ್ಮ ಜನಕ್ಕೆ ಉದ್ಯೋಗ ಒದಗಿಸಬಲ್ಲ ಎರಡು ಮೂಲಗಳು ಕೃಷಿ ಮತ್ತು ಕೈಗಾರಿಕೆ. ಹಳ್ಳಿಗಾಡಿನ ಜನಕ್ಕೆ ಅತಿ ಹೆಚ್ಚು ಉದ್ಯೋಗ ಒದಗಿಸುತ್ತಿರುವುದು ಕೃಷಿ. ಆಹಾರದ ವಿಷಯದಲ್ಲಿ ಸ್ವಯಂಪೂರ್ಣವಾಗುವುದು ನಮ್ಮ ದೇಶದ ಗುರಿ. ಇದು ಕೃಷಿಯಿಂದ ಸಾಧ್ಯ. ಸ್ವಾತಂತ್ರ್ಯದ ನಂತರ, ಇದನ್ನು ಸಾಧಿಸಲು ದೇಶ ಭಾರೀ ಪ್ರಯತ್ನ ಮಾಡಿತು. ನೀರಾವರಿ ಒದಗಿಸಲು ಭಾರೀ ಆಣೆಕಟ್ಟುಗಳನ್ನು ಕಟ್ಟಲಾಯಿತು. ಹೊಸಬಗೆಯ ಅಧಿಕ ಉತ್ಪಾದಕ ಬೀಜಗಳನ್ನು ತರಲಾಯಿತು. ಆದರೆ ಇವೆಲ್ಲ ವಿರುದ್ಧ ದಿಕ್ಕಿನಲ್ಲಿ ಸಾಗಿತು. ದುಷ್ಪರಿಣಾಮ ಉಂಟುಮಾಡಿತು. ಉದಾಹರಣೆಗೆ ನೀರಾವರಿ ಕಾಲುವೆಗಳ ಅಧಿಕ ಜಲ ಶೀತ ಮರುಭೂಮಿಯನ್ನು ಸೃಜಿಸಿತು. ಇದರ ಫಲವಾಗಿ ಕ್ಷಾರೀಕರಣ ಮತ್ತು ಜಲಸಂಗ್ರಹಣ ಉಂಟಾಯಿತು.

ಇದರಿಂದಾಗಿ ನೀರಾವರಿಗೆ ತಂದ ಭೂಮಿಯಷ್ಟೇ ಪ್ರಮಾಣದ ಭೂಮಿ ಬಂಜರಾಗತೊಡಗಿತು. ಭಾರಿ ಆಣೆಕಟ್ಟುಗಳ ಇನ್ನೊಂದು ಪರಿಣಾಮವೆಂದರೆ, ಆ ಪ್ರದೇಶದಲ್ಲಿ ವಾಸಿಸುತ್ತಿದ್ದ ದೊಡ್ಡ ಸಂಖ್ಯೆಯ ಜನರ ಎತ್ತಂಗಡಿ. ಕಾಡುಗಳನ್ನು ನಾಶಮಾಡಿ, ಪರಿಸರ ಅಸಮತೋಲನಕ್ಕೆ ಎಡೆ ಮಾಡಿದೆವು.

1946-50ರಲ್ಲಿ ಕುಮಾರಪ್ಪನವರು ಕೃಷಿ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಆಗ ಅವರ ಪ್ರವಾಸಗಳಲ್ಲಿ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿನ ಈ ಎಲ್ಲ ನ್ಯೂನತೆಗಳನ್ನು ಅವರು ಕಂಡುಕೊಂಡಿದ್ದರು. ವಿಕೇಂದ್ರೀಕರಣವೇ ಎಲ್ಲ ಸಮಸ್ಯೆಗಳಿಗೂ ಪರಿಹಾರ. ಆದ್ದರಿಂದ ಕುಮಾರಪ್ಪನವರು ಮೇಲುಮಟ್ಟದ ಜಲಪ್ರವಾಹವನ್ನು ತಡೆಯಲು ಭಾರಿ ಆಣೆಕಟ್ಟುಗಳಿಗೆ ಬದಲಾಗಿ, ಒಡ್ಡುಗಳನ್ನು ತಡೆಗಟ್ಟೆಗಳನ್ನು ಕಟ್ಟುವುದು ಉತ್ತಮ ಎಂದು ಸಲಹೆ ಮಾಡಿದರು. ನೀರಾವರಿಯಲ್ಲಿ ವಿಕೇಂದ್ರೀಕರಣ ಇರಬೇಕು. ಎಂದರು. ಪ್ರಾರಂಭದ ಹಂತದಲ್ಲೇ ನೀರಿನ ಹರಿವನ್ನು ನಿಯಂತ್ರಿಸಿದರೆ, ಮಣ್ಣಿನ ತಂಪನ್ನು ರಕ್ಷಿಸಬಹುದು ಎನ್ನುವುದು ಅವರ ವಿಚಾರ. ಆದರೆ ಕುಮಾರಪ್ಪನವರ ಈ ಸಲಹೆಯನ್ನು ಅನುಸರಿಸಲಿಲ್ಲ. ಕಾರಣ ಪ್ರಾಯಶಃ ಅದರಿಂದ ಗುತ್ತಿಗೆದಾರರ ಮತ್ತು ಮಧ್ಯವರ್ತಿಗಳ ಜೇಬು ತುಂಬುವುದಿಲ್ಲ. ಎಂದೋ ಏನೋ. ಈಗ ಇಡೀ ಜಗತ್ತಿಗೆ ಸಮಸ್ಯೆ ಅರ್ಥವಾಗುತ್ತಿದೆ.

ಕೃಷಿ ಉತ್ಪಾದನೆಯ ಹೆಚ್ಚಳಕ್ಕೆ ಅನುಸರಿಸಿದ ಇನ್ನೊಂದು ಮಾರ್ಗ ರಾಸಾಯನಿಕ ಗೊಬ್ಬರಗಳ ಬಳಕೆ, ಇದನ್ನು ಗಾಂಧೀಜಿ, ಕುಮಾರಪ್ಪ ಇಬ್ಬರೂ ವಿರೋಧಿಸಿದರು.

ಅವರ ಪ್ರಕಾರ ರಾಸಾಯನಿಕ ಗೊಬ್ಬರಗಳು ಮೇಲುಮಣ್ಣಿನ ರಾಸಾಯನಿಕತೆಯನ್ನು ಜೈವಿಕತೆಯನ್ನು ಬುಡಮೇಲು ಮಾಡುತ್ತವೆ. ಇದಕ್ಕೆ ಬದಲಾಗಿ, ಸಾವಯವ ಗೊಬ್ಬರಗಳನ್ನು ಉಪಯೋಗಿಸಿದರೆ, ಬೆಳೆಗೂ ಸಹಾಯಕ, ರೋಗಗಳಿಗೂ ನಿರೋಧಕ. ರಾಸಾಯನಿಕ ಗೊಬ್ಬರ ಬಳಸಿದಾಗ ಕ್ರಿಮಿನಾಶಕ ಅನಿವಾರ್ಯವಾಗುತ್ತದೆ. ಸಾವಯವ ಗೊಬ್ಬರಗಳ ಈ ಸಕಾರಾತ್ಮಕ ಫಲಿತಾಂಶಗಳನ್ನು ನಿರ್ಲಕ್ಷಿಸಲಾಗಿದೆ. ಕಾರಣ, ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಹಳ್ಳಿಗಳ ಹಣ ಪಟ್ಟಣಕ್ಕೆ ಹರಿಯುತ್ತದೆ. ಉದ್ಯೋಗಪತಿಗಳ ಖಜಾನೆ ತುಂಬುತ್ತದೆ.

ಮಾಡುತ್ತಿರುವ ಮೂರನೆಯ ತಪ್ಪು ಎಂದರೆ, ಅಧಿಕ ಉತ್ಪತ್ತಿಯ ರೀತಿಯ ಬೀಜಗಳ ಬಳಕೆ. ಈ ಅಧಿಕ ಉತ್ಪಾದನೆಯ ಬೀಜಗಳಿಗೆ ಹೇರಳ ನೀರು ಬೇಕು. ರಾಸಾಯನಿಕ ಗೊಬ್ಬರಗಳು ಔಷಧಗಳು ಅಗತ್ಯ. ಇದರಿಂದ ರೈತ ಪೇಟೆ ನಗರಗಳನ್ನು ಅವಲಂಬಿಸಬೇಕಾಗುತ್ತದೆ. ಈ ಕೃತಕ ಬೀಜಗಳನ್ನು ತಯಾರಿಸಿ ಒದಗಿಸುವ ವ್ಯಾಪಾರಿ ಹಿತಾಸಕ್ತಿಗಳಿಗೆ ಅಡಿಯಾಳಾಗಬೇಕಾಗುತ್ತದೆ. ಇದೆಲ್ಲದರ ಪರಿಣಾಮ ಕೈಗಾರಿಕೋದ್ಯಮಿಗಳ ಹಾಗೂ ವ್ಯಾಪಾರಿಗಳ ಲಾಭಕ್ಕಾಗಿ, ಜೈವಿಕ ವೈವಿಧ್ಯತೆಯ ನಾಶ ಹಾಗೂ ರೈತರ ಹಿತಾಸಕ್ತಿಗಳಿಗೆ ಧಕ್ಕೆ.

ಕೃಷಿ ಕ್ಷೇತ್ರದ ಕಾಯಿಲೆ. ಇಲ್ಲಿಗೆ ಕೊನೆಗಾಣದು. ಎತ್ತಿನಿಂದ ನಡೆಸುತ್ತಿದ್ದ ಉಪಕರಣಗಳ ಸ್ಥಾನದಲ್ಲಿ ಟ್ರಾಕ್ಟರುಗಳನ್ನು ಬಳಸುವುದು ಕೂಡ ಹಳ್ಳಿಗಾಡಿನ ಜನಕ್ಕೆ ಸಮಸ್ಯೆಯನ್ನು ಉಂಟುಮಾಡಿದೆ. ಸಹಾಯಧನ (ಸಬ್ಸಿಡಿ) ಹಾಗೂ ವಿದೇಶಿ ವಿನಿಮಯದ ಸಲುವಾಗಿ ರಾಷ್ಟ್ರದ ಬೊಕ್ಕಸಕ್ಕೆ ನಷ್ಟ ಆಗುತ್ತಿದೆ.

ಇದೆಲ್ಲವನ್ನೂ ಜೆ. ಸಿ. ಕುಮಾರಪ್ಪ ವಿರೋಧಿಸಿದರು. ಪೆಟ್ರೋಲು ಉತ್ಪನ್ನಗಳ ಬಳಕೆಯನ್ನು ಮತ್ತು ಆ ಉತ್ಪನ್ನಗಳು ಅಗತ್ಯವಾದ ಎಲ್ಲ ಯಂತ್ರಗಳ ಬಳಕೆಯನ್ನು ಅವರು ವಿರೋಧಿಸಿದರು. ಹಿಂದೆಯೇ ಹೇಳಿದಂತೆ, ಅಂಥ ಆರ್ಥಿಕತೆಯನ್ನು ಅವರು ಬಕೆಟ್ ಆರ್ಥಿಕತೆ ಎಂದರು. ತಪ್ಪು ದಾರಿಯಲ್ಲಿ ನಡೆದುದರ ಫಲವಾಗಿ, ನಮ್ಮ ಪ್ರಾಚೀನವಾದ ಎತ್ತಿನ ಆರ್ಥಿಕತೆ ಛಿದ್ರವಾಗಿದೆ. ಪಶು-ಮಾನವ ಆರ್ಥಿಕತೆ ಲಾಭದಾಯಿಕವಾಗಿತ್ತು. ಅದಕ್ಕೇ ನಮ್ಮ ಪೂರ್ವಜರು ಅದನ್ನು ಅನುಸರಿಸಿದ್ದುದು. ಪಶುಗಳು, ಮನುಷ್ಯರೂ ಕೃಷಿ ಉತ್ಪತ್ತಿಯ ಬೇರೆ ಬೇರೆ ಭಾಗಗಳನ್ನು ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಪಶು ಚಾಲನ ಬಲ ಒದಗಿಸುವುದರ ಜೊತೆಗೆ ಗೊಬ್ಬರವನ್ನು ಒದಗಿಸುತ್ತಿತ್ತು.

ಇನ್ನೊಂದು ಸಂಪನ್ಮೂಲ ಕೈಗಾರಿಕೋದ್ಯಮ, ವಿಶೇಷತಃ ಕೃಷಿ ಆಧಾರಿತ ಕೈಗಾರಿಕೆಯನ್ನು ಹೇಗೆ ನಡೆಸಲಾಗುತ್ತಿದೆಯೋ ಈಗ ನೋಡೋಣ. ಸ್ವಾತಂತ್ರ್ಯಕ್ಕೆ ಮೊದಲು, ಸಾಮ್ರಾಜ್ಯಶಾಹಿ ಶಕ್ತಿಗಳು ನಮ್ಮ ಕಚ್ಚಾ ವಸ್ತುಗಳನ್ನು ಸಂಸ್ಕರಣೆಗಾಗಿ ತಮ್ಮ ದೇಶಗಳಿಗೆ ರಫ್ತು ಮಾಡುತ್ತಿದ್ದವು. ಮತ್ತು ತಮ್ಮ ದುಬಾರಿ ಉತ್ಪನ್ನಗಳಿಗೆ ಭಾರತವನ್ನು ಸುರಕ್ಷಿತ ಮಾರುಕಟ್ಟೆಯಾಗಿ ಮಾಡಿಕೊಂಡಿದ್ದವು. ಇದು ಭಾರತ ವಸಾಹತು ಆದಾಗಿನ ಮಾತು. ಆದರೆ ಸ್ವಾತಂತ್ರ್ಯ ಪಡೆದ ನಂತರ, ಈ ಕಚ್ಚಾ ವಸ್ತುಗಳ ರಫ್ತನ್ನು ತಯಾರಿಸಿದ ಉತ್ಪನ್ನಗಳ ಆಮದನ್ನು ತಡೆದು, ಈ ಪರಿಸ್ಥಿತಿಯನ್ನು ಸರಿಪಡಿಸಬೇಕಾದ್ದು ಸಹಜವಾಗಿತ್ತು. ಆದರೆ ಅದೂ ಆಗಲಿಲ್ಲ. ನಾವು ಪಾಶ್ಚಿಮಾತ್ಯರ ಮಾದರಿ ಹಿಡಿದೆವು. ಅದರ ಕಹಿಫಲ

ಅನುಭವಿಸುತ್ತಿದ್ದೇವೆ. ನಾವು ಗಾಂಧೀಜಿ - ಕುಮಾರಪ್ಪ ತೋರಿದ ದಾರಿಯಲ್ಲಿ ನಡೆಯಲಿಲ್ಲ. ನಾವು ಅನುಸರಿಸಿದ ಕೇಂದ್ರೀಕೃತ ಉತ್ಪಾದನಾ ವಿಧಾನ ಅಗತ್ಯವಿರುವ ಜನರ ಉದ್ಯೋಗಗಳನ್ನು ಕಸಿದುಕೊಳ್ಳುತ್ತಿದೆ. ಬಲ್ಲಿದರ ಬಲವನ್ನು ಹೆಚ್ಚಿಸುತ್ತಿದೆ. ಬಡವರ ಬವಣೆಯನ್ನು ಹೆಚ್ಚಿಸುತ್ತಿದೆ. ಇಂದು ನಮ್ಮ ಮುಂದೆ ಒಂದು ಇಬ್ಬಂದಿ ನಿಂತಿದೆ. ಜಗತ್ತಿನ ಮುಂದುವರಿದ ಕೈಗಾರಿಕಾ ರಾಷ್ಟ್ರಗಳಲ್ಲಿ ಭಾರತವೂ ಒಂದು ಎನಿಸಿಕೊಂಡಿದೆ. ಆದರೂ ಬಡತನದ ಸಮಸ್ಯೆ ಇದಿರಿಗೆ ನಿಂತೇ ಇದೆ. ನಮ್ಮ ಬಡವರು ಅಂದರೆ ನಿರುದ್ಯೋಗಗಳ ಸಂಖ್ಯೆ ಹಾಗೂ ತಮ್ಮ ಅಲ್ಪಗಳಿಕೆಯಿಂದ ಬದುಕಲಾರದವರ ಸಂಖ್ಯೆ ಜಗತ್ತಿನಲ್ಲೇ ಅತ್ಯಧಿಕ. ಇದರ ಕಾರಣವನ್ನು ನಾವು ಸಮಚಿತ್ತದಿಂದ ವಿಶ್ಲೇಷಿಸಿದಲ್ಲಿ ನಮಗೆ ಗೊತ್ತಾಗುತ್ತದೆ. ದೋಷ ಇರುವುದು ನಾವು ಕುಮಾರಪ್ಪ ತೋರಿದ ದಾರಿಯಲ್ಲಿ ನಡೆಯದೆ ಇದ್ದುದು ಎಂದು. ಯಾವ ಉತ್ಪಾದನಾ ವಿಧಾನದಲ್ಲಿ, ವಿತರಣೆಯ ನ್ಯಾಯ ಇರುವುದೋ, ಪ್ರಕೃತಿಗೆ ಏರುಪೇರು ಆಗುವುದಿಲ್ಲವೋ, ಪರಿಸರ ಸಮತೋಲನ ವ್ಯತ್ಯಾಸವಾಗುವುದಿಲ್ಲವೋ, ಅಂತಹ ವಿಧಾನವನ್ನು ಭಾರತ ಅನುಸರಿಸಬೇಕು. ಎಂದು ಕುಮಾರಪ್ಪ ಬಯಸಿದರು. ಅವರು ಎಂದೂ ವಿಜ್ಞಾನ-ತಂತ್ರಜ್ಞಾನಗಳ ವಿರೋಧಿ ಆಗಿರಲಿಲ್ಲ. ಆದರೆ ಅವರು ಬಯಸಿದ್ದು, ಪ್ರಕೃತಿಸ್ನೇಹಿಯಾದ ಉತ್ಪಾದನಾ ವಿಧಾನಕ್ಕೆ ಸೂಕ್ತವಾಗಿ ವಿಜ್ಞಾನ-ತಂತ್ರಜ್ಞಾನಗಳ ಬಳಕೆಯನ್ನು. ಬಂಡವಾಳದ ಅಗತ್ಯವನ್ನು ಕಡಿಮೆ ಮಾಡುವ ಹಾಗೂ ಇಂಧನದ ಅಗತ್ಯವನ್ನು ಇಳಿಸುವ, ಜೊತೆ-ಜೊತೆಗೆ ಹೆಚ್ಚು ಹೆಚ್ಚು ಜನಕ್ಕೆ ಉದ್ಯೋಗಾವಕಾಶಗಳನ್ನು ಒದಗಿಸುವ ಮಾದರಿಯಲ್ಲಿ ವಿಜ್ಞಾನ-ತಂತ್ರಜ್ಞಾನಗಳ ಬಳಕೆಯನ್ನು ಬಯಸಿದರು.

ಆದರೆ ನಮ್ಮ ದುರಾಸೆ ನಮ್ಮನ್ನು ವಿರುದ್ಧ ದಿಸೆಯಲ್ಲಿ ನಡೆಸಿದೆ. ನಮ್ಮನ್ನು ಕೇಂದ್ರೀಕೃತ ಉತ್ಪಾದನಾ ಮಾದರಿಯತ್ತ ಎಳೆದೊಯ್ಯುತ್ತಿದೆ.

ಭೂಗರ್ಭ ಇಂಧನಗಳಂಥ ನೈಸರ್ಗಿಕ ಸಂಪನ್ಮೂಲಗಳನ್ನು ದಿಕ್ಕಾಪಾಲಾಗಿ ಬರಿದು ಮಾಡಲಾಗುತ್ತಿದೆ. ಇದರಿಂದ ವಾತಾವರಣದ ಬಿಸಿ ಏರುತ್ತಿದೆ. ಭೂಗರ್ಭ ಇಂಧನಗಳು ಹೊರಚೆಲ್ಲುವ ಇಂಗಾಲದ ಡೈ ಆಕ್ಸೈಡ್‌ನಿಂದಾಗಿ ಉಂಟಾಗುತ್ತಿರುವ ಜಾಗತಿಕ ಉಷ್ಣತೆ ಮನುಕುಲಕ್ಕೆ ಅಪಾರ ಅಪಾಯವನ್ನು ಒಡ್ಡುತ್ತಿದೆ. ನಾವು ಪ್ರಕೃತಿಗೆ ವಿರೋಧವಾಗಿ ಸಾಗುತ್ತಿದ್ದೇವೆ. ಪ್ರಕೃತಿ ಭೂ-ಕಂಪನಗಳ ರೂಪದಲ್ಲಿ ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆ. ಭೂಗೋಳದ ತಾಪಮಾನ 0.6 - 07 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಹೆಚ್ಚಿದೆ. ಜಾಗತಿಕ ಉಷ್ಣತೆ, ಅತಿರೇಕದ ಹವಾ ಪರಿಸ್ಥಿತಿಗಳನ್ನು ಹೆಚ್ಚಿಸುತ್ತಿದೆ. ಉಷ್ಣಾತಿರೇಕದ ದಿನಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ. ಜಾಗತಿಕ ಉಷ್ಣತೆ ಗಂಭೀರ ಸಮಸ್ಯೆ. ಜಾಗತಿಕ ಪ್ರಮಾಣದಲ್ಲಿ ಅದನ್ನು ಎದುರಿಸಬೇಕು. ಅದಕ್ಕೆ ಭಾರತವೂ ತನ್ನ ಕೊಡುಗೆ ನೀಡಬೇಕು. ಪೆಟ್ರೋಲು, ಕಲ್ಲಿದ್ದಲು ಇತ್ಯಾದಿ ಭೂಗರ್ಭ ಇಂಧನಗಳ ಬಳಕೆಗೆ ಕಡಿವಾಣ ಹಾಕಬೇಕು. ಸೂರ್ಯಶಕ್ತಿ, ವಾಯುಶಕ್ತಿ, ಜಲಶಕ್ತಿ ಇತ್ಯಾದಿ ಪರ್ಯಾಯ ಶಕ್ತಿಗಳನ್ನು ಬಳಸಬೇಕು. ಕುಮಾರಪ್ಪ ಸೂಚಿಸಿದ್ದು, ಆಚರಿಸಿದ್ದು ಇದನ್ನೇ. ನಾವು ನಮ್ಮ ದಿಕ್ಕನ್ನು ಬದಲು ಮಾಡಬೇಕು. ಕೊಳ್ಳುಬಾಕತನ, ಖನಿಜಗಳು ಮತ್ತು ಭೂಗರ್ಭ ಇಂಧನಗಳ

ಬಳಕೆ ಮತ್ತು ಜೈವಿಕ ವೈವಿಧ್ಯತೆಯ ನಾಶ ಇದೆಲ್ಲಕ್ಕೂ ನಿಯಂತ್ರಣ ಹಾಕುವತ್ತ ಮುನ್ನಡೆಯಬೇಕು.

ನಮ್ಮ ಜನಸಂಖ್ಯೆಯ ಸುಮಾರು ಶೇ 75 ರಷ್ಟು ಮಂದಿ ಇರುವುದೇ ಹಳ್ಳಿಗಳಲ್ಲಿ. ಬೇಸಾಯವೇ ಅವರಿಗೆ ಮುಖ್ಯ ಸಂಪಾದನಾ ಮಾರ್ಗ. ಕೃಷಿ ಋತುವಿಗೆ ಸೀಮಿತವಾದದ್ದು. ಕೃಷಿ-ಕಾರ್ಯ ಇಲ್ಲದಿರುವಾಗ, ಅವರಿಗೆ ಬೇರೊಂದು ಆದಾಯಮೂಲ ಅಗತ್ಯ. ತಮ್ಮದೇ ಭೂಮಿಯಲ್ಲಿ ತಾವು ಉತ್ಪಾದಿಸುವ ಕಚ್ಚಾವಸ್ತುಗಳನ್ನು ಪರಿಷ್ಕರಿಸಿದರೆ ಇದು ಸಾಧ್ಯ. ಕೃಷಿ ಮತ್ತು ಗ್ರಾಮೋದ್ಯೋಗದ ಜೋಡಣೆ ಇದೇ. ಆದ್ದರಿಂದಲೇ ಗಾಂಧೀಜಿ ಮತ್ತು ಕುಮಾರಪ್ಪನವರು ವಿಕೇಂದ್ರೀಕೃತ ಉತ್ಪಾದನಾ ವಿಧಾನವನ್ನು ಪ್ರತಿಪಾದಿಸಿದ್ದು. ವಿಕೇಂದ್ರೀಕೃತ ಉತ್ಪಾದನೆ ಗ್ರಾಮೀಣ ಜನರನ್ನು ಎತ್ತಂಗಡಿ ಮಾಡುವುದಿಲ್ಲ. ಅದು ನಮ್ಮ ಪ್ರಾಚೀನ ಸಂಸ್ಕೃತಿಗೆ ಹೊಂದಿಕೊಳ್ಳುವಂಥದು. ನಮ್ಮ ಗ್ರಾಮೋದ್ಯೋಗಗಳ ದಕ್ಷತೆಯನ್ನು ಉತ್ತಮಪಡಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದು. ನಮ್ಮ ನಿತ್ಯದ ಅವಶ್ಯಕತೆಗಳ ಪೂರೈಕೆಗೆ ನಾವು ವಿಕೇಂದ್ರೀಕೃತ ಉತ್ಪಾದನೆಯನ್ನೇ ಅನುಸರಿಸಬೇಕು. ವರ್ಧಾದಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘದಲ್ಲಿ ಇದನ್ನು ಸಾಬೀತು ಮಾಡಿ ತೋರಿಸಿದರು ಕುಮಾರಪ್ಪ. ದುರದೃಷ್ಟವಶಾತ್, ನಮ್ಮ ಅರ್ಥವ್ಯವಸ್ಥೆ, ನಮ್ಮ ಯೋಗಕ್ಷೇಮ ಎಲ್ಲವನ್ನು ಪಟ್ಟಭದ್ರ ವ್ಯಾಪಾರೀ ಹಿತಾಸಕ್ತಿಗಳು, ಬಂಡವಾಳಷಾಹಿಗಳು ಮತ್ತು ಉದ್ಯಮಪತಿಗಳು ಅಪಹರಣಮಾಡಿ, ನಮ್ಮನ್ನು ನಾಶ ಮಾಡುತ್ತಿದ್ದಾರೆ. ಇದು ನಮ್ಮ ಜನಸ್ತೋಮವನ್ನು ದಾರಿದ್ರ್ಯ, ಅನಕ್ಷರತೆ ಮತ್ತು ಅನಾರೋಗ್ಯದ ಕೂಪಕ್ಕೆ ತಳ್ಳುತ್ತಿದೆ. ಭಾರತದ ಕೈಗಾರಿಕಾ ನೀತಿ ಪೂರಾ ಬದಲಾಗಬೇಕು. ಪಾಶ್ಚಿಮಾತ್ಯ ಶ್ರೀಮಂತ ರಾಷ್ಟ್ರಗಳ ಬಿಗಿಮುಷ್ಟಿಯಲ್ಲಿರುವ ವಿಶ್ವ ಮಾರುಕಟ್ಟೆಯಲ್ಲಿ ಪೈಪೋಟಿಗೆ ನಿಲ್ಲುವುದು ನಮ್ಮ ಗುರಿ ಆಗಬಾರದು.

ಗಾಂಧೀಜಿ ಮತ್ತು ಕುಮಾರಪ್ಪ ತೋರಿದ ಹಾದಿಯಲ್ಲಿ ನಾವು ನಡೆಯೋಣ.

ಜೆ. ಸಿ. ಕುಮಾರಪ್ಪನವರ ಗ್ರಂಥಗಳು

BOOKS WRITTEN BY J.C. KUMARAPPA

1) Why the Village Movement?
2) Non-violent Economy and the World Peace
3) Economy of Permanence – Part I & II
4) Gandhian Economy and other essays
5) Lessons from Europe
6) Philosophy of work and other essays
7) An overall plan for Rural Development
8) Organisation and Accounts of Relief work
9) Peace and Prosperity
10) Our Food Problem
11) Present Economic Situation
12) The cow in our Economy
13) People's China: What I Saw and Learnt There
14) Science and Progress
15) Stone Walls and Iron Bars
16) The Unitary Basis for a Non-violent Democracy
17) Women and Village Industries
18) Sarvodaya and World Peace
19) Currency Inflation: Its cause and cure
20) Peep Behind the Iron Curtain
21) Swaraj For The Masses
22) Gandhian Economic Thought
23) Clive to Keynes
24) Practice and Precepts of Jesus Christ
25) Planning for the people by the people
26) Blood Money
27) Banishing War
28) A plan for the Economic Development of the N.W.F. Province
29) Survey of Matar Taluka
30) Report on the Financial obligations between Great Britain and India
31) Report of the congress Agrarian Reforms Committee
32) A questionnaire for Rural Survey.
33) Questionnaire for the Survey of Village Industries.
34) Gandhian way of Life
35) Public Finance and our Poverty
36) Christianity, its' Economy & way of Life
37) The Economics of Peace – The Cause and the Man. (About Kumarappa brought out on his 60th Birthday)
38) ಶಾಶ್ವತ ಅರ್ಥಶಾಸ್ತ್ರ (ಅನುವಾದ : ಸಿ. ಕೃಷ್ಣಶರ್ಮ)